ಬೆಂಗಳೂರು ನಗರ ವಿಶ್ವವಿದ್ಯಾಲಯ
BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS

# ಕನ್ನಡ ಭಾಷಾ ಪಠ್ಯ

## ಬಿ.ಎಸ್ಸಿ – ನಾಲ್ಕನೆಯ ಸೆಮಿಸ್ಟರ್

## ೨೦೨೨–೨೩

**ಪ್ರಧಾನ ಸಂಪಾದಕರು**

ಡಾ. ಡಿ. ಡೊಮಿನಿಕ್

**ಕಾರ್ಯನಿರ್ವಾಹಕ ಸಂಪಾದಕರು**

ಡಾ. ಕೆ ವೈ ನಾರಾಯಣ ಸ್ವಾಮಿ

**ಪರಿಶೀಲಕರು**

ಡಾ. ಬೆಳಕೆರೆ ಲಿಂಗರಾಜಯ್ಯ

**ಸಂಪಾದಕರು**

ಪ್ರೊ.ಬೊಮ್ಮೇಗೌಡ

ಡಾ. ಲಕ್ಷ್ಮಿ ಪಿ

ಡಾ. ಪದ್ಮಿನಿ ನಾಗರಾಜು

# ಕನ್ನಡ ಭಾಷಾ ಪಠ್ಯ – ಬಿ.ಎಸ್ಸಿ (ನಾಲ್ಕನೆಯ ಸೆಮಿಸ್ಟರ್)

## ಪರಿವಿಡಿ


### ಭಾಗ ೧ – ವಿವಾಹ

| | | | |
|---|---|---|---|
| ೧ | ಸೀಮಂತಿನಿ (ಕವಿತೆ) | ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ | ೫ |
| ೨ | ಒಂದು ಮೂಗುತಿನ ಕತೆ (ಕತೆ) | ಶಾಂತದೇವಿ ಕಣವಿ | ೭ |
| ೩ | ಕೀಟಪ್ರಿಯರನ್ನು ವರಿಸಿದಾಗ (ಹಾಸ್ಯ ಲೇಖನ) | ಜ್ಯೋತ್ಸ್ನಾ ಕಾಮತ್ | ೧೩ |
| ೪ | ಓದು ಪಠ್ಯ : ನಾನು...... ಕಸ್ತೂರ್ | ಡಾ.ಎಚ್.ಎಸ್.ಅನುಪಮಾ | ೧೮ |

### ಭಾಗ ೨ – ನಿರಂತರತೆ

| | | | |
|---|---|---|---|
| ೧ | ಜಾಜಿ ಮಲ್ಲಿಗೆ | ಸತ್ಯಾನಂದ ಪಾತ್ರೋಟ | ೨೫ |
| ೨ | ೧೯೬೭ – ಚದುರಂಗ | ಚದುರಂಗ | ೨೬ |
| ೩ | ಪ್ರೀತಿ ಕಾರಣವಿಲ್ಲದೆ ಅರಳುವಂತದ್ದು (ಲೇಖನ) | ಜಿಡ್ಡು-ಕೃಷ್ಣಮೂರ್ತಿ,<br>ಅನು; ನಿ.ಮುರಾರಿ ಬಲ್ಲಾಳ | ೩೦ |
| ೪ | ಓದು ಪಠ್ಯ : ಮುಲ್ಲಾ ನಸ್ರುದ್ದೀನ್ ಕಥೆಗಳು (ನೀತಿ ಕಥೆಗಳು) | ಸಂಗ್ರಹ & ಅನು : ಡಾ.ಜೆ.ಬಾಲಕೃಷ್ಣ | ೩೩ |

### ಭಾಗ ೩ – ಸ್ಮಾರಕಗಳು

| | | | |
|---|---|---|---|
| ೧ | ಸೋಮನಾಥಪುರ (ಕವಿತೆ) | ಕುವೆಂಪು | ೩೬ |
| ೨ | ಟೈಟಾನಿಕ್ ದುರಂತ (ವಿಶ್ವ ವಿಸ್ಮಯದ ಲೇಖನ) | ಪೂರ್ಣಚಂದ್ರ ತೇಜಸ್ವಿ | ೩೭ |
| ೩ | ಬೊರ್ರಾ ಗುಹೆಗಳು ಮತ್ತು ಅರಕು ಕಣಿವೆ | ವೆಂಕಟೇಶ್ ಮಾಚಕ | ೪೪ |
| ೪ | ಓದು ಪಠ್ಯ : ಶಾಂತಲ (ಐತಿಹಾಸಿಕ ಕಾದಂಬರಿ ಭಾಗ) | ಕೆ.ವಿ.ಅಯ್ಯರ್ | ೫೧ |

### ಭಾಗ ೪ – ತಂತ್ರಜ್ಞಾನ

| | | | |
|---|---|---|---|
| ೧ | ಒಂದು ರಸ್ತೆ ಮತ್ತು ಹತ್ಯೆ (ಕವನ) | ರಾಜೇಂದ್ರ ಪ್ರಸಾದ್ | ೫೫ |
| ೨ | ಅ ಕಸ – ಈ ಕಸ (ಲೇಖನ) | ಟಿ.ಜಿ.ಶ್ರೀನಿಧಿ | ೫೭ |
| ೩ | ಅಮ್ಮೈ ಮಹಾಲಿಂಗ ನಾಯ್ಕ (ವ್ಯಕ್ತಿ ಚಿತ್ರ) – ಪತ್ರಿಕಾ ವರದಿಯಿಂದ ಆಯ್ದ ಲೇಖನ | | ೬೦ |
| ೪ | ಓದು ಪಠ್ಯ : ಯಂತ್ರಗಳನ್ನು ಕಳಚಿ...ಚರಕಗಳನ್ನು ಹಿಡಿದು (ಅಂಕಣ ಬರಹ) | ಡಾ.ಪದ್ಮರಾಜ ದಂಡಾವತಿ | ೬೨ |

# ೧. ವಿವಾಹ

**ಆಶಯ :**

ಮಂತ್ರದ ತಂತ್ರದ ಮಂದಿವಾಳದ ಮದುವೆ
ಸಂದಣಿಯಲಿ ಹೇಗೋ ಮೆರೆಯುತಿರೆ
ಅಂತಃಪಟದಾಚೆ ವಿಧಿ ತಂದ ವಧು ನೀನು
ಮಾಲೆಯ ಸಾವರಿಸಿ ನಿಂತಿದ್ದೀಯೆ

ಆಟದ ಕನ್ನಿಕೆ ಮಂಗಳ ಲಗ್ನಕೆ
ಮಾಲೆಯನಿಕ್ಕುತ ಮಡದಿಯಾದೆ
ನಾಟಿಸಿ ಕಣ್ಣೋಟ ಸೋಕಿಸಿ ಕೈಬೆರಳು
ಮರವಟ್ಟ ಮನ–ಬನ ಚಿಗುರಿಸಿದೆ

– ಅಂಬಿಕಾತನಯದತ್ತ
'ಸಖೀಗೀತ'

ಒಂದು ಹೆಣ್ಣಿಗೊಂದು ಗಂಡು ಹೇಗೋ ಸೇರಿ
ಹೊಂದಿಕೊಂಡು
ಕಾಣದೊಂದ ಕನಸ ಕಂಡು
ಮಾತಿಗೊಲಿಯದಮೃತ ಉಂಡು
ದುಃಖ ಹಗುರವೆನುತಿರೆ ಪ್ರೇಮವೆನಲು ಹಾಸ್ಯವೇ?

– ಕೆ.ಎಸ್.ನ
'ಬರುವಳೆನ್ನ ಶಾರದೆ'

'ವಿವಾಹ' ಎನ್ನುವುದು ಕೇವಲ ಒಂದು ಗಂಡು ಒಂದು ಹೆಣ್ಣನ್ನು ಕೂಡಿಸುವ ಬಂಧವಲ್ಲ. ಇದೊಂದು ಸಾಮಾಜಿಕ ಒಪ್ಪಂದ. ಎರಡು ಕುಟುಂಬಗಳ, ಎರಡು ಸಂಸ್ಕೃತಿಗಳ, ಪದ್ಧತಿಗಳ ನಡುವೆ ಏರ್ಪಡುವ ಬೆಸುಗೆ. ವೈದಿಕ ಹಿಂದೂ ಸಂಪ್ರದಾಯ ಮದುವೆಯನ್ನು ಷೋಡಶ ಸಂಸ್ಕಾರಗಳಲ್ಲಿ ಒಂದು ಎಂದು ಪರಿಗಣಿಸಿದೆ.

ಭಾರತೀಯ ಸಂಸ್ಕೃತಿಯಲ್ಲಿ ಮನುಷ್ಯನ ಬದುಕಿನ ಮುಖ್ಯ ಪುರುಷಾರ್ಥಗಳೆಂದು – ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಗುರುತಿಸಲಾಗಿದೆ. ಚತುರ್ವಿಧ ಪುರುಷಾರ್ಥಗಳೆಂದು ಕರೆಯಲಾಗುವ ಇವುಗಳಲ್ಲಿ, ಧರ್ಮದ ಚೌಕಟ್ಟಿನಲ್ಲಿ ಅರ್ಥವೆಂಬ ವ್ಯವಸ್ಥೆಯನ್ನು ಇಟ್ಟು, ಕಾಮವೆಂಬ ಪುರುಷಾರ್ಥವನ್ನು ಸಂಯಮದ ಮೂಲಕ ಸಾಧಿಸಿ, ಮೋಕ್ಷದ ಕಡೆಗೆ ಸಾಗಲು 'ವಿವಾಹ' ಎಂಬ ಸಂಸ್ಕಾರ ಜಾರಿಯಲ್ಲಿದೆ ಎನ್ನುವುದು ಅಧ್ಯಾತ್ಮಿಕ ಸಂಗತಿ.

'ಸರಸ ಜನನ : ವಿರಸ ಮರಣ
ಸಮರಸವೇ ಜೀವನ'

ಎಂದಿದ್ದಾರೆ ವರಕವಿ ಬೇಂದ್ರೆ. ಸಮರಸ ಜೀವನದ ಆರಂಭವೇ ಮದುವೆ. ಜೊತೆಗಾರ ಅಥವಾ ಜೊತೆಗಾತಿಯ ಆಯ್ಕೆಗೆ ಮದುವೆ ಎನ್ನುವುದು ಸಾಮಾಜಿಕ ಮನ್ನಣೆ ಪಡೆದುಕೊಂಡಿರುವ ಅಡಿಪಾಯ.

ಆಧುನಿಕ ಚಿಂತನೆಗಳು, ಬದಲಾಗುತ್ತಿರುವ ಜೀವನಕ್ರಮ ಭಾರತೀಯವಾದ ಅನೇಕ ಸಂಗತಿಗಳನ್ನು ಬದಲು ಮಾಡಿದೆ. ಅದರಲ್ಲಿ ವಿವಾಹವೂ ಒಂದು. ಪಾರಂಪರಿಕವಾದ ಪದ್ಧತಿ, ಅನೂಚಾನವಾಗಿ ಬೆಳೆದು ಬಂದಿದ್ದ ಮೌಲ್ಯಗಳು

ನಲುಗಿ ಹೋಗುತ್ತಿರುವ ಅನೇಕ ಉದಾಹರಣೆಗಳು ಇಂದು ನಮ್ಮ ಮುಂದಿವೆ. ಅರ್ಥಹೀನವಾದ ಆಚರಣೆಗಳು, ಆಡಂಬರಕ್ಕಾಗಿ ಮಾಡುವ ದುಂದು, ಅನುಕರಣೆ, ಮುಂತಾದ ಕಾರಣಗಳಿಂದಾಗಿ ಸನಾತನ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ, ಒಂದು ಸಂಸ್ಥೆಯಾಗಿ ಬೆಳೆದು ಬಂದಿರುವ 'ವಿವಾಹ'ದ ಅಡಿಪಾಯ ಶಿಥಿಲಗೊಳ್ಳುತ್ತಿದೆ. ಅದಾಗ್ಯೂ ತನ್ನ ಮೂಲ ಸೆಲೆಯನ್ನು ಒಣಗಲು ಬಿಡದೇ ಕಾಪಾಡಿಕೊಂಡು ಹೋಗುತ್ತಿರುವ ಸಂದರ್ಭಗಳೂ ಇಲ್ಲದಿಲ್ಲ.

# 1. ಸೀಮಂತಿನಿ

– ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ

ಯಾರಿವಳು
ಇದ್ದಕ್ಕಿದ್ದಂತೆ ಪಕ್ಕದಲೆ ಬದಲಾದವಳು?
ಗಂಡನೆಂದವನನ್ನು ಕಂಡಕಂಡಂತೆಯೇ
ಕಂದ ಎಂಬಂತೆ ಮಮತೆಯಲಿ ಮಾತಾಡುವಳು!
ಅಪ್ಪಂದವನನ್ನು ತಪ್ಪು ಮಾಡಿದ ಎಳೆಯನಂತೆ
ತೊಡೆಯಲಿ ಹಾಕಿ ಶಮಿಸಿದವಳು;
ಗುಟುರು ಮದವನು ಮೆಟ್ಟಿ
ಎದ್ದ ಹೆಡೆಯನು ತಟ್ಟಿ
ಹೊಲೆಗಸದ ತೊಟ್ಟಿಯನು ಹೀಗೆ ತೊಳೆದವಳು.

ಇವಳೆ
ಬೆನ್ನಬಳಿ ಬಂದು ಕೊರಳಿಗೆ ತೂಗುತಿದ್ದವಳು?
ಕೈಯ ಪುಸ್ತಕವನ್ನು
ಕಿತ್ತು ಗೂಡೊಳಗೆಸೆದು
ಸಾಕು ಬಿಡಿ ಸನ್ಯಾಸ ಎಂದು ತೋಳೆಳೆದವಳು?
ಕೆನ್ನೆಯಲಿ ಬೆರಳಿಟ್ಟು
ಕೊರಳ ಸರ ತುಟಿಗಿಟ್ಟು
ಏನೋ ಕಕಮಕ ಹಿಡಿಸಿ ಗೆದ್ದು ನಕ್ಕವಳು?

ಈಗ–
ಬೇಸಿಗೆಯ ಉರಿಗಣ್ಣ
ಬೆಳುದಿಂಗಳಲಿ ತೊಳೆದು
ಗರ್ಭಗುಡಿಯ ಹಣತೆಯನು ಹಚ್ಚಿರುವಳು.
ಮೊನ್ನೆ ಸೀಮಂತದಲಿ ಹಸೆಯೇರಿದಾಗಿಂದ
ಜಗದಂಬೆ ಭಾವಕ್ಕೆ ಸಂದಿರುವಳು!

ಒಲೆ ಮೇಲೆ ಅನ್ನ ಸೀಯುತ್ತಲಿದೆ ಮೊನ್ನೆ;
ಎದುರಿಗೇ ಕುಳಿತು
ಹಾಲಪಾತ್ರೆಗೆ ಬಿದ್ದ ಇರುವೆಗಳ ಮೇಲೆತ್ತಿ
ನೆಲಕಿಳಿಸಿ ಹರಿಯಬಿಡುತ್ತಿದ್ದಾಳೆ ಒಂದೊಂದೆ!

ಪೊರಕೆ ತುದಿಯಲಿ ಹಿಂದೆ
ಜಿರಲೆಗಳ ಬಡಿದವಳು ಇವಳೆ?
'ಪಾಪ' ಎಂದರೆ–
'ಆಹ! ಕನ್ನಡಿಗ ಶುದ್ಧ'
ಎಂದು ರೇಗಿಸಿದವಳು!
ಈಗ ಹೊರಳಿದೆ ಕರುಳು,
ಮೊದಲ ಬಾರಿಗೆ ಬಸಿರ ಸವರಿದೆ ಯಶೋದೆಯ
ಬೆಣ್ಣೆ ಬೆರಳು.

ಎಲ್ಲಿ ತಲೆಮರೆಸಿಕೊಂಡುವೊ ಏನೋ ಈಗಿವಳ
ಸಿನಿಮ ಹೋಟೆಲುಗಳಿಗೆ ಅಲೆವ ಚಪಲ,
ಆಗೀಗ (ನನ್ನನೂ ಜೊತೆಗೆಳೆದುಕೊಂಡು!)
ದೇವಸ್ಥಾನ ಯಾತ್ರೆಯಷ್ಟೇ ಈಗ ಸಕಲ!
ಮುಡಿತುಂಬ ಹಣೆತುಂಬ ಕೈತುಂಬ ತನ್ನೆಲ್ಲ
ಮಾಂಗಲ್ಯ ಸೌಭಾಗ್ಯ ಮೆರೆಸಿ,
ಶಾಂತ ಮುಖದೊಳಗೊಂದು ಮರುಳುನಗೆ ನಿಲಿಸಿ,
ಇವಳೀಗ ಕಾರ್ತೀಕದಾಗಸದಹಾಡು,
ಕಣ್ಣು ಹುಣ್ಣಿಮೆಯಿರುಳ ಕಡಲ ಬೀಡು;
ಜೊತೆಗೆ ನಡೆವಾಗ
ನನ್ನ ಹೆಜ್ಜೆಗು ಹೆಜ್ಜೆ ಮುಂದೆಯಿಟ್ಟು,
ಈಗ? ಎಂದಂತೆ ಹುಬ್ಬೆತ್ತರಿಸಿ ನಕ್ಕು
ನಲಿದವಳು ಹಿಂದೆ,
ಈಗೆಲ್ಲ ಅಬ್ಬರ ಬಿಟ್ಟು
ಕಾಲೆಳೆಯುವಳು ಏಕೊ ತೀರ.
ಕನಸುಗಣ್ಣಿಗೆ ದಾರಿಯಲ್ಲು ಏನೋ ಧ್ಯಾನ.
ಮೈಮಾತ್ರ ಇಲ್ಲಿ ಮನಸೆಲ್ಲೊ ಹೊರಟಿದೆ ಯಾನ,
ಅಡಿಗಡಿಗೂ ಒಂದೊಂದು ಗುಡಿಕಟ್ಟಿ ಬಾಗಿಲಲಿ
ಹೊರಳಿ ಬೇಡಿದೆ ಮಗುವಿಗಭಯದಾನ.
ಎಲ್ಲ ಬಾಳಲಿ ಎಂಬ ಭಾವ
ಚೆಲ್ಲುತಿದೆ ಕಣ್ಣು, ಅಲುಗಿದೆ ಹೊಟ್ಟೆಯೊಳಗಿರುವ ಪುಟ್ಟ ಜೀವ,
ಗಟ್ಟಿಸ್ವಾರ್ಥಕೆ ಈಗ ಮಳೆ ಬಿದ್ದು ಮೈಯೊಡೆದು
ಉಸಿರಾಡುತಿದೆ ಮಣ್ಣ ತೇವ!

# ೨. ಒಂದು ಮೂಗುತಿಯ ಕಥೆ

**– ಶಾಂತಾದೇವಿ ಕಣವಿ**

ಧಡ್... ಧಡಲ್... ಬಡಲ್... ಟಪ್... ಠಪ್... ಚರ್‍ರ್... ಆ ಚಿಕ್ಕ ಕೋಣೆಯಲ್ಲಿದ್ದ ವಸ್ತುಗಳೆಲ್ಲ ಕೈ ಕಾಲು ಬಂದವರಂತೆ ಅತ್ತ–ಇತ್ತ ಹಾರಾಡುತ್ತಿದ್ದವು. ಪಾತ್ರೆಗಳು ಜಿಗಿದಾಗ ಠಣ್ ಎಂದು ಸಪ್ಪಳಿಸಿದವು ಹಾಸಿಗೆಯನ್ನೆತ್ತಿ ಚಟಪಟ ಝಾಡಿಸಿದಾಗ ಹರಕು ಚಾಪೆಯ ಕಡ್ಡಿಗಳು ಡೊಂಕಾಗಿ ನಡು ಮುರಿಯಿತು. ತೂತು ಬಿದ್ದು ಚಾದರದಿಂದ ಕೈ ತೂರಿ ಹೊರಗೆ ಬಂದಿತು. ಕೋಣೆಯ ನಾಲ್ಕೂ ಮೂಲೆ ಖಾಲಿ ಮಾಡಿ ಕಸಬರಿಗೆ ಆಡಿಸಿದಾಗ ಜೊಂಡಿಗ, ಹಲ್ಲಿಗಳು, ಸರಸರ ಗೋಡೆ ಏರಿ ಹಂಚಿನಲ್ಲಿ ಸುರಕ್ಷಿತವಾದವು.

ಬೆಳಕು ಹರಿದಾಗಿನಿಂದ ವಟಗುಡುತ್ತ, ತನ್ನ ಕೋಣೆಯ ತಳಬುಡವನ್ನೆಲ್ಲ ಹುಡುಕುತ್ತಿದ್ದ ಮಾನವ್ವ ಹೊತ್ತೇರಿ ಬಹಳ ಹೊತ್ತಾಗಿದೆ, ಮನೆ ಕೆಲಸಕ್ಕೆ ಹೋಗಬೇಕು ಎನ್ನುವುದು ಮರೆತು ತನ್ನ ಕೆಲಸದಲ್ಲಿಯೇ ಗರ್ಕಾಗಿದ್ದಳು. ಆದರೂ ಅವಳ ವಸ್ತು ಸಿಕ್ಕಿರಲಿಲ್ಲ. ಕೈ ಸೋಲಲು ತಾನು ಸಿದ್ಧಳಿಲ್ಲವೆನ್ನುವುದನ್ನು ಸಾರುವಂತೆ ಅವಳೀಗ ದನಿ ಎತ್ತಿದ್ದಳು.

"ನೀ ಒಳ್ಳೆ ಗಂಟು ಬಿದ್ದೀ ನನಗ ಬಿಕನಾಶಿ. ಕೂಲಿ ಇಲ್ಲಾ ಕುಂಬಳ ಇಲ್ಲಾ. ದುಡ್ಡು ದುಗ್ಗಾಣಿ ದುಡಿಯಾಂಗಿಲ್ಲಾ ತಾಳಿಕಟ್ಟಿದ್ದ ಖರೇವು. ಗಂಡ ಅಂತ ಗಂಡಾ ಒನಕೀ ತುಂಡ ಆಗೀದಿ. ಆದಖರೆ ಉಪಯೋಗಕ್ಕೆ ಬಂದೀತು, ನೀ ಯಾತಕ್ಕೂ ಇಲ್ಲಾ, ಮದುವೆ ಆದಾಗಿಂದ ನಾನ ದುಡಿಬೇಕು. ಮುಸುರಿ ತಿಕ್ಕಿ, ಅರಿವಿ ಹಿಂಡಿ, ನೆಲಾ ತೊಳೆದು ನನ್ನ ಕೈಯಾನ ನರಾ ಸಾಯಾಕ ಹತ್ಯಾವ, ಮುಂಜಾಲಿಂದ ಚಂಜೀತನಾ ದುಡುದು ತಂದು ಕೂಳ ಕುದಿಸಿ ಅತ್ಲಾಗ. ಅಣ್ಣಾ–ಅತಿಗಿ ಅಂತ ಭಾಳ ಬಡಕೊಂತಿ. ಯಾವಾಕಿ ಕೂಳ ಹಾಕ್ಯಾಳ ನಿನಗೆ ನೋಡತೇನಿ. ನೀ ಮನೀ ಬಿಟ್ಟ ಹೋಗಿಬುಡು, ನಿನ್ನಿಂದ ಏನೂ ಹರಕತ್ತಿಲ್ಲಾ, ಕೂಳು ದಂಡ ನಿನಗೆ, ಕಡದರ ನಾಕ ಆಳು ಆಗೂ ಹಾಂಗ ಆದೀ, ದುಡಿಯಾಕ ಬ್ಯಾಡಾ, ಹೇಣ್ತಿ ಮಕ್ಕಳ ಸುಕ–ದುಕ್ಕ ನೋಡಾಕ ಬ್ಯಾಡಾ, ಚೈನೀ ಬೇಕು ಚೈನೀ, ಬೀಡಿಗೆ ಸುದ್ದಾ ನನಗೆ ಕೈ ಒಡ್ಡತೀ ನಾಚಿಕೆ ಬರಾಂಗಿಲ್ಲ ನಿನಗ? ಮನ್ಯಾಗಿನ ಚಿಲ್ಲರ ರೊಕ್ಕ ಅಂತೂ ಎಲ್ಲಿ ಇಟ್ಟಲ್ಲೆ ಮಾಯ ಆಕಾವ, ನನ್ನ ಮೂಗುತಿ ಎಲ್ಲಿ ಐತಿ ಹೇಳ ಈಗ, ಮನೀಯಂತ ಮನೀ ಎಲ್ಲಾ ಹುಡುಕಿದರೂ ಸಿಗವಾಲ್ದು. ನಿನ್ನೆ ರಾತ್ರಿನ್ಯಾಗ ಮ್ಯೂಗಿನ್ಯಾಗ ಇತ್ತು. ಬೆಳಕ ಹರಿದಾಗ ಇಲ್ಲ ಅಂದರ, ಅದು ಎಲ್ಲಿ ಬಿದ್ದ ಹೊಕ್ಕತಿ? ನನಗ ನಿದ್ದಿ ಹತ್ತಿದಾಗ ನೀನ ತಗದೀ. ನನಗೆ ಎಲ್ಲಾ ಗೊತ್ತೈತಿ ನಿನ್ನ ಐದೇಶಿ ಬಲ್ಲೆ ನಾನು ಕತ್ತಲದಾಗ ಎದ್ದಾಕಿ ರಾತ್ರಿ ಆದರೂ ನನ್ನ ಕೆಲಸ ಮುಗಿಯುದಿಲ್ಲ. ದುಡದು ದುಡುದು ಮೈಮ್ಯಾಲಿನ ಖಬರು ಇಲ್ಲದ ನೆಲಾ ಸಿಕ್ಕರ ಸಾಕಂತ ಬಿದ್ದಾಂಗ ಬಿದ್ದರತೇನಿ. ನೀನ ನನ ಮೂಗುತಿ ಬಿಚಿಕೊಂಡೀದಿ ಹೌದಲ್ಲೋ? ಆಣೀ ಮಾಡಿ ಹೇಳು, ಖರೇ ಹೇಳು. ನಿನ್ನ ಯಾವ ಗೆಣತಿಗೆ ಕೊಡಾಕ ಬಿಚಗೊಂಡೀ ಹೇಳು. ತತಾ ಇಲ್ಲೆ ಮೂಗುತಿ. ನನ್ನ ಕಣ್ಣ ತಪ್ಪಿಸಿ ಯಾವಾಕಿಗೆ ಕೊಟ್ಟರೂ ಆ ಬೋಸುಡಿ ಸೀರಿ ಕಳದು ಮಚ್ಚೀಲೆ ಬಡದು ಕಸಗೊಂಡು ಬರ್ತೀನಿ, ಹೇಳು,"

ಈ ಹೊತ್ತಿನಲ್ಲಿ ಮಾನವ್ವನನ್ನು ಕೆಲಸಕ್ಕೆ ಕರೆದರೂ ಉಪಯೋಗವಿಲ್ಲವೆಂದು ತಿಳಿದ ಸುನಂದ ತನ್ನ ಅಡಿಗೆ ಕೋಣೆಯಿಂದಲೇ ಮಾನವ್ವನ ಅಸ್ತವ್ಯಸ್ತ ಕೋಣೆಯನ್ನು, ಒಂಟಿ ಯುದ್ಧವನ್ನು ನೋಡುತ್ತಿದ್ದಳು. ಅಶಿಕ್ಷಿತೆಯಾಗಿದ್ದರೂ ಸುಂದರ ಮನಸ್ಸಿನ ಮಾನವ್ವ, ಬೇರೆ ಗಂಡಸರ ಮುಂದೆ ಮುಖ ಎತ್ತದೆ, ಮೈತುಂಬ ಸೆರಗು ಹೊದ್ದು, ತಲೆ ತಗ್ಗಿಸಿ ನೋಡ ನೋಡುತ್ತ ಬದಿಗೆ ಸರಿದು ನಿಲ್ಲುವ ಹೆಂಗಸು. ಕಿವಿಯಿಂದ ಕೇಳಬಾರದ, ಬಾಯಿಂದ ಬರಬಾರದ ಬೈಗುಳಗಳನ್ನೆಲ್ಲ ಸುರಿಸುತ್ತಿದ್ದ ಮಾನವ್ವನ ದುಃಖದ ಆಳವನ್ನು ಸುನಂದ ಚೆನ್ನಾಗಿ ಬಲ್ಲಳು. ಗುಡುಗಿನ ಹಿಂದೆ ಬರುವ ಮಳೆಯಂತೆ ನೆಲಕ್ಕೆ ಕೈ ಅಪ್ಪಳಿಸಿ ಶಪಿಸುತ್ತ ಮಾನವ್ವ ಈಗ ಅಳತೊಡಗಿದ್ದಳು.

"ಸಣ್ಣ ಮಗಳು ಸುಕದಿಂದ ಇರಲೆಂತ ಪಿರೀತಿಲೆ ನೋಕರದಾರಗ ನನ್ನ ಮದವೀ ಮಾಡಿಕೊಟ್ಟು ಮಣ್ಣಾಗಿ ಹ್ವಾದೆಲ್ಲ ಯವ್ವಾ, ಇವನಿಂದ ನಾ ಏನ ಸುಕಾ ಕಂಡ್ನೇ ನೀ ಕೊಟ್ಟ ಬೆಳ್ಳಿ ಪಟ್ಟಿ, ಗುಂಡಿನ ಸರಾ, ಎಲ್ಲಾ ಇವನ ಹೆಣಕ್ಕ

ಬಡದ್ನೇ ಯವ್ವಾ ಈಗ ಮೂಗ್ತಿನೂ ಹೋತು. ನೋಕರಿ ಹ್ವಾದ ಮ್ಯಾಲೆ ಕೂಳಿಗೆ ದಂಡ ಆಗ್ಯಾನ ಯವ್ವಾ, ಶೇಕೀ ಮದವಿ ನಾ ಹ್ಯಾಂಗ ಮಾಡಲೇ. ನಾ ದುಡದದ್ದು ಬ್ರಮರಾಕ್ಸಸಗ ಸಾಲೂದಿಲ್ಲ ಯವ್ವಾ, ಕಿಸೇದಾಗ ರೊಕ್ಕ ಇಲದಿದ್ರೂ ಇವಂದ ದಿಮಾಕ್ ಭಾಳ ಯವ್ವಾ, ಇವಂಗ ನಾ ಒಬ್ಬಾಕಿ ಸಾಲೂದಿಲ್ಲ, ಗೆಣತೇರಿಗೆ ಮಾಡ್ತಾನ ಯವ್ವಾ, ನನ್ನ ಎಡ್ಡ ಗಂಡ ಮಕ್ಕಳ್ನೂ ಮಣ್ಣಾಗಿಟ್ಟು ನಾ ಬಂಜಿ ಆಗೀನಿ ಯವ್ವಾ.

ಗೇಟಿನ ಸಪ್ಪಳವಾಯಿತು. ಬಿಳಿ ದೋತರ, ಶರ್ಟು, ಗಾಂಧಿ ಟೊಪ್ಪಿಗೆಯಿಂದ ಅಲಂಕೃತವಾದ ಕರೀಮೂತಿಯ ನಿಂಗಪ್ಪ ತುಟಿ ಪಿಟಿಕ್ಕೆನ್ನದೆ, ಸ್ಥಿತಪ್ರಜ್ಞನಂತೆ ಗಂಭೀರವಾಗಿ ಹೊರಗೆ ಹೋಗುತ್ತಿದ್ದ. ನಾಲ್ಕಾರು ವರುಷಗಳಿಂದ ಈ ಜೋಡಿ ಅಥವಾ ಇಜ್ಜೋಡಿಯ ದಾಂಪತ್ಯ ವೈಖರಿಯನ್ನು ಸಮೀಪದಿಂದ ನೋಡಿದ ಸುನಂದೆಗೆ ಈ ದೃಶ್ಯವೇನೂ ಹೊಸದಾಗಿರಲಿಲ್ಲ.

'ನಂದಾ, ಚಹಾ ಆತೇನು' ಕೇಳುತ್ತಾ ಅಡಿಗೆ ಮನೆಗೆ ಬಂದ ವಿಶ್ವನಾಥ ಸುನಂದೆಯ ಭುಜದ ಸುತ್ತ ಕೈ ಹಾಕಿ ಹತ್ತಿರ ಎಳೆದುಕೊಂಡು 'ಇವತ್ತ ಮಾನವ್ವನ ಸುಪ್ರಭಾತಕ್ಕೆ ಎಚ್ಚರಾತು' ಎಂದು ನಕ್ಕ, ಅವನಿಗೆ ಅದೊಂದು ನಗುವ ವಿಷಯವೇ ಸುನಂದೆಯ ಮನಸ್ಸಿಗೆ ಬೇಸರವಾದರೂ ತೋರಿಸಿಕೊಳ್ಳದೇ ಶುಭ್ರವಾಗಿ ಹೊಳೆಯುತ್ತಿದ್ದ ಗಂಡನ ತಂಪು ಕೆನ್ನೆಯ ಮೇಲೆ ಬೆರಳಾಡಿಸಿದಳು.

'ಪಾಪ! ಮಾನವ್ವಂದೂ ಒಂದು ಕಷ್ಟದ ಜೀವನಾ, ಬರೀ ಹೋರಾಟ, ಹಿಂದಿನ ಜನ್ಮದೊಳಗ ನನಗೆ ವಿಶ್ವಾಸ ಇಲ್ಲಾ ವಿಶೂ ಆದರೂ ಒಮ್ಮೊಮ್ಮೆ ಇಂಥಾ ಒಳ್ಳೇ ಹೆಂಡತಿಗೆ ಅಥಾ ಗಂಡನ್ನ ದೇವರು ಯಾಕ ಗಂಟು ಹಾಕಿದ್ದಾನು. ಹೋದ ಜನ್ಮದೊಳಗೆ ಏನು ಪಾಪಾ ಮಾಡಿದ್ದಾಳು ಅನಸ್ತದ."

"ಸಿಲ್ಲಿ, ನೀವು ಹೆಂಗಸರು ಹಿಂಗ ವಿಚಾರ ಮಾಡ್ತೀರಿ, ಅವರ ಭವಿಷ್ಯ, ಸುಖಾ-ದುಃಖಾ ಎಲ್ಲಾ ಅವರ ಕೈಯೊಳಗೆ ಇರ್ತದ. ನನ್ನ ಕೇಳಿದರ ಆಕೀ ಗಂಡನ್ನ ಹೊರಗ ಹಾಕಬೇಕು. ಒದ್ದು ಹೊರಹಾಕಬೇಕು ನೀ ಇಲ್ಲೆ ಇರೂದು ಜರೂರಿಲ್ಲ ಇರೂದ ಇದ್ದರ ಹೇಳಿದ್ದು ಕೇಳಿಕೊಂಡು ಬಿದ್ದಿರು ಅನಬೇಕು."

'ಇದು ಜೀವನಾ ವಿಶೂ, ಲಗ್ನಾ ಮಾಡಿಕೊಂಡ ಮ್ಯಾಲೆ ಹೆಣ್ಣಿಗೆ ಅಳಕೋತ ಆದರೂ ಜೀವನಾ ಕಳೀಬೇಕಾಗುತದ, ಹೋಗಿಬಿಡು ಅಂತ ಕೊಡಿವಿ ಕಳಿಸಾಕ ಅಂವಾ ಮೂಲ್ಯಾಗಿನ ಕಸಾ ಅಲ್ಲ. ಗಂಡ ಅದಾನ, ತಾಳೀ ಕಟ್ಟಿದಾಂವ ತನ್ನ ಹಕ್ಕು ಸಾಧಸತಾನ."

'ಸರಿಯಾಗಿ ಸಂಸಾರಾ ಮಾಡಿದರ ಆಂವಾ ಗಂಡ, ಇಲ್ಲಾಂದರ ಗುಂಡುಕಲ್ಲು, ಆ ಒಜ್ಜೆ ಯಾಕೆ ಹೊರಬೇಕು? ನಾ ದುಡದು ನಂದು, ಮಗಳ್ದು ಹೊಟ್ಟೀ ತುಂಬಿಸಿಕೋತೇನಿ, ನಿನಗ ಕೂಳು ಹಾಕೂದಿಲ್ಲ, ಹೋಗಿ ಬಿಡು ಅನಬೇಕು.'

ಸಿಟ್ಟು ಬಂದಾವ ಮಾನವ್ವ, ಹೀಗೆ ಎಷ್ಟೋ ಸಲ ಹೇಳಿದ್ದನ್ನು ಸುನಂದೆ ಕೇಳಿದ್ದಳು. ಆದರೆ ಭಂಡ ನಿಂಗಪ್ಪ ಯಾವ ಎಗ್ಗಿಲ್ಲದೆ ಅವಳ ಮಾತುಗಳನ್ನೆಲ್ಲಾ ಗಾಳಿಗೆ ತೂರಿ, ಅವಳ ಬಯ್ಗುಳಕ್ಕೆ ಬೆಲೆ ಕೊಡದೆ, ಇದ್ದ ರೊಟ್ಟಿಗಳನ್ನು ತಿಂದು ತಿರುಗಲು ಹೋಗುತ್ತಿದ್ದ. ಓದು ಬರಹ ತಿಳಿಯದ, ಬರೀ ಮೈಮುರಿ ದುಡಿತವನ್ನೇ ತಿಳಿದಿದ್ದ ಅಮಾಯಕ ಮಾನವ್ವ ತಾನಿಲ್ಲದೆ ಬಾಳಲಾರಳು ಎನ್ನುವ ಗುಟ್ಟನ್ನು ಆ ಪುಂಡ ಚೆನ್ನಾಗಿ ತಿಳಿದುಕೊಂಡಿದ್ದ.

ವಿಚಾರ ಮಾಡುತ್ತ ಸುನಂದ ಗಂಡನನ್ನು ಕೂಗಿದಳು. 'ವಿಶೂ ಲಗೂನ ಬಾ, ವಿಶಾಲನ್ನ ಸಾಲಿಗೆ ಬಿಟ್ಟು ನೀನು ಆಫೀಸಿಗೆ ಹೋಗಬೇಕು. ತಿಂಡಿ ತೊಗೊಂಡು ತಯಾರಾಗು.'

ಸುನಂದೆಯ ಮುಖ ಗಂಭೀರವಾಗಿದ್ದರೆ ವಿಶ್ವನಾಥನಿಗೆ ಅಸಮಾಧಾನ. ಅವಳು ಈಗಲೂ ಎರಡು ಮಕ್ಕಳ ತಾಯಿಯಾದ ಮೇಲೂ ನಗುತ್ತ ಅವನ ಹಿಂದೆ ಮುಂದೆ ಸುತ್ತುತ್ತ ಇರಬೇಕು. ತಾನು ಅವಳನ್ನು ಮುದ್ದು ಮಾಡುತ್ತಾ ಇರಬೇಕು. ಸಮಸ್ಯೆಗಳನ್ನು ತಲೆಯಲ್ಲಿ ಇಟ್ಟುಕೊಂಡರೆ ತಲೆ ಬಿಸಿಯಾಗುತ್ತದೆ. ಸಾಧ್ಯವಿದ್ದಷ್ಟು ಬೇಗ ಅದಕ್ಕೆ ಪರಿಹಾರ ಹುಡುಕಬೇಕು. ಇಲ್ಲವಾದರೆ ಅದರ ಬಗ್ಗೆ ಯೋಚಿಸಲೇಬಾರದು. ಜೀವನ ಇರುವುದೇ ಎಂಜಾಯ್ ಮಾಡಲಿಕ್ಕೆ ಅದು ಬಿಟ್ಟು ತಮಗೆ ಸಂಬಂಧವಿಲ್ಲದ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕಲ್ಲ. ಎನ್ನುವುದೇ ವಿಶೂನ ಜೀವನ ಸಿದ್ಧಾಂತ ಅದನ್ನೇ ಮತ್ತೊಮ್ಮೆ ಸುನಂದೆಗೆ ಹೇಳಿದ.

"ಪರ ಚಿಂತೆ ಎಮಗೆ ಏಕೆ ಅಯ್ಯಾ" ಅಂತ ಬಸವಣ್ಣನವರು ವಚನಾ ಹೇಳ್ಯಾರಲ್ಲ. ಭಾಳ ಒಳ್ಳೆ ಮಾತು ಮಾನವ್ವ, ನಿಂಗಪ್ಪ ಜಗಳಾ ಆಡಿದರಂತ ನೀ ಯಾಕ ಮಾರೀ ಕೆಟ್ಟ ಮಾಡತೀ, ಹಗಲೆಲ್ಲಾ ಇವರ ಜಗಳ ಕೇಳಲಿಕ್ಕೆ, ಆಗೂದಿಲ್ಲ, ಆಕೀಗೆ ನಿಂಗಪ್ಪನ್ನ ಕೂಡ ಸಂಸಾರಾ ಮಾಡಲಿಕ್ಕೆ ಆಗದಿದ್ದರೆ ಸೋಡಚೀಟಿ ಕೊಟ್ಟುಬಿಡು ಅನ್ನು. ಒಮ್ಮೆ ನಿಕಾಲಿ ಆಗಿ ಹೋಗ್ತದ. ನಾನು ಆಫೀಸಿಗೆ ಈಗ ಹೋದಾಂವ ಸಂಜಿಗೆ ಬರ್ತೀನಿ. ನಾ ಹೊರಗೆ ಹೊರಡೂ ಮುಂದ ಹಿಂದ ಅಳಮಾರಿ ಮಾಡಬ್ಯಾಡಾ. ನಗನಗ್ತಾ ಇರೂ."

ವಿಶ್ವನಾಥ ಒಳ್ಳೆಯ ಗಂಡ ಹೌದು. ಆದರೆ ಸ್ವಾರ್ಥಿ. ಯಾವಾಗಲೂ ನಗ್ತಾ ಇರಬೇಕಂತೆ ಅದು ಹೇಗೆ ಸಾಧ್ಯ? ನಾನೇನೂ ಯಂತ್ರ ಅಲ್ಲವಲ್ಲ. ನನಗೂ ಭಾವನೆಗಳಿವೆ, ವಿಚಾರಗಳಿವೆ, ಸಂವೇದನೆಗಳಿವೆ. ಹೊರ ಜಗತ್ತಿಗೆ ಕಣ್ಣು, ಕಿವಿ ಮುಚ್ಚಿಟ್ಟುಕೊಂಡು ತನ್ನನ್ನು, ತನ್ನ ಮನೆಯನ್ನು ಮಾತ್ರ ನೋಡಿಕೊಂಡಿರಬೇಕು ಅನ್ನೋದು ಸ್ವಾರ್ಥದ ಪರಮಾವಧಿ. ಸುನಂದ ಅವನ ಆಲೋಚನೆಯ ರೀತಿಯನ್ನೇ ಮೆದುವಾಗಿ ಪ್ರಶ್ನಿಸಿದಳು.

'ವಿಶೂ, ನೀ ಹೇಳೋದು ಒಂದು ರೀತಿ ಖರೇ. ಅದರ ನಾನೂ ಬರೇ ಮಾನವ್ವನ ವಿಚಾರ ಮಾಡೂದಿಲ್ಲ. ಗಂಡನಿಂದ ಶೋಷಿತರಾಗುವ ಎಲ್ಲ ಹೆಣ್ಣುಗಳ ಬಗ್ಗೆ ವಿಚಾರ ಮಾಡ್ತೀನಿ. ಅವರ ಸಮಸ್ಯೆಗಳನ್ನು ತಿಳಿದುಕೊಳ್ಳೋದಕ್ಕ ಪ್ರಯತ್ನಪಡ್ತೀನಿ. ಸಮಾಜಶಾಸ್ತ್ರ, ಓದಿರೋದರಿಂದ ಈ ಸಮಸ್ಯೆಯ ಆಳ ನನಗೆ ಅರ್ಥ ಆಗ್ತದ. ಅದರ ಇದಕ್ಕೆ ಡೊವೋರ್ಸನ ಪರಿಹಾರ ಅನ್ನೋದು ತಪ್ಪು. ಈಗ ನೀನ ನೋಡು. ನಿನ್ನ ದೊಡ್ಡಮ್ಮನ ಮಗಳು ಕುಮುದಿನಿ ಅದಾಳಲ್ಲ. ಗ್ರಾಜುಯೇಟ್ ಆಗಿ ನೌಕರಿ ಮಾಡ್ತಾಳ. ಆಕೀಗ ತಂಡ, ಮಾವ ಬಹಾಳ ತ್ರಾಸ ಕೊಡ್ತಾರಲ್ಲ ಆಕೀಗೆ ಯಾಕೆ ಗಂಡನ್ನ ಡೈವೋರ್ಸ್ ಮಾಡಲಿಕ್ಕೆ ನೀನು ಸಲಹಾ ಕೊಡೂದಿಲ್ಲಾ? ಆರ್ಥಿಕವಾಗಿ ಸ್ವತಂತ್ರ ಇದ್ದಾಳೆ. ಗಂಡನ್ನ ಬಿಟ್ಟು ಬಿಡಬಹುದಲ್ಲಾ."

'ನಂದಾ ಛೀ ಛೀ ನೀ ಸಮಸ್ಯೆನ್ನು ಸರಿಯಾಗಿ ಅರ್ಥಾ ಮಾಡಿಕೊಳ್ಳುದಿಲ್ಲಾ ಸುಮ್ಮನ ಮಾತಾಡ್ತಿ. ಕುಮುದಿನಿ ಯಾರು? ಮಾನವ್ವ ಯಾರು?".. ಕಸಬರಿಗೆ ಹಿಡಿದು ಒಳಬರುತ್ತಿದ್ದ ಮಾನವ್ವನನ್ನು ನೋಡಿ ಮಾತು ನಿಲ್ಲಿಸಿ ಶೂಸಿನ ಲೇಸು ಕಟ್ಟಿಕೊಂಡು ವಿಶ್ವನಾಥ ಎದ್ದುಹೋದ.

ಸುನಂದೆ ಕೊಟ್ಟ ಚಹ ಕುಡಿಯುತ್ತ ಮಾನವ್ವ ಮತ್ತೊಮ್ಮೆ ಮೂಗು ಸೀಟುತ್ತ ಕಣ್ಣೀರು ಹರಿಸಿದಳು. 'ನಮ್ಮವ್ವ ಸಾಯೂ ಮುಂದ ನನ್ನ ಸಣ್ಣ ಮಗಳಿಗೆ ಮೂಗುತಿ ಕೊಡ್ರಿ ಅಂತ್ಹೇಳಿ ಅಣ್ಣ-ಅತ್ತಿಗೆಗೆ ಕೆಟ್ಟ ಆಗಿ ನನಗ ಕೊಟ್ಟಳ್ರಿ ಅವ್ವಾರ. ಈಗ ಅದನ್ನೂ ನುಂಗಿ ನೀರು ಕುಡದಾ."

ಮಾನವ್ವನ ಮೂಗುತಿಯೆಂದರೆ ಸುನಂದೆಗೂ ಹೊಸ ವಸ್ತುವಲ್ಲ. ಜೋಳದ ಕಾಳಿನಷ್ಟು ದೊಡ್ಡ ಒಳ್ಳೆಯ ಮುತ್ತಿನ ಮೂಗುತಿ. ಬಂಗಾರದ್ದು. ಅಂಥದನ್ನು ಮಾಡಿಸಲು ಈ ದಿನಗಳಲ್ಲಿ ಐದಾರು ನೂರು ರೂಪಾಯಿ ಬೇಕಾದೀತು. ಭದ್ರವಿಲ್ಲದ ಕೋಣೆ, ಕೈಶುದ್ಧ ಇಲ್ಲದ ಗಂಡ, ಪಾಪ, ಮಾನವ್ವ ಏನು ಮಾಡಿಯಾಳು? ಅವ್ವ ಕೊಟ್ಟ ಆಸ್ತಿಯನ್ನು ಜೋಪಾನವಾಗಿಟ್ಟುಕೊಳ್ಳಲು ಸುನಂದೆಯ ಕೈಯಲ್ಲಿಯೇ ಕೊಟ್ಟಿದ್ದಳು. ತಾನು ಮಾತ್ರ ಸಂತೆಯನ್ನು ಜೋಗೇರ ಹತ್ತಿರ ಕೊಂಡ ಕೆಂಪು ಹರಳಿನ ಮೂಗು ಬೊಟ್ಟು ಇಟ್ಟುಕೊಂಡು ನಾಳೆ ನಮ್ಮ ಶೇಕವ್ವನ ಮದುವ್ಯಾಗ ಮೂಗುತಿ ಆಕೀಗ ಕೊಡ್ತೇನಿ' ಎಂದು ಹಿಗ್ಗುತ್ತಿದ್ದಳು.

ಒಂದೆರಡು ತಿಂಗಳ ಹಿಂದೆ ಶೇಕವ್ವ, ಮೈನೆರೆದಾಗ ಇದ್ದೊಬ್ಬ ಮಗಳ ಸಡಗರ ನೋಡಲು ಮಾನವ್ವ ಅವಳನ್ನು ಐದು ದಿನ ಕೂಡ್ರಿಸಿ ಆರತಿ ಮಾಡಿದಳು. ಕೆಲಸ ಮಾಡುವ ಮನೆಗಳಲ್ಲಿ ಕೈಗಡ ತಂದು ಮಗಳಿಗೆ ಸೀರೆ, ಕುಬಸ, ಉತ್ತತ್ತಿ, ಕೊಬ್ಬರಿ-ಬೆಲ್ಲ ತರಿಸಿದ್ದಳು. ತಂದು ಕೊಟ್ಟವನು ನಿಂಗಪ್ಪನೇ. ತನ್ನ ಹೋಟೆಲ್ ಖರ್ಚು, ಬಸ್ಸು, ಬೀಡಿ ಎಂದು ಅವಳಿಂದ ಹತ್ತಿಪ್ಪತ್ತು ರೂಪಾಯಿ ಹೆಚ್ಚಿಗೆ ಕಿತ್ತಿದ್ದ. ತನ್ನ ಮನೆಯ ಶುಭ ಕಾರ್ಯಕ್ಕೆ ಹಳ್ಳಿಯಿಂದ ಬಳಗವನ್ನೂ ಕರೆಸಿದ್ದಳು. ಆಗ ಸುನಂದೆಯೇ ಶೇಕವ್ವನಿಗೆ ಹಾಕಲು ಮೂಗುತಿ ತೆಗೆದುಕೊಟ್ಟಿದ್ದಳು. ಶೇಕವ್ವನ ಮೇಲೆ ಹುಟ್ಟಿದ ಎರಡೂ ಗಂಡು ಮಕ್ಕಳು ಸತ್ತು ಹುಟ್ಟಿದ್ದವಂತೆ. ಅವಳಿಗೆ ಇನ್ನು ಮಕ್ಕಳೇ ಬೇಡವೆಂದು ಡಾಕ್ಟರರೇ ತೀರ್ಮಾನಿಸಿ ಆಪರೇಷನ್ ಮಾಡಿದ್ದರು. ಅದನ್ನು ನೆನಸಿ ಸುನಂದೆಯ ಮುಂದೆ ಆಗಾಗ ಕಣ್ಣೀರು ಹಾಕುತ್ತಿದ್ದಳು ಮಾನವ್ವ. ಈಗಂತೂ ಶೇಕವ್ವನೇ ಅವಳಿಗೆ ಗಂಡು-ಹೆಣ್ಣು ಎಲ್ಲಾ ಅವಳಿಗೆ ಸಾಲೆ ಕಲಿಸಿ ಒಳ್ಳೆಯ ವರನಿಗೆ ಕೊಟ್ಟು ಮದುವೆ ಮಾಡುವುದೇ ಅವಳ ಜೀವನದ ಗುರಿ.

ಮಗಳು ದೊಡ್ಡವಳಾದ ದಿನದಿಂದ ನಿಂಗಪ್ಪನಿಗೆ ವರ ಹುಡುಕಲು ಹೇಳಿದ ಮಾನವ್ವ ಮದುವೆಯಾದ ಮೇಲೆ ಮಗಳೊಡನೆ ಮೂಗುತಿಯು ಹೋಗುವದೆಂದು ತಿಳಿದು ತಾನೊಂದಿಷ್ಟು ದಿನ ಇಟ್ಟುಕೊಂಡು ಅಕ್ಕರತೆ ಮುಗಿಸಿಕೊಳ್ಳಲು ಬಯಸಿದ್ದಳು. ಅಂಥ ಮೂಗುತಿಯೇ ಮಾಯವಾಗಿದೆಯಲ್ಲ !

ಒಂದು ದಿನ ಸುನಂದೆಯ ಬಳಿಗೆ ಬಂದು ಮಾನವ್ವ ಬ್ಯಾಂಕ್ ಪಾಸ್ ಬುಕ್ ತೋರಿಸಿದಳು. ಎಂಥ ಸಾಹಸಿ ಈ ಹಳ್ಳಿ ಹೆಣ್ಣು ಎಂದು ಅಚ್ಚರಿ ಸುನಂದೆಗೆ, 'ಅವ್ವಾರ ಶೇಕವ್ವನ ಮದುವಿಗೆ ರೊಕ್ಕಾ ಕೂಡಸಾಕ ಹತ್ತೇನ್ರಿ. ತಿಂಗಳಾ ಇಪ್ಪತ್ತು ರೂಪಾಯಿ, ಹಿರ್‍ಯಾನ ಹೋಗಿ ತುಂಬಿ ಬರತಾನ್ರಿ ಒಂದೀಟು ಲೆಕ್ಕ ಏಟ ಆಗೇತಿ ನೋಡ್ರಿ."

ಪಾಸ್ ಬುಕ್ ನೋಡಿದಾಗ ಸುನಂದೆಯ ಮನಸ್ಸಿಗೆ ಪಿಚ್ಚೆನಿಸಿತು. ಅವಳು ಹೇಳಿದ ಲೆಕ್ಕಕ್ಕಿಂತ ಐವತ್ತು ರೂಪಾಯಿ ಕಡಿಮೆ ಇದ್ದವು. ನಿಂಗಪ್ಪ ಇಲ್ಲೂ ತನ್ನ ಕೈಚಳಕ ತೋರಿಸಿದ್ದ. ತಾನು ಅವಳಿಗೆ ಯಾವ ರೀತಿ ತಾನೇ ಸಹಾಯ ಮಾಡಬಲ್ಲಳು. 'ನಿನಗೆ ಬೇಕಾದರೆ ಇನ್ನೂ ಐದ್ಹತ್ತು ರೂಪಾಯಿ ಹೆಚ್ಚಿಗೆ ಸಂಬಳ ಕೊಡು. ಸೀರೆ, ಕುಪ್ಪಸ, ಚಹ, ತಿಂಡಿ ಅಂತೂ ಕೊಟ್ಟೇ ಕೊಡುತ್ತೀ, ಇದಕ್ಕೂ ಹೆಚ್ಚಿಗೆ ಏನೂ ಹಚ್ಚಿಕೊಳ್ಳಲು ಹೋಗಬೇಡ' ಎಂದು ವಿಶ್ವನಾಥ ತನಗೇ ಮೊದಲೇ ಎಚ್ಚರಿಸಿದ್ದ. ಸಿಟ್ಟು ಬಂದರೆ ಅವರಿಗೆ ಕೋಣೆ ಬಿಟ್ಟು ಹೋಗಲು ಗಂಡ ಹೇಳುವವನೇ. ತನ್ನ ಗಂಡನನ್ನು ಶಪಿಸುತ್ತ ಅಳುತ್ತ ಹೊರಟ ಮಾನವ್ವನಿಗೆ ಹೇಗೆ ಸಮಾಧಾನ ಹೇಳಬೇಕೆನ್ನುವುದು ತಿಳಿಯದೆ ಮಂಕಾದಳು ಸುನಂದೆ.

ತಮ್ಮ ಕೋಣೆಯ ಕೀಲಿ ಹಾಕಿದ್ದರಿಂದ ಶಾಲೆಯಿಂದ ಬಂದ ಶೇಕವ್ವ ಸುನಂದೆಯೊಡನೆ ಅಕ್ಕಿ ಆರಿಸುತ್ತ ಕುಳಿತವಳು ಗೇಟಿನತ್ತ ನೋಡಿ ಅವ್ವ ಬಂದಳ್ರಿ ಎನ್ನುತ್ತ ಓಡಿದಳು. ಮಾನವ್ವನ ಆಕಾರ ಕಂಡು ಗಾಬರಿಯಾದ ಸುನಂದೆಗೆ ಮಾತೇ ಹೊರಡಲಿಲ್ಲ. ಅವಳ ಮೈಮೇಲಿನ ಸೀರೆ, ಕುಪ್ಪಸಗಳು ಅಲ್ಲಲ್ಲಿ ಹರಿದಿದ್ದವು. ತುರುಬು ಬಿಚ್ಚಿ ಕೂದಲು ಹಾರಾಡುತ್ತಿದ್ದವು. ಮುಖ ಕೈಗಳ ಮೇಲಾದ ಗೀರು ಗಾಯಗಳಿಂದ ರಕ್ತ ಒಸರುತ್ತಿತ್ತು. ಒಂದು ಕೈಯಲ್ಲಿ ಚಪ್ಪಲಿ ಇತ್ತು. ಎದೆಯ ಮೇಲಿನ ಸೆರಗಿನ ಖಬರು ಇರಲಿಲ್ಲ. ಮುಖ ಸಿಟ್ಟಿನಿಂದ ಕೆಂಪಾಗಿ ಉರಿಯುತ್ತಿತ್ತು. ಶೇಕವ್ವನನ್ನು ತಬ್ಬಿಕೊಂಡು ನೆಲಕ್ಕೆ ಕುಳಿತು ಅಳಹತ್ತಿದಳು ಮಾನವ್ವ. ಅವಳ ದುಃಖ ಹರಿದು ಹೋಗುವವರೆಗೆ ತುಟಿ ಎರಡು ಮಾಡದೆ ಸುನಂದೆ ಸುಮ್ಮನೆ ನೋಡುತ್ತಿದ್ದಳು.

"ಆ ಬೋಸುಡಿ ಕಡಿಗೂ ನನ್ನ ಮೂಗ್ತಿ ಕೊಡಲೇ ಇಲ್ರೀ ಅವ್ವಾರ."

'ಏನಿದು? ಯಾರು ಆಕಿ?' ನಾಲ್ಕಾರು ತಿಂಗಳ ಹಿಂದೆ ಕಳೆದು ಹೋದ ಮೂಗಿತಿಯ ವಿಷಯ ಮತ್ತೆ ಬಂದಾಗ ಸುನಂದೆಯ ಕುತೂಹಲ ಹೆಚ್ಚಿತು.

"ಈ ಊರ ಭಾಡ್ಯಾ ನನ್ನ ಮೂಗ್ತಿ ಬಿಚಿಗೊಂಡು ಆಕೀಗೆ ಕೊಟ್ಟಿದ್ದಾನು ಅನ್ನೂ ಸಂಶೇ ನನಗೆ ಇತ್ರಿ ಅವ್ವಾರ. ಇವತ್ತ ಚಿನ್ನವ್ವ ಹೇಳಿದ್ಳು. ಆ ಮಲ್ಲಿ ನಿನ್ನ ಮೂಗಿನ್ಯಾಗಿಂದು ಇಟಕೊಂಡಾಳ ಅಂತ."

'ಮುಂದ? ನೀ ಆಕೀ ಕೂಡ ಜಗಳಾ ಮಾಡಿದೇನ?'

'ಮತ್ತ ಕೇಳಿ ಸುಮ್ಮನ ಇರಲೇನ್ರಿ. ಹಾಲು ಕೊಡೂ ಬಸಪ್ಪನ ತಂಗಿರಿ ಆಖಿ. ಪೋಸ್ಟಿನ ಹಂತ್ಯಾಕ ಐತ್ರಿ ಅವರ್ಮನಿ. ಆಕಿ ಕಟಿಗ್ಗೆ ಹೋಗೂ ಮುಂದ ಬರೂಮುಂದ ಹಾದ್ಯಾಗ ಕುಂತಿರತಾನಲ್ರಿ ಇವಂಗ ಗಂಟು ಬಿದ್ದಾಳ್ರಿ ಆ ಮನಿಹಾಳ ಮೂಳಿ."

"ಆಕೀನ ಎಂದೂ ನಮ್ಮ ಕಂಪೌಂಡಿನ್ಯಾಗ ನೋಡಿಲ್ಲಾ. ಆಕಿ ಹ್ಯಾಂಗ ಬಂದು ಗಂಟು ಬಿದ್ದಳ ನಿಂಗಪ್ಪಗ" ಸುನಂದೆ ಛೇಡಿಸಿದಳು.

ಕಣ್ಣೀರಿನಲ್ಲೇ ನಗುತ್ತ ಮಾನವ್ವ, "ಚ್ಯಾಷ್ಟಿ ಮಾಡ್ತಿರೇನ್ರಿ ಅವ್ವಾರ. ಇದ ನಮ್ಮ ಮೂಳ ಹೊಕ್ಕತ್ರಿ ಆಕಿ ಹಂತ್ಯಾಕ. ಗಂಡಸರ ಕಚ್ಚಿ ಬದ್ರ ಇರೊದಿಲ್ಲ ಬಿಡ್ರಿ. ಅದರ ಆಕಿ ಮುಕ್ಕಾಟಲೆ ಮಾನವಂತಿ ಆಗಿ ಇರಬೇಕಲ್ರಿ."

ಸುನಂದೆಯ ಕುತೂಹಲ ವಿಚಿತ್ರ ಭಯಕ್ಕೆ ತಿರುಗುತ್ತಿತ್ತು. ತನ್ನ ಗಂಡ ಬೇರೆ ಹೆಣ್ಣಿನ ಸಂಗ ಮಾಡಿದರೆ ಕ್ಷಮಿಸಬಲ್ಲಳು ಮಾನವ್ವ. ಆದರೆ ಗಂಡನಿಲ್ಲದ ಮಲ್ಲಿ ಮಾಡಿದ್ದು ಮಾತ್ರ ಮಾನಗೇಡಿಯ ಕೆಲಸ. ನಿಂಗಪ್ಪನನ್ನು ದೂರವಿಟ್ಟು ನಿನ್ನ ವಸ್ತು ನೀನು ತೆಗೆದುಕೊ ಎಂದು ಇವಳ ಮನೆಗೆ ತಂದು ಒಪ್ಪಿಸಬೇಕಾಗಿತ್ತೇನೋ ಮಾನವ್ವನಿಗೆ. ತಪ್ಪು ಮಾಡಿದ್ದು

ಗಂಡಸರಾದರೂ ಹೆಣ್ಣು ಇನ್ನೊಂದು ಹೆಣ್ಣನ್ನೇ ದೂರಬೇಕೇ? ಅವಳ ಬಗ್ಗೆ ಸಹಾನುಭೂತಿ ಅವಳಲ್ಲಿ ಹುಟ್ಟದೇ? ಸುನಂದೆಯ ಒಡಲೊಳಗೆ ಒಂದು ನೋವು ಹುಟ್ಟಿತು. ಅದಕ್ಕೆ ರೆಕ್ಕೆ-ಪುಕ್ಕೆಗಳೂ ಮೂಡಿಕೊಂಡು ಚಿತ್ರವಾಯಿತು.

ಮೂರ್‍ನಾಲ್ಕು ವರ್ಷಗಳ ಹಿಂದೆ ಸಂಗೀತಳು ಬಸಿರನಲ್ಲಿದ್ದಾಗಿನ ಮಾತು. ಅಗಸನಿಗೆ ಕೊಡಲೆಂದು ಗಂಡನ ಪ್ಯಾಂಟು-ಶರ್ಟ್ ಖಾಲಿ ಮಾಡುತ್ತಿದ್ದ ಸುನಂದೆಯ ಕೈಗೊಂದು ಪತ್ರ ಸಿಕ್ಕಿತು. ಅವರ ಆಫೀಸಿನ ಹುಡುಗಿಯೊಬ್ಬಳು ಬರೆದದ್ದು. ವಿಶ್ವನಾಥ ಟೂರಿಗೆ ಹೋಗಿದ್ದ ಸಮಯದಲ್ಲಿ ಅಲ್ಲಿ ಅವಳ ತಂದೆಗೆ ಹುಷಾರಿಲ್ಲದಾಗ ಇವನು ಸಹಾಯ ಮಾಡಿದ್ದ ಕೃತಜ್ಞತೆ ಸಲ್ಲಿಸಿ, ಇನ್ನೊಮ್ಮೆ ಬಂದಾಗ ಖಂಡಿತ ತಮ್ಮ ಮನೆಗೆ ಬರಬೇಕೆಂದು ಬರೆದಿದ್ದಳು.

ಮಾತೇನೋ ಸಣ್ಣದು ಆದರೂ ಸುನಂದೆಗೆ ಏಕೋ ಸಂಕಟವಾಗಿತ್ತು. ಪತ್ರ ಬಂದಾಗ ಇವಳಿಗೆ ತೋರಿಸಿ ಆ ಹುಡುಗಿಯ ವಿಷಯ ಹೇಳಿಬಿಟ್ಟಿದ್ದರೆ ನಿರುಂಬಳವಾಗುತ್ತಿತ್ತು. ಇವಳಾಗಿಯೇ ಕೇಳಿದಾಗ ಮರೆತು ಬಿಟ್ಟಿದ್ದೆ. ಅದೇನು ದೊಡ್ಡ ವಿಷಯ ಅಲ್ಲ. ಅದನ್ನು ಬೆಳೆಸಬೇಡ ಎಂದು ದನಿ ಏರಿಸಿ ಮಾತನಾಡಿದ್ದ ವಿಶ್ವನಾಥ. ಆ ಮಾತಿನ ಹಿಂದೆ ನಾನೇನು ಮಾಡಿದರೂ ಪ್ರಶ್ನಿಸಲು ನೀನಾರು ಎನ್ನುವ ಧ್ವನಿ ಇತ್ತು. ಇವಳೂ ಕೂಗಾಡಿ ಮಾತು ಬಿಟ್ಟು ತವರು ಮನೆಗೆ ಹೊರಟು ಹೋಗಿದ್ದಳು. ಆದರೆ ಮುಂದೆ ಆದದ್ದೇನು? ಮಗಳು ಹುಟ್ಟಿದ ಮೇಲೆ ಕರೆಯಲು ಬಂದ ಗಂಡನೊಡನೆ ಸುಮ್ಮನೆ ಬಂದುಬಿಟ್ಟಿದ್ದಳು. ಆದರೆ ಆ ನೋವು ಬೆರಳಾಡಿಸುತ್ತ ಇರುತ್ತಿತ್ತು.

'ಅವ್ವಾರ ಇರಲಿ ಬಿಡ್ರಿ. ಆಳತೀರ್ಯಾಕ'

ವಿಶ್ವನಾಥ ಹೇಳುವ ಹಾಗೆ ತಾನು ಅಗತ್ಯಕ್ಕಿಂದ ಹೆಚ್ಚಿನ ವಿಚಾರ ಮಾಡುತ್ತಿದ್ದೇನೆ ಎಂದುಕೊಂಡು ನಕ್ಕಳು ಸುನಂದೆ. 'ಮುಂದೆ ಏನಾತು?'

'ನನ್ನ ಮೂಗುತಿ ತಿರುಗಿ ಕೊಡು ಅಂತ ಮಲ್ಲಿಗೆ ಕೇಳಿನ್ರಿ. ಆಕಿ ಹೊಯ್ಮಾಲಿ ಹಾಂಗ ಕೊಟ್ಟಾಳ್ರೆ. ನಿನ್ನ ಗಂಡನ್ನ ಕೇಳ ನನಗ್ಗೊತ್ತಿಲ್ಲ ಅಂದು ಹೊಂಟಳ್ರಿ. ನಾ ಯಾಕ ಬಿಡಲಿ. ತುರುಬು ಹಿಡದು ಜಗ್ಗಿ ಪಟಾ ಪಟಾ ಬಡದಿನ್ರಿ. ಆಕೀನೂ ನಾಕ ಏಟ ಬಡಿದು ನನ್ನ ಸೀರಿ, ಕುಬಸಾ ಹರದಳ್ರಿ. ಮೂಗುತೀ ಜಗ್ಗಾಕ ಹೋದೆ ಸಿಗಲಿಲ್ಲಾ. ಮೂಗ ಕಡದಿನ್ರಿ ಲಬ ಲಬಾ ಹೊಯ್ಕೊಂಡಾಳ್ರಿ ಹೊಟ್ಯಾಗಿನ ಸಂಕಟಕ ಕಾಲಾಗಿನಂದು ತೊಗೊಂಡು ಬಾರಿಸಿದಿನ್ರಿ. ಬಸರ ಹೆಣಮಗಳ್ರಿ, ಏನಾರ ಆದೀತು ಅಂತ ಒಣ್ಯಾನ್ನವರು ಬಂದು ಬಿಡಿಸಿದ್ರಿ ಆದರೂ ನನ್ನ ಮೂಗತಿ ಸಿಗಲಿಲ್ಲಾ."

'ನಿಂಗಪ್ಪ ಇದ್ನೇನ ಅಲ್ಲೆ?'

'ಅಂವಾ ಯಾಕ ಸಾಯಕ ಬರತಾನ್ರಿ ಅಲ್ಲೆ. ಎಲ್ಲಿ ಹೋಗ್ಯಾನೋ ಎಡ್ಡ ದಿನಾ ಆತು ಮನೀಗ ಬಂದಿಲ್ಲಾ. ಸಂತೀನೂ ಮಾಡಿಲ್ರಿ ನಡೀ ಶೇಕೂ, ಒಲಿ ಹೊತ್ತಸು. ಹಸದಿದ್ದೀ. ಒಂದೀಟ ರೇಶನ್ ಅಕ್ಕಿ ಅದಾವ ಹಾಕ್ತೀನಿ.' ಮಾನವ್ವ ಎದ್ದಳು.

* * * *

'ನಿಮ್ಮ ಮನೀ ಹಿಂದಿನ ಕ್ವಾಣಿ ಕೊಡ್ತಿರೇನ್ರಿ ನಮಗ ಇರಾಕ." ಒಂದು ಸಂಜೆ ನಿಂಗಪ್ಪ ಬಂದು ಕೇಳಿದ್ದ. ಮಾನವ್ವ ಅವನ ಹಿಂದೆ ನಿಂತಿದ್ದಳು. "ನನ್ನ ಹೇಣ್ತಿ ನಿಮ್ಮ ಮನೀ ಕಸಾ ಮುಸರಿ ಮಾಡ್ತಾಳು. ಹೇಳಿದ ಕೆಲ್ಸಾ, ಮಾಡ್ತಾಳು. ಕೊಟ್ಟರ ನಿಮ್ಮ ಉಪಕಾರ ಭಾಳ ಆಕ್ಕೆತಿ. ನಾವು ಇದ್ದ ಕ್ವಾಣಿ ಮನಸಿಪಾಲಿಟಿಯವರು ಕೆಡವತಾರ್‍ರಿ, ಇರಾಕ ಜಾಗಾ ಇಲ್ಲ ನಮಗ." ನಿಂಗಪ್ಪ ವಿನಯದಿಂದ ಬೇಡಿಕೊಂಡಿದ್ದ ಒಳ್ಳೆಯ ಕೆಲಸದವರು ಸಿಗದೆ ಪರದಾಡುತ್ತಿದ್ದ ವಿಶ್ವನಾಥ-ಸುನಂದೆಯರು ಒಂದೆರಡು ದಿನ ವಿಚಾರ ಮಾಡಿ ಒಪ್ಪಿಗೆ ಕೊಟ್ಟಿದ್ದರು. ಬರಬರುತ್ತ ಅವರ ಸಂಸಾರದ ಸಂದಿಗೊಂದಿಗಳೆಲ್ಲ ಪರಿಚಯವಾಗಿದ್ದವು. ಹತ್ತುಹನ್ನೆರಡು ವರುಷಗಳ ಹಿಂದೆ ವಾಚ್‌ಮನ್ ಆಗಿದ್ದ ನಿಂಗಪ್ಪ ಹೆಣ್ಣಾಳನ್ನು ಕೆಣಕಿ ಕೂಲಿಯವರಿಂದ ಹೊಡೆತ ತಿಂದು ಆಸ್ಪತ್ರೆ ಸೇರಿದ್ದ. ಮಾನವ್ವ ದುಡಿದು ಜೋಪಾನ ಮಾಡಿದ್ದಳು. ತಾನು ಅದುವು ಮನುಷ್ಯನೆಂದು ನಿಂಗಪ್ಪ ಈಗಂತೂ ದುಡಿತವನ್ನೆ ಸಂಪೂರ್ಣ ಬಿಟ್ಟುಕೊಟ್ಟಿದ್ದ. ವಿಷಯ ತಿಳಿದ ಮೇಲೆ ವಿಶ್ವನಾಥ ಕೂಗಾಡಿ ಈಗ ಸುಮ್ಮನಾಗಿದ್ದ. ತಿಂಗಳುಗಳು ಕಳೆದರೂ ಮಾನವ್ವ ತನ್ನ ಮೂಗುತಿ ನೆನಸಿಕೊಂಡು ಅಳುವುದನ್ನು, ಗಂಡನನ್ನು ಶಪಿಸುವುದನ್ನು ಬಿಟ್ಟಿರಲಿಲ್ಲ.

'ಆವ್ವಾರ' ಮಾನವ್ವ ಒಂದು ಬಟ್ಟೆಯ ಗಂಟನ್ನು ಹಿಡಿದುಕೊಂಡು ಹಿತ್ತಿಲ ಬಾಗಿಲಿಗೆ ನಿಂತಿದ್ದಳು. ಏನೆಂದು ಕೇಳಲು ಹೋದ ಸುನಂದೆ ಮಾತು ಬಾರದೆ ನಿಂತಳು. ಕಣ್ಣುಮುಚ್ಚಿ ಬೆಚ್ಚಗೆ ಮಲಗಿದ್ದ ಗಂಡು ಮಗು ಅವಳ ಉಡಿಯಲ್ಲಿತ್ತು.

'ಮಲ್ಲಿಗೆ ಈಗೊಂದ ತಿಂಗಳಿಂದ ಆರಾಮ ಇದ್ದಿದ್ದಿಲ್ಲಂತ್ರಿ. ದಿನಾ ತುಂಬಿದ್ದವು. ಅದೇನೋ ಬಡ್‌ಪಶರ್, ಅದು ಹೆಚ್ಚಾಗಿತ್ತಂತ. ಆಶಕ್ತನೂ ಆಗಿದ್ದಳ್ರಿ, ಗಂಡ ಇಲ್ಲ ಮಿಂಡಗ ಬಸರಾದ್ರ ಯಾರ ಕೇಳಬೇಕ್ರಿ. ತಾನೂ ದುಡದು ತಿನ್ನಬೇಕು.. ನೆಟ್ಟಗೆ ಹೊಟ್ಟಿಗೆ ಇರತಿದ್ದಿಲ್ಲ. ಮೊನ್ನೆ ಬ್ಯಾನಿ ಎದ್ದಾಗ ಮುನಿಸಿಪಾಳ್ಟಿ, ದವಾಖಾನಿಗೆ ಇಂವನ ಕರಕೊಂಡ ಹೋಗಿದ್ನಂತ. ಖರ್ಚಿಗೆ ಮೂಗುತಿ ಮಾರಿದ್ನಂತ, ಹಡ್ಯಾಣ ತರಾಸು ಆಗಿ ಮಲ್ಲಿ ಸತ್ತಳ್ರಿ. ಆದರ ಈ ದಿಕ್ಕೇಡಿ ಕೂಸಾ ಬದಕೀತು. ಇಂವಾ ತೊಗೊಂಡು ಬಂದು ನನ್ನ ತಪ್ಪಾತು ಹೊಟ್ಟ್ಯಾಗ ಹಾಕೋ. ಇದು ನಂದ ಕೂಸು. ಪರದೇಶಿ. ಈ ನಿನ್ನ ಕೈಯ ಕಾಲಂತ ತಿಳಿಕೊಂಡ ಹಿಡಿತೀನಿ. ಇದಕ್ಕೆ ತಾಯಿ ಆಗು. ಜ್ವಾಪಾನಾ ಮಾಡು ಅಂತ ಅಳಾಕ ಹತ್ತಿದನ್ರಿ. ನನಗೂ ದುಕ್ಕ ಆತು. ಆ ಹೊಲಸರಂಡಿ ಸತ್ತುಹೋದಳು. ಈ ಕೂಸು ಏನು ಪಾಪಾ ಮಾಡೇದ. ನನಗೂ ಗಂಡು ಮಕ್ಕಳು ಇಲ್ಲಾ. ಇರಲಿ ಬಿಡು ಅಂದಿನ್ರಿ. ಹಾಂಗ ಬಿಟ್ರ ಅನಾತ ಆಕ್ಕತ್ರಿ, ಕೂಸಿಗೆ ಒಂದು ತುತ್ತು ಹಾಕಿ ಬೆಳಸಿದರೆ ಶಿವಾ ಮೆಚ್ಚಾನು ಅಲ್ರೀ ಆವ್ವಾರ?'

ಗೊಂಬೆಯಂತೆ ಗದ್ದಕ್ಕೆ ಕೈಕೊಟ್ಟು ಸುನಂದ ಮೂಕಳಾಗಿ ನಿಂತೇ ಇದ್ದಳು. ಚಳಿಗೆ ಬೆದರಿ ಕಣ್ಣು ತೆಗೆದು ಅಳುತ್ತಿದ್ದ ಮರಿನಿಂಗಪ್ಪನನ್ನು ಸೆರಗು ಮುಚ್ಚಿ ಎದೆಗೆ ಒತ್ತಿಕೊಂಡಳು ಮಾನವ್ವ.

# 3. ಕೀಟಪ್ರಿಯರನ್ನು ವರಿಸಿದಾಗ...

**– ಜ್ಯೋತ್ಸ್ನಾ ಕಾಮತ್**

ನಾನು ಪಾಂಡಿತ್ಯಪ್ರೇಮಿ! ವರಿಸಿದರೆ, ವಿದ್ವಾಂಸನೊಬ್ಬನನ್ನೇ ವರಿಸುವುದು! ಎಂದು ಚಿಕ್ಕಂದಿನಿಂದಲೇ ನಿರ್ಧರಿಸಿದ್ದೆ. ಹೀಗಾಗಿ ಅಮೇರಿಕೆಯಲ್ಲಿ ಡಾಕ್ಟರೇಟು ಮಾಡಿದಾತ, ಘನ ವಿಧ್ವಾಂಸನೇ ಸರಿ, ಎಂದು ಹಿಂದೆ ಮುಂದೆ ವಿಚಾರಿಸದೇ ರಾಯರನ್ನು ಬಾಳ ಸಂಗಾತಿಯನ್ನಾಗಿ ಮಾಡಿಕೊಂಡಿದ್ದೆ. ಆದರೆ ಮದುವೆಯಾದ ಹೊಸದರದಲ್ಲೇ ಅವರು ನುಸಿ, ನೊಣ, ಸೊಳ್ಳೆ, ಜಿರಳೆಗಳ ಪಂಡಿತರು ಎಂದು ತಿಳಿದು ಮೋಸ ಹೋದದ್ದು ಅರಿವಾಯಿತು! 'ಪಾಲಿಗೆ ಬಂದದ್ದೇ ಪಂಚಾಮೃತ' ಎಂದು ಸಮಾಧಾನ ಮಾಡಿಕೊಳ್ಳದೇ ನಿರ್ವಾಹವೇ ಇರಲಿಲ್ಲ. ಅಂತೆಯೇ ಅವರು ರಾಜಸ್ಥಾನದ ಕೃಷಿ ವಿಶ್ವವಿದ್ಯಾಲಯದಲ್ಲಿ ಕೀಟ ಪಂಡಿತರು ಎಂದು ನೌಕರಿಗೆ ಸೇರಿಕೊಂಡಾಗ ರಾಮನನ್ನು ನಂಬಿದ ಸೀತೆ ವನವಾಸಕ್ಕೆ ಹೊರಟಂತೆ ನಾನೂ ನೀರಿಲ್ಲದ, ಮರುಭೂಮಿಯ ಒಣವಾಸಕ್ಕೆ ರಾಯರನ್ನು ಅನುಸರಿಸಿದ್ದೆ. ಆ ರೇಗಿಸ್ತಾನದಲ್ಲಿ ಅತ್ಯುಗ್ರ ಕೀಟಗಳಿಗೆ ಮೀಸಲಾದ ಅವರ ಗಮನ, ಲಕ್ಷ್ಯ–ಆರೈಕೆಗಳು ಇನ್ನು ಮುಂದೆ ನನಗೇ ಮೀಸಲು ಎಂದು ಭಾವಿಸಿದ್ದೆ! ನನ್ನ ಸಕಲ ಊಹೆಗಳೂ ಹುಸಿ ಹೋದಾಗ ನವ ವಿವಾಹಿತೆಯ ಮನಃಸ್ಥಿತಿ ಊಹಿಸುವುದು ಇತರರಿಗೆ ಬಿಟ್ಟದ್ದು!

ಬೆಡ್‌ರೂಮಿನ ತುಂಬ ಮಾಟವಾದ ತೇಗಿನ ಅಂದ–ಚಂದದ ಪೆಟ್ಟಿಗೆಗಳನ್ನು ರಾಯರು ಓರಣವಾಗಿ ಜೋಡಿಸಿಟ್ಟಿದ್ದರು. ಒಳ್ಳೆಯ ಛಾಯಾಚಿತ್ರಕಾರರೆಂದು ಗೊತ್ತಿದ್ದರಿಂದ ಅವುಗಳಲ್ಲಿ ಸುಂದರವಾದ ಛಾಯಚಿತ್ರಗಳಿರಬಹುದು, ಕೆಲವುಗಳಲ್ಲಾದರೂ ನೋಟಿನ ಕಂತೆಗಳನ್ನೋ, ಬೆಳ್ಳಿಯ ನಾಣ್ಯಗಳನ್ನೋ ಇಟ್ಟಿರಬಹುದು ಎಂದು ಪುಳಕಗೊಂಡಿದ್ದೆ. ಕೆಲ ದಿನ ಕಳೆದ ಬಳಿಕ ಕುತೂಹಲ ತಡೆಯದೇ ಕೇಳಿಯೂ ಬಿಟ್ಟೇ. ಉತ್ತರ ರೂಪದಲ್ಲಿ ನಸುನಗುತ್ತಾ ರಾಯರು ಆ ಪೆಟ್ಟಿಗೆಗಳನ್ನು ಇಳಿಸಿ ಹಾಸಿಗೆಯ ಮೇಲೆ ಇರಿಸಿ ಮುಚ್ಚಳ ತೆಗೆದರು. ವ್ಯಾಕ್! ನಾನು ಹೆದರುತ್ತಿರುವ, ಅಸಹ್ಯಪಟ್ಟುಕೊಳ್ಳುತ್ತಿರುವ ಕೀಟಕೋಟಿಯ ಕೆಲ ಮಾದರಿಗಳು ಪೆಟ್ಟಿಗೆಯಲ್ಲಿ ವಿರಾಜಮಾನವಾಗಿದ್ದವು! ಮುಖ ಗಂಟಿಕ್ಕಿ ಅಲ್ಲಿಂದ ಕಂಬಿ ಕೀಳಲಿದ್ದಾಕೆಯನ್ನು ಇವರು ತೋಳು ಹಿಡಿದು ನಿಲ್ಲಿಸಿದರು. 'ಇವು ನನಗೆ ಪಂಚಪ್ರಾಣ! ಇನ್ನು ಮುಂದೆ ನೀನು ನನಗಿಂತ ಮಿಗಿಲಾಗಿ ಈ ಕೀಟ–ಧನವನ್ನು ಪ್ರಯತ್ನಪೂರ್ವಕವಾಗಿ ಪ್ರೀತಿಸು' ಎಂದು ಅನುನಯದಲ್ಲೇ ಕೇಳಿಕೊಂಡರು. ಕೀಟಪ್ರಿಯರನ್ನು ಪ್ರಿಯತಮನನ್ನಾಗಿಸಿ ಆರಿಸಿದ್ದಕ್ಕೆ ಈ ಬೆಲೆ ಅಲ್ಲವೇ! ಇದು ಕ್ರಿಮಿ ಸಮಾನ! ಎಂದೆನಿಸಿದರೂ ಆಗಲಿ ಎಂದೆ. 'ಒಳ್ಳೇ ಹುಡುಗಿ!' ಎಂದು ಬೆನ್ನು ತಟ್ಟಿದರು. ಅಲ್ಲಿಂದ ನನಗೆ ಕೀಟಲೋಕದ ಪರಿಚಯ ನೀಡಲಾರಂಭಿಸಿದರು.

ಒಂದು ರವಿವಾರ, ತಮ್ಮ 'ಕೀಟ ಖಜಾನೆ'ಯ ೧೩ನೇ ನಂಬರಿನ ಪಟ್ಟಿಗೆಯನ್ನು ಪ್ರದರ್ಶಿಸುತ್ತ ವಿವರಣೆ ನೀಡಲಾರಂಭಿಸಿದರು. 'ನಮ್ಮದು ಬಡದೇಶವೆಂದು ಪಾಶ್ಚಿಮಾತ್ಯರು ಹೇಳುತ್ತ ಬಂದರೂ, ಇಂಥ ಜೀವಕೋಟಿಯಲ್ಲಿ ನಮ್ಮನ್ನು ಸರಿಗಟ್ಟುವವರು ಬೇರಾರೂ ಇಲ್ಲ. ನಮ್ಮಲ್ಲಿರುವ ಕೀಟ ವೈವಿಧ್ಯದಿಂದ ಅಮೇರಿಕನ್ನರಿಗೆ ಹೊಟ್ಟೆ ಕಿಚ್ಚಾಗಿದೆ! ಅವುಗಳನ್ನು ಅಪಹರಿಸಲೆಂದೇ, ಮಹಮ್ಮೂದ ಗಝುನಿಯನ್ನು ಮೀರಿಸಿ ಐವತ್ತು ಬಾರಿ ಭಾರತಕ್ಕೆ ದಾಳಿ ಮಾಡಿದರೂ ಆಶ್ಚರ್ಯವಿಲ್ಲ! ಆದರೆ ಈ ವೈಜ್ಞಾನಿಕ ದಾಳಿ, ಬೆಳ್ಳಿ–ಬಂಗಾರಗಳಿಗಾಗಿ ಅಲ್ಲವಾದ್ದರಿಂದ ಯಾರ ಗಮನಕ್ಕೂ ಬರುವುದಿಲ್ಲ! ಆದ್ದರಿಂದ ಮೊದಲೇ ಎಚ್ಚರ ನೀಡುತ್ತೇನೆ, ನಮ್ಮಲ್ಲಿರುವ ಕೀಟ ಸಂಪತ್ತಿನ ಕುರಿತು ಯಾರಲ್ಲಿಯೂ ಬಾಯಿ ಬಿಡಕೂಡದು! ಬಚ್ಚಿಟ್ಟ ಬೆಳ್ಳಿ, ಬಂಗಾರ, ಮುತ್ತು, ರತ್ನ, ಆಸ್ತಿಪಾಸ್ತಿಗಳಿಗಾಗಿ ಆದಾಯಕರ ಇಲಾಖೆಯವರು ಸಂದೇಹಾಸ್ಪದ ಜನರ ವಾಸಸ್ಥಾನಗಳ ಮೇಲೆ ದಾಳಿ ಮಾಡುವಂತೆ ಶೀಘ್ರದಲ್ಲಿ ಈ ಅಪೂರ್ವ ಕೀಟ ಸಂಗ್ರಹಕ್ಕಾಗಿ ದಾಳಿ ಪ್ರಾರಂಭವಾದರೆ ಆಶ್ಚಯವೇ ಇಲ್ಲ' ಎನ್ನುತ್ತ ಪೆಟ್ಟಿಗೆಗಳನ್ನು ತೆರೆಯಲಾರಂಭಿಸಿದರು.

"ಇಕೋ! ಈ ಜಿಟ್ಟೆ ನೋಡು, ಜಗತ್ತಿನಲ್ಲೇ ಅತಿ ವಿರಳವಾದ ಜಾತಿಯದು. ಬಂಗಾರದಲ್ಲಿ ತುಲಾಭಾರ ಮಾಡಬೇಕಾದದ್ದು! ಮತ್ತೆ ಈ ಜೀರುಂಡೆ, ಅಮೇರಿಕೆಯ ಸೂಚಿಪರ್ಣಿ ವೃಕ್ಷಗಳನ್ನು ಭಕ್ಷಿಸುವ ಕೀಟಗಳನ್ನು ನಿಯಂತ್ರಿಸುತ್ತದೆ. ಈ ಜೈವಿಕ ನಿಯಂತ್ರಣ ಪ್ರಯೋಗಕ್ಕಾಗಿ ಇದರ ಸಂತಾನಕ್ಕೆ ವಿಪರೀತ ಬೇಡಿಕೆ! ಚಿನ್ನದ ಮೊಟ್ಟೆಯಿಡುವ ಕುಕ್ಕುಟ ಎಂದೇ ತಿಳಿ! ಅನುಕೂಲ ಕೂಡಿ ಬಂದಾಗ ಅವುಗಳ ಸಂತಾನಾಭಿವೃದ್ಧಿ ಕೈಕೊಂಡು ಅಮೇರಿಕೆಗೆ ಅವನ್ನು ರಫ್ತು ಮಾಡಿ ಕೈತುಂಬ ಸಂಪಾದನೆ ಮಾಡಬೇಕು ಎಂದು ಕನಸು ಕಟ್ಟಿದ್ದೇನೆ... ಈಜಿಪ್ತಿನ ಕ್ಲಿಯೋಪಾತ್ರಳಿಗೂ ಮುಜುಗರ ಉಂಟು ಮಾಡುವ ಸುವರ್ಣಾಭರಣಗಳನ್ನು ನಿನಗೆ ತೊಡಿಸುತ್ತೇನೆ' ಎಂದು ಅಭಿಮಾನದಿಂದ ನುಡಿದರು. 'ಕ್ಲಿಯೋಪಾತ್ರಳ ಆಭರಣಗಳು ಅಷ್ಟೊಂದು ವೈಶಿಷ್ಟ್ಯಪೂರ್ಣವಾದುವೇ?' ಎಂದು ಕುತೂಹಲದಿಂದ ವಿಚಾರಿಸಿದಾಗ, 'ಅಲ್ಲವೇ ಮತ್ತೆ? ಕೈರೋ ವಸ್ತು ಸಂಗ್ರಹಾಲಯದಲ್ಲಿ ಅವನ್ನು ಕಣ್ಣಾರೆ ಕಂಡಿದ್ದೇನೆ! ಸುವರ್ಣದಲ್ಲಿ ಜೀರುಂಡೆಗಳನ್ನು ನಿರ್ಮಿಸಿ, ವಜ್ರ ವೈಢೂರ್ಯಗಳಿಂದ ಕೆಚ್ಚಿ ಕೊರಳ ಸರಗಳನ್ನು ಕಲಾತ್ಮಕವಾಗಿ ರಚಿಸಿದ್ದಾರೆ. ಇಂದು ಅಂಥ ಒಂದೇ ಒಂದು ಸರ ನಿರ್ಮಿಸಲು ಕನಿಷ್ಠ ೧೦ ಲಕ್ಷ ರೂಪಾಯಿ ಬೇಕು...' ಎನ್ನುತ್ತಿದ್ದಂತೆ, 'ಅವು ನಿಜವಾದ ಕೀಟಗಳಲ್ಲವಲ್ಲ! ಆದ್ದರಿಂದ ನನಗೂ ಅಂಥ ಕಂಠಾಭರಣ ಧರಿಸುವ ಆಸೆ! ರಾಯರು ಮಾಡಿಸಿದ್ದು! ಎಂದು ತೊಟ್ಟು ಅಭಿಮಾನದಿಂದ ಮೆರೆಯುತ್ತೇನೆ!' ಎಂದು ಮುಗ್ಧತೆಯಿಂದ ನುಡಿದಾಗ, 'ಕೀಟ ವ್ಯಾಪಾರದಿಂದ ಕೋಟಿ ಗಳಿಸುವ ಸಂದರ್ಭ ಬಂದಲ್ಲಿ ಖಂಡಿತ ಎರಡೆಳೆಯ ಜೀರುಂಡೆಯ ಸರ ಮಾಡಿಸುತ್ತೇನೆ' ಎಂದು ಖಚಿತ ವಾಗ್ದಾನ ಮಾಡಿದಾಗ ಉಬ್ಬಿ ಹೋಗಿದ್ದೆ.

ಸಾಯಂಕಾಲ, ತಮ್ಮ ಕೃಷಿ ವಿಶ್ವವಿದ್ಯಾಲಯದ ಆಸ್ತಿಪಾಸ್ತಿ ಚಟುವಟಿಕೆಗಳ ಕಲ್ಪನೆ ಕೊಡಲು, 'ವಿಹಾರ'ಕ್ಕೆ ಕರೆದೊಯ್ದರು. ಜೋಬನೇರದ ಹಳ್ಳಿಗೆ ಹೊಂದುವ ಯಾವ ಸೀರೆ ರವಿಕೆ ಧರಿಸಲಿ? ಎಂದು ಯೋಚಿಸುತ್ತಿದ್ದಾಗ, 'ನಿನ್ನನ್ನು ಅಲ್ಲಿ ಯಾರೂ ನೋಡುವುದಿಲ್ಲ! ಆ ಪ್ರಾಣಿ ಪ್ರಪಂಚವನ್ನು ನೀನೇ ಕಣ್ಣಾರೆ ನೋಡಬೇಕು!' ಎಂದು ಹಾಸ್ಯ ಮಾಡಿದರು. ಯಥೇಚ್ಛ ತಿಂದುಂಡು ಆನೆಗಳಂತೆ ಬೆಳೆದು ನಿಂತಿದ್ದ ಗೋವುಗಳನ್ನು ನೋಡಿ ತಬ್ಬಿಬ್ಬಾದೆ (ಕರಾವಳಿಯ ಆಡುಗಳಂತಹ ಆಕಳು ನೋಡಿದಾಕೆ ನಾನು!). ರಾಯರು, 'ಗುಲಾಬ್ ಸಿಂಗ್! ಸುಖವಾಗಿದ್ದೀಯ? ದನಕರುಗಳ ಉಣ್ಣಿ ಕಾಟ ಹೇಗಿದೆ?' ಎಂದು ವಿಚಾರಿಸಿದರು. 'ನಿಮ್ಮ ನಿವಾರಣೋಪಾಯದಿಂದ ಈಗ ನಿಯಂತ್ರಣಗೊಂಡಿದೆ ಬಾಬೂಜೀ...' ಎಂದು ವಿನಯದಿಂದ ಉತ್ತರಿಸಿದ. ಮುಂದೆ ಕುಕ್ಕುಟ ರಾಜ್ಯಕ್ಕೆ ಹೋದೆವು. ಅಲ್ಲಿಯ ಅಧಿಪತಿ ಭಂವರ್ ಲಾಲ್‌ನಿಗೆ, 'ಕೋಳಿಗಳ, ಹೇನು ಬಾಧೆ ಹೇಗಿದೆ?' ಎಂದು ಕೇಳಿದರು. 'ಈಗ ಅದೆಷ್ಟೋ ವಾಸಿ!' ಎಂದು ಆತ ಉತ್ತರಿಸಿದ. ಮೊಣಕೈ ಉದ್ದದ ಬೆಂಡೆಕಾಯಿ, ಹಾಲುಗುಂಬಳದ ಅಳತೆಯ ಬದನೆಕಾಯಿ, ಭಾರವಾಗಿ ಬೆಳೆದು ನಿಂತ ಕೋಸು, ಅರೆಯುವ ಕಲ್ಲಿನ ಆಕಾರದ ಹೋಗೋಸು, ಬಂಗಾರದ ತೆನೆಯಂತೆ ಹೊಳೆಯುತ್ತಿದ್ದ ಗೋದಿಯ ತೆನೆಗಳನ್ನು ಹೊತ್ತು ನಿಂತ ಹೊಲಗಳು, ಕಣ್ಣಿಗೆ ಹಬ್ಬವುಂಟು ಮಾಡಿದವು.

ಅಡಿಗೆ ಮನೆಯಲ್ಲಿ ತನ್ನ ಕೈಗೆ ಸುಲಭವಾಗಿ ಎಟುಕದಷ್ಟು ಎತ್ತರದ ನಾಗೊಂದಿಗೆಯ ಮೇಲೆ ಗಾಜಿನ ಭರಣಿಗಳನ್ನು ಸಾಲಾಗಿ ಜೋಡಿಸಿಟ್ಟಿದ್ದರು. ಒಮ್ಮೆ ಸ್ಟೂಲು ಹತ್ತಿ ಅವನ್ನು ಇಳಿಸಲು ಯತ್ನಿಸುವಷ್ಟರಲ್ಲಿ ರಾಯರು ಪ್ರತ್ಯಕ್ಷರಾದರು! 'ಮುಟ್ಟಬೇಡ! ಅವುಗಳಲ್ಲಿರುವ ಕೀಟಗಳನ್ನು ಕ್ರಮವಾಗಿ ಅರ್ಥೈಸುತ್ತಿದ್ದೇನೆ' ಎಂದರು. ವಿವಿಧ ಬಾಟ್ಲಿಗಳಲ್ಲಿದ್ದ ಕೀಟ–ಧನವನ್ನು ಕ್ರಮವಾಗಿ ಪರಿಚಯಿಸಲಾರಂಭಿಸಿದರು. 'ಇದು ಪಚ್ಚೆಸರಿನ ಕೀಟ. ಕಾಳುಗಳ ಮೇಲೆ ಮೂರು–ನಾಲ್ಕು ಮೊಟ್ಟೆ ಇಡುತ್ತದೆ. ಅವುಗಳಿಂದ ಹೊರ ಬಂದ ಕೀಟಮರಿಗಳು ಒಳಸೇರಿ ಪಿಷ್ಟಪದಾರ್ಥವನ್ನೆಲ್ಲ ತಿಂದು ದಷ್ಟಪುಷ್ಟವಾಗಿ ಬೆಳೆದು ಕಾಳನ್ನು ಪೋಲು ಮಾಡುತ್ತವೆ. ಸಕಾಲದಲ್ಲಿ ಸಂಗ್ರಹವನ್ನು ಪರೀಕ್ಷಿಸದಿದ್ದರೆ, ಏನೂ ಉಳಿಯುವುದಿಲ್ಲ! ಇಲ್ಲಿ ನೋಡು, ವಠಾಣಿ ಕಾಳಿನಿಂದ ಹೊರಬಂದ ಕೀಟಗಳು, ಪ್ರಣಯದಾಟ ನಡೆಸಿವೆ! ಮತ್ತೆ ಈ ಅಕ್ಕಿ–ಕೀಟಗಳು ತಮ್ಮ ಎಂಜಲಿನಿಂದ ಹೊರ ಹೊಮ್ಮಿಸಿದ ರೇಶಿಮೆಯಂಥ ಎಳೆಯಿಂದ ಹತ್ತಾರು ಕಾಳುಗಳನ್ನು ಜೋಡಿಸಿ ಅದರಲ್ಲಿ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಮೈದಾ, ಗೋಧಿ ಹಿಟ್ಟುಗಳಲ್ಲಿ ಬರಿಗಣ್ಣಿಗೆ ಕಾಣಿಸದ ಸೂಕ್ಷ್ಮ ಕೀಟಗಳು ಅಸಂಖ್ಯ ಪ್ರಮಾಣದಲ್ಲಿರುತ್ತವೆ...' ಎಂದೆಲ್ಲ ಹೇಳುತ್ತಿರುವಾಗಲೇ ಅವುಗಳ ಬಗ್ಗೆ ಜುಗುಪ್ಸೆ ಉಂಟಾಗಿ... 'ಇವುಗಳೆಲ್ಲ ನನ್ನ ಅಡಿಗೆ ಮನೆಯಲ್ಲಿ ಬೇಡವೇ ಬೇಡ! ನಿಮ್ಮ ಅಧ್ಯಯನ ಕೊಠಡಿಗೆ ವರ್ಗಾಯಿಸಿ!' ಎಂದು ದೃಢ ನಿರ್ಧಾರದ ಧ್ವನಿಯಲ್ಲಿ ಹೇಳಿದಾಗ, ರಾಯರು ಬೆಚ್ಚಿದರೂ, 'ಆಯಿತು, ಮಹಾರಾಯತಿ!' ಎಂದು ಆ ಕೂಡಲೇ ಕಾರ್ಯೋನ್ಮುಖರಾದರು.

ರಾಯರು ತಂದಿಟ್ಟ ಧಾನ್ಯಗಳು ಕೀಟ ಪೀಡಿತವೆಂದು, ತರಕಾರಿಗಳನ್ನು ತರಿಸಿದೆ. ಕೈಚೀಲದಿಂದ ತೆಗೆದ ತರಕಾರಿ ದರ್ಶನದಿಂದಲೇ ಪಿತ್ಥ ನೆತ್ತಿಗೇರಿತು. ಎರೆಹುಳುವಿನಂತೆ ಸುತ್ತಿಕೊಂಡಿದ್ದ ಬೆಂಡೆಕಾಯಿ, ಹಾವಿನಂತೆ ಅಕರಾಳ–ವಿಕರಾಳವಾಗಿದ್ದ ಬದನೆಕಾಯಿ, ಮೈ–ಕೈಗೆಲ್ಲ ಕಜ್ಜಿಯಾಗಿದ್ದ ಗಜ್ಜರಿ, ಕೋಸು! 'ಅಲ್ರೀ, ಕಣ್ಣು ಬಿಟ್ಟು ನೋಡಿಯೇ ಈ ತರಕಾರಿ ತಂದಿದ್ದೀರಿ ತಾನೇ?' ಎಂಬ ನನ್ನ ವ್ಯಂಗ್ಯ ಪ್ರಶ್ನೆಗೆ, 'ಹಾಗಲ್ಲ ಕಣೆ! ಇದ್ದ ಒಂದೇ ಜೋಡಿ ಕಣ್ಣನ್ನು ಹತ್ತಿ ಮಾಡಿ, ನೋಡಿಯೇ ನಾನು ಆರಿಸಿದ್ದೇನೆ...' ಎಂಬ ವಿವರಣೆ ಬಂದಿತು. ನನ್ನ ಸಿಟ್ಟು ಇನ್ನಷ್ಟು ಹೆಚ್ಚಿತು. 'ತರಕಾಯಿಯವನಿಗೇ ಆರಿಸಲು ಹೇಳಿದ್ದರೆ, ಅರ್ಧದಷ್ಟಾದರೂ ಒಳ್ಳೆಯ ತರಕಾರಿ ಸಿಗುತ್ತಿತ್ತೋ ಏನೋ!' ಎಂದೆ. 'ನನ್ನಂತೆ ನೀನೂ ಕೀಟಶಾಸ್ತ್ರ ಅಭ್ಯಾಸಿಸಿದ್ದರೆ, ನೀನೂ ಹೀಗೆಯೇ ಮಾಡುತ್ತಿದ್ದಿ. ಕೃಷಿ ವಿಶ್ವವಿದ್ಯಾನಿಲಯದ ಫಾರ್ಮಿನಲ್ಲಿ ಬೆಳೆದ, ಹುಲುಸಾದ ಕೀಟ ರಹಿತ ತರಕಾರಿ ನೀನು ನೋಡಿರುವಿ ಎಂದು ಗೊತ್ತು! ಆದರೆ ಅವುಗಳ ಆಕರ್ಷಣೆಯೆಲ್ಲ ಬಳಸಿದ ರಾಸಾಯನಿಕ ಗೊಬ್ಬರ ಮತ್ತು ಸಿಂಪಡಿಸಿದ ಅತ್ಯಂತ ವಿಷಕಾರಿ ಕೀಟನಾಶಕಗಳಿಗೆ ಸೇರಿ ಹೋಗುತ್ತದೆ. ಅವುಗಳ ಸೇವನೆ, ಅನಾರೋಗ್ಯಕ್ಕೆ ಅಮಂತ್ರಣವಿತ್ತಂತೆ! ನಾನು ತಂದ ಈ ತರಕಾರಿಯಲ್ಲಿ ಕೀಟಗಳು ಸುಖವಾಗಿ ವಾಸ ಮಾಡಿದ್ದರಿಂದ, ಅವುಗಳ ಮೇಲೆ ರಾಸಾಯನಿಕಗಳ ರಾಮಬಾಣ ಪ್ರಯೋಗವಾಗಿಲ್ಲ ಎಂಬುದು ಖಚಿತ! ಅಕಸ್ಮಾತ್ ಒಂದೆರಡು ಕೀಟಗಳು ಉದರಕ್ಕೆ ಇಳಿದರೂ ಅದರಿಂದ ಯಾವ ಹಾನಿಯೂ ಇಲ್ಲ. ಜನಸಂಖ್ಯೆ ಬೆಳೆಯುತ್ತಲೇ ಇರುವುದರಿಂದ ಕೀಟಗಳನ್ನೇ ಆಹಾರವಾಗಿ ಸೇವಿಸುವ ದಿನಗಳೂ ಮುಂದೊಮ್ಮೆ ಬರಲಿವೆ!' ಎಂದು ದೀರ್ಘ ವಿವರಣೆ ಕೊಟ್ಟರು. 'ಅದೇನೇ ಇರಲಿ, ಇಂಥ ತರಕಾರಿ ಮುಟ್ಟುವ ನನಗೆ ಅಳಕು. 'ಅದನ್ನು ನೀವೇ ತೊಳೆದು, ಕೀಟಗಳನ್ನು ಕಳೆದು ಹೆಚ್ಚಿ ಕೊಡಿ!' ಎಂದು ಅವರಿಗೇ ಕೆಲಸ ಹಚ್ಚಿದೆ. ಮುಂದೆ ಇದೇ ನೆವ ಮಾಡಿ ತರಕಾರಿ ತಂದಾದ ಮೇಲೆ ತೊಳೆದು ಹೆಚ್ಚಿ ಕೊಡುವ ಕೆಲಸ ಅವರಿಗೇ ಮೀಸಲಾಯಿತು ಎಂದು ಬೇರೆ ಹೇಳಬೇಕಿಲ್ಲವಷ್ಟೇ!

ನನ್ನ ಅತ್ಯಮೂಲ್ಯ ಇತಿಹಾಸ ಗ್ರಂಥಗಳಿಂದ ಹುಡಿ ಉದುರಲಾರಂಭಿಸಿತು! ಕೀಟ ಪಂಡಿತರನ್ನು ಕೂಗಿ ಕರೆದು ತೋರಿಸಿದೆ. 'ಇದೇನು ಮಹಾ! ಮಾನವರಲ್ಲಿ ಪುಸ್ತಕ ಕೀಟಗಳಿರುವಂತೆ ಕೀಟಲೋಕದಲ್ಲಿ ಗ್ರಂಥ ಷಟ್ಪಾದಿಗಳಿವೆ! ಮಾನವನು ಓದು ಬರಹಗಳನ್ನು ಪ್ರಾರಂಭಿಸುವ ಕೋಟ್ಯಂತರ ವರ್ಷಗಳ ಪೂರ್ವದಿಂದಲೇ ಇವು ಕಾಣಿಸಿಕೊಂಡಿವೆ! ಮನುಷ್ಯನಿಗಿಂತ ನಿಕಟವಾಗಿ, ಮೊದಲಿನಿಂದ ಮಳೆ, ಚಳಿ, ಬಿಸಿಲುಗಳಿಗೆ ಮೈಯೊಡ್ಡುವ ಬದಲಿಗೆ ಸುಭದ್ರವಾದ ಕಪಾಟುಗಳಲ್ಲಿ ಬೀಡು ಬಿಟ್ಟಿವೆ. ಈ ಪ್ರವೃತ್ತಿಯಲ್ಲಿ ತಪ್ಪೇನಿದೆ? ಅವು ನಿನ್ನ ಪುಸ್ತಕಗಳ ಹೊರ ಕವಚ, ಬೆನ್ನೆಲುಬುಗಳನ್ನು ಛಿದ್ರ ಮಾಡಿದರೂ ಅವುಗಳಲ್ಲಿದ್ದ ಘಟನೆಗಳನ್ನು ತಿಂದು ತೇಗುವುದಿಲ್ಲವಲ್ಲ!' ಎಂದು ತನ್ನ ಕೀಟ ಬಾಂಧವ್ಯ–ಪ್ರೀತಿ ತೋರ್ಪಡಿಸಿದಾಗ, ಅವರ ಬೆನ್ನಿಗೊಂದು ಗುದ್ದುವುದನ್ನು ಬಿಟ್ಟು ಇನ್ನೇನು ಮಾಡಲು ಸಾಧ್ಯವಿತ್ತು?

ಒಂದು ರಾತ್ರಿ ಸರ್ ಸರ್! ಭರ್ ಭರ್ ಎಂದು ಸದ್ದು ಪ್ರಾರಂಭವಾದಾಗ, ಸುಖ ನಿದ್ರೆಯಲ್ಲಿದ್ದ ರಾಯರು ಧಿಗ್ಗನೆದ್ದು ದೀಪ ಹಾಕದೇ ಕೈಯಲ್ಲಿ ಟಾರ್ಚ್ ಹಿಡಿದು ಬೆಡ್ ರೂಂ ಶೋಧಿಸಲಾರಂಭಿಸಿದರು. ಏನೋ ಅಪರೂಪದ ಅವಕಾಶ ಕಳೆದುಕೊಳ್ಳಬೇಡ, ಎನ್ನುವವರಂತೆ ನನ್ನನ್ನೂ ಬಡಿದೆಬ್ಬಿಸಿದರು. ಟಾರ್ಚ್ ಬೆಳಕಿನಲ್ಲಿ ಜೊಂಡಿಗ ಸಂಸಾರವನ್ನು ಕಂಡು ಕಿರುಚಿಕೊಳ್ಳುವಂತಾಯಿತು! 'ಶ್! ಶ್! ಸುಮ್ಮನಿರು! ಅವುಗಳ ಪ್ರಣಯ ಪ್ರಸಂಗಕ್ಕೆ ಆತಂಕ ಮಾಡಬೇಡ' ಎಂದು ಪಿಸುಮಾತಿನಲ್ಲಿ ಹೇಳಿದರು. 'ಜೊಂಡಿಗ ಶೃಂಗಾರ ವೀಕ್ಷಣೆಯ ರಸಿಕ ಶಿರೋಮಣಿಗಳೇ' ಎಂದು ಮೂದಲಿಸಿದೆ. 'ಕಾಮ ಚೇಷ್ಟೆಗಳೆಲ್ಲ ಕೇವಲ ಮಾನವರ ಸೊತ್ತು ಎಂದು ಬಗೆದೆಯಾ? ಋತು ಸ್ನಾನವಾದ ಜಿರ್ಲೆ ಕುಮಾರಿಯ ಮೈಯಿಂದ ಹೊರ ಸೂಸುತ್ತಿರುವ ಸುಗಂಧಕ್ಕೆ ಆಕರ್ಷಿತನಾಗಿ ಜೊಂಡಿಗ ರಾಜಕುಮಾರ ಧಾವಿಸಿ ಬಂದಿದ್ದಾನೆ. ಸತತವಾಗಿ ಮೀಸೆ ಅಲ್ಲಾಡಿಸುತ್ತ ಅವಳನ್ನು ಆಘ್ರಾಣಿಸುತ್ತ ಮುಂದುವರೆಯುತ್ತಿದ್ದಾನೆ. ನೋಡು!' ಎಂದರು. 'ಓಹ್! ಗಂಡು–ಹೆಣ್ಣು ಎಂದು ಈ ಕತ್ತಲೆಯಲ್ಲಿ ಕೀಟ ಪಂಡಿತರು ಹೇಗೆ ಗುರುತಿಸಿದರೋ!' ಎಂಬುದು ನನ್ನ ಕೊಂಕು. 'ಹೆಣ್ಣಿನ ಹೊಟ್ಟೆ ನೋಡಲ್ಲ! ಮೊಟ್ಟೆಗಳನ್ನು ತುಂಬಿಕೊಂಡು ಊದಿಕೊಂಡಿದೆ. ಕುಕ್ಕುಟಗಳಂತೆ ಹೆಣ್ಣುಕೀಟಗಳೂ ಗಂಡಿನೊಡನೆ ಕೂಡಿಕೊಳ್ಳುವ ಮುನ್ನವೇ ಭಾವಿ ಪೀಳಿಗೆಯನ್ನು ಬರಮಾಡಿಕೊಳ್ಳುವ ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿರುತ್ತವೆ... ತಿಳಿದುಕೊಳ್ಳಲು ಇಷ್ಟು ಸಾಕು!' ಜಿರಳೆ ಕೀಟ ಶರೀರ ವಿಜ್ಞಾನವನ್ನು ರಾಯರು ಸ್ವಲ್ಪದರಲ್ಲಿ ತಿಳಿಯಪಡಿಸಿದರು.

ನೋಡನೋಡುತ್ತಿದ್ದಂತೆ ಗಂಡು, ಉದ್ದ ಮೀಸೆಗಳಿಂದ ಹೆಣ್ಣಿನ ಅಂಗಾಂಗಗಳನ್ನು ಸ್ಪರ್ಶಿಸಲಾರಂಭಿಸಿತು. ಜೊಂಡಿಗ ಜೋಡಿಗೆ ತಮ್ಮ ಪಿಸು ಮಾತು ಕೇಳಿಸಬಾರದು ಎಂಬ ಎಚ್ಚರಿಕೆಯ ಮೇಲು ಪಿಸು ಮಾತಿನಲ್ಲಿ 'ಜಿರ್ಲೆ ಕುವರಿ, ನೀ ಬಲು ಸುಂದರಿ, ಎಷ್ಟು ಡೌಲು ವೈಯಾರಿ!' ಎಂದರು. ಅದಕ್ಕೆ ಸರಿ ಹೊಂದುವಂತೆ ಜಿರಳೆ ಕಾಮಣ್ಣ ತನ್ನೆರಡು ಗರಿ ಬಿಚ್ಚಿ ನವಿಲಿನ ವೈಯ್ಯಾರದಿಂದ(!) ನೃತ್ಯ ಪ್ರಾರಂಭಿಸಿತು. ಈ ಕೇಕೆಗೆ ಮರುಳಾದ ಕೀಟ ಕನ್ಯೆ, ತನ್ನ ಸ್ನೇಹಿತನನ್ನು ಸ್ವಾಗತಿಸಿದಳು. ಈ ನೋಟವನ್ನು ಸಹಿಸಲಾಗದ ಇನ್ನೊಬ್ಬ ಜೊಂಡಿಗ ಖಳನು ತನ್ನ ಉದ್ದ ಮೀಸೆಗಳನ್ನು ಭರ್ಜಿಯಂತೆ ತಿರುಗಿಸುತ್ತ, ಹತ್ತಿರಕ್ಕೆ ಬರುತ್ತಿದ್ದಂತೆ ಪ್ರೇಮ ಬಂಧಿತ ಜೋಡಿ ಅರೆಕ್ಷಣದಲ್ಲಿ ಕಾಲಿಗೆ ಬುದ್ಧಿ ಹೇಳಬೇಕೇ? ಜೀವದಾಸೆಗೆ ಅವು ಮಾಯವಾದ ಪರಿನೋಡಿ ಕನಿಕರವೆನಿಸದಿರಲಿಲ್ಲ. 'ಪಾಪ! ಅವಕ್ಕೂ ಆಸೆ–ಆಕಾಂಕ್ಷೆಗಳು ಇರುತ್ತವೆ. ತೀರ ಅಸಹಾಯಕ ಸ್ಥಿತಿಯಲ್ಲಿ ಅವನ್ನು ಆಹುತಿ ತೆಗೆದುಕೊಳ್ಳುವುದು ಬುದ್ಧಿಜೀವಿ ಎಂದು ಕರೆಸಿಕೊಳ್ಳುವ ಮಾನವನಿಗೆ ಗೌರವ ತರುವಂತಹುದಲ್ಲ!' ಎಂದು ನನ್ನಲ್ಲಿ ಬೌದ್ಧಿಕ ಜಾಗೃತಿಯನ್ನುಂಟು ಮಾಡುತ್ತಿದ್ದಂತೆ ಅಲ್ಲಿ ನೆರದಿದ್ದ ಜೊಂಡಿಗಗಳೆಲ್ಲ ಕಣ್ಮರೆಯಾಗಿ ಬಿಟ್ಟಿದ್ದವು.

ಮರುದಿನ ಮುಂಜಾನೆ ನಾಶ್ತಾ ತಯಾರಿ ಮಾಡುತ್ತಿದ್ದಾಗ ಹೆಣ್ಣು ಜಿರಳೆಯೊಂದು ತನ್ನ ಮೊಟ್ಟೆಗಳ ಚೀಲ ಹೊತ್ತು ಅತ್ತಿತ್ತ ಅಲೆದಾಡುವುದು ಕಂಡಿತು. ಅದನ್ನು ಕಂಡ ರಾಯರು, 'ಅದರ ಚೀಲದಲ್ಲಿ ಹದಿನಾರು ಮೊಟ್ಟೆಗಳಿರುತ್ತವೆ. ಅತ್ಯಂತ ಸುರಕ್ಷಿತ ಸ್ಥಳದಲ್ಲಿ ಚೀಲವನ್ನು ಅಂಟಿಸಿ ಸುರಕ್ಷಿತತೆಗಾಗಿ ಸುತ್ತಮುತ್ತಲಿನ ಸುಣ್ಣ ಮಣ್ಣಿನಿಂದ ಮುಚ್ಚಿ ಬಿಡುತ್ತವೆ. ಹೊರ ಬಂದ ಮರಿಗಳಿಗೆ ಗರಿಗಳು ಇಲ್ಲದಿದ್ದರೂ, ಉಳಿದೆಲ್ಲ ರೀತಿಯಲ್ಲಿ ಅವು ಪಾಲಕರನ್ನೇ ಹೋಲುತ್ತವೆ... ಒಂದು ಹೆರಿಗೆಯಲ್ಲಿ ಹದಿನಾರು ಮೊಟ್ಟೆಗಳು ಇರುವುದರಿಂದ ಅವುಗಳ ಸಂತಾನ ಬಲು ಬೇಗೆ ವರ್ಧಿಸುತ್ತದೆ...' ಎಂದು ಹೇಳುವಷ್ಟರಲ್ಲಿಯೇ ನಡುವೆಯೇ ಬಾಯಿ ಹಾಕಿ, 'ಮನೆ ತುಂಬ ಜಿರಳೆಗಳ ವಾಸ! ಅವುಗಳ ಮಲ–ಮೂತ್ರ ವಿಸರ್ಜನೆಯ ದುರ್ನಾತ ಅಸಹ್ಯವಾಗಿದೆ! ಅವನ್ನು ನೋಯಿಸದೆಯೇ ನಿಯಂತ್ರಿಸಬಾರದೇ?' ಎಂದು ಕೇಳಿಕೊಂಡೆ. 'ಯಾವ ಮನೆಯೂ ಜಿರಳೆಗಳಿಂದ ಮುಕ್ತವಾಗಿಲ್ಲ. ಅವುಗಳನ್ನು ನಿಯಂತ್ರಿಸಲು ಕಂಡು ಹಿಡಿದ, ಬಳಸುತ್ತಿರುವ ವಿಷೌಷಧಿಗಳು ನಮಗೂ ಎಷ್ಟೊಂದು ಅಪಾಯಕಾರಿ ಎಂದು ಆಧುನಿಕರು ಅರಿತಂತೆ ಇಲ್ಲ! ಮೊನ್ನೆ ಓರ್ವ ಗೃಹಿಣಿ ತನ್ನ ಸ್ವಾನುಭವದಿಂದ, "ಜಿರಳೆಗಳನ್ನು ನಿಯಂತ್ರಿಸಲಾಗದಿದ್ದರೆ, ಅವುಗಳ ಪಾಡಿಗೆ ಅವನ್ನು ಬಿಟ್ಟುಬಿಡಿ!" ಎಂಬ ನಿಜವಾದ ಹಿತೋಕ್ತಿ ಕೊಡ ಮಾಡಿದ್ದಾಳೆ. ಅಮೇರಿಕೆಯಂಥ ಮುಂದುವರೆದ ರಾಷ್ಟ್ರದಲ್ಲಿಯೂ ಜೊಂಡಿಗಗಳ ಸಂಖ್ಯೆ ಅಪಾರವಾಗಿದ್ದು, ಅವುಗಳಿಂದ ಮಕ್ಕಳ ಕಾಯಿಲೆಗಳು ಹೆಚ್ಚುತ್ತಿರುವುದನ್ನು ಕಂಡು ಹಿಡಿದಿದ್ದಾರೆ. ನಮಗೆ, ಜಿರಳೆಗಳೊಂದಿಗೆ ಸಹಜೀವನ ನಡೆಸುವುದೊಂದೇ ನಿರಪಾಯಕಾರಿ ಮಾರ್ಗ!' ಎಂದು ತಮ್ಮ ತೀರ್ಪನ್ನಿತ್ತರು.

ಆದರೆ ಕಾಟ ವಿಪರೀತಿ ಹೆಚ್ಚಿತು. ಹಾಲು, ಮೊಸರು, ಬೆಣ್ಣೆ, ತುಪ್ಪ, ಸ್ವಲ್ಪವೇ ಸಡಿಲಾದ ಮುಚ್ಚಳದ ಡಬ್ಬಗಳಲ್ಲೆಲ್ಲ ಜೊಂಡಿಗಗಳು ಭದ್ರವಾದ ಸಾಮ್ರಾಜ್ಯ ಕಟ್ಟಲು ಹವಣಿಸಲಾರಂಭಿಸಿದವು. ಈಗ ಮಾತ್ರ ರಾಯರಿಗೆ ಅವುಗಳ ಹತೋಟಿ ಅನಿವಾರ್ಯವಾಯಿತು. ಕಲೆ ಹಾಕಿದ ಖಾಲಿ ತೂತ್ ಪೇಸ್ಟ್ ಡಬ್ಬಗಳನ್ನು ತಂದರು. ಪ್ರತಿಯೊಂದಕ್ಕೂ ಮಾಟವಾದ ವರ್ತುಲಾಕಾರದ ಕಂಡಿಗಳನ್ನು ಮಾಡಿದರು. ಅವುಗಳ ಒಳಗೆ ಕಾಗದದ ಚೂರು ಸೇರಿಸಿ ಜಿರಳೆಗಳಿಗೆ ಮನೆಗಳನ್ನು ಕಟ್ಟಿ ಹಾಸಿಗೆಯನ್ನು ಸಿದ್ಧಪಡಿಸಿದರು! ಜಿರಳೆಗಳ ಓಡಾಟದ ಹಾವಳಿ ಹೆಚ್ಚು ಇರುವಲ್ಲಿ ಈ ನಾಲ್ಕಾರು ಮನೆಗಳನ್ನು ಇರಿಸಿದರು. ಇವು ಜಿರಳೆಗಳಿಗೆ ಅತ್ಯಂತ ನೆಮ್ಮದಿ ನೀಡುವ ಸುಖ ನಿವಾಸಗಳು! ಎಂದು ಘೋಷಿಸಿದರು. ರಾಯರ ಸಂಶೋಧನೆ ಹುಸಿ ಹೋಗಲಿಲ್ಲ. ಕೆಲ ದಿನಗಳ ಬಳಿಕ ಪ್ರತಿಯೊಂದು ಪೆಟ್ಟಿಗೆಯನ್ನೂ ತೆರೆದು ತೋರಿಸಿದಾಗ ಪ್ರತಿಯೊಂದರಲ್ಲೂ ಹತ್ತಿಪ್ಪತ್ತು ಜಿರಳೆಗಳು ಕಾಗದ ಚೂರುಗಳಲ್ಲಿ ಮರೆಮಾಚಿಕೊಂಡಿದ್ದವು! ಹೊರ ಜಗಲಿಯಲ್ಲಿ, 'ಜಿರ್ಲೆ ನಿವಾಸ್'ಗಳನ್ನು ಒಂದೊಂದಾಗಿ ತಂದು, ಜಾಗ್ರತೆ ಒಂದೊಂದಾಗಿ ಬೀಳಿಸಿ ಅವು ಅತ್ತಿಂದತ್ತ ಧಾವಿಸಿದಾಗ ತಾಂಡವ ನೃತ್ಯ ಮಾಡುತ್ತ, ಕಾಲಿನಿಂದ ಮೆಟ್ಟಿ ಯಮ ಸದನಕ್ಕೆ ಕಳಿಸಿದರು. ಮರಿಗಳಿಗೆ ಕಥಕ್ಕಳಿ ಹಾಗೂ ಮೊಟ್ಟೆಗಳಿಗೆ ಮಣಿಪುರಿ ಪ್ರಕಾರಗಳನ್ನು ಮೀಸಲಿಟ್ಟರು. ಕಣ್ಣು ತಪ್ಪಿಸಿ ಗೋಡೆಗೇರಿದವುಗಳನ್ನು ಕೈಯಲ್ಲಿದ್ದ ಚರ್ಮದ ಪಟ್ಟಿಯಿಂದ ಮುಂದಾಗಿಯೇ ವೈಕುಂಠಕ್ಕೆ ಅಟ್ಟಿದರು.

ಇನ್ನು ಈ ಜಿರಳೆಗಳ ಕಳೇಬರಗಳ ಸದುಪಯೋಗ ಮಾಡುವಲ್ಲಿ ರಾಯರ ಪ್ರಯೋಗ ಅಪೂರ್ವದ್ದೆಂದು ಹೇಳಲೇಬೇಕು! ಮನೆಯಲ್ಲಿ ಅವರೇ ನಿರ್ಮಿಸಿದ ಚಿಕ್ಕ ಕೈತೋಟದಲ್ಲಿ ಕೆಂಪು ಇರುವೆಗಳು ತಮ್ಮ ಸಂತಾನ ಕೋಟಿಯನ್ನು

ಏಕಪ್ರಕಾರವಾಗಿ ನಿರ್ಮಿಸಿದ್ದವು. ನೆಟ್ಟ ಹೂ ಗಿಡಗಳನ್ನು ಹಾಳುಗೆಡುವುದಲ್ಲದೇ, ಆಹಾರದ ಕೊರತೆಯೆನಿಸಿದಾಗ ಮನೆಯ ಒಳಗೂ ನುಗ್ಗಿ ಬರಲಾರಂಭಿಸಿದ್ದವು. ಈಗ ರಾಯರು ಸತ್ತ ಜಿರಳೆಗಳನ್ನು ನಾಲ್ಕು ಗುಂಪುಗಳಲ್ಲಿ ವಿಭಾಗಿಸಿದರು. ಇರುವೆ ಸಾಲುಗಳ ಮಾರ್ಗದಲ್ಲಿ ಅವನ್ನು ಇರಿಸಿದರು. ವಿಪುಲವಾದ ಪೌಷ್ಟಿಕ ಮಾಂಸಾಹಾರ ಲಭವಿದ್ದ ಸಂತೋಷದ ಸಮಾಚಾರವನ್ನು ಇರುವೆ ಸೈನಿಕರು ಒಬ್ಬರಿಂದ ಒಬ್ಬರಿಗೆ ಶ್ರೀಘ್ರವಾಗಿ ದಾಟಿಸಿದರು! ಗೂಡಿನಲ್ಲಿದ್ದ ಸಕಲ ಸೈನಿಕ ಪಡೆಯೂ ಈ ಅಪರೂಪದ ಅವಕಾಶವನ್ನು ಹುಸಿ ಹೋಗಗೊಡದೇ ಆಹಾರದ ವರ್ಗಾವಣೆಗೆ ಸನ್ನದ್ಧವಾಗಿ ಜಿರಳೆಗಳ ಸುತ್ತ ಜಮಾಯಿಸಿದವು. ಈ ಅವಕಾಶಕ್ಕಾಗಿಯೇ ಕಾದಿದ್ದ ರಾಯರು, ಅವುಗಳ ಮೇಲೆ ಬಿಸಿ ನೀರು ಸುರಿದು ಜಲ ಸಮಾಧಿ ಮಾಡಿಸಿದರು. ಬದುಕುಳಿದವಕ್ಕೆ ಪಂಪಿನಿಂದ ಸೀಮೆಎಣ್ಣೆ ಸೇಚನ ಮಾಡಿದರು. ಯಾವ ವಿಷಕಾರಿ ರಾಸಾಯನಿಕವನ್ನೂ ಬಳಸದೇ ಹೆಚ್ಚು ಖರ್ಚು ಮಾಡದೇ ಪರಪೀಡೆಗೆ ಹೆಸರಾದ ಜೊಂಡಿಗಗಳನ್ನೂ, ಇರುವೆಗಳನ್ನೂ ಏಕಕಾಲಕ್ಕೆ ನಿಯಂತ್ರಿಸಿದ ರಾಯರ ಕೀಟ ಪಾಂಡಿತ್ಯಕ್ಕೆ ತಲೆದೂಗುವಂತೆ ಆಯಿತು.

ತಮ್ಮ ವಿಜಯೋತ್ಸಾಹದಲ್ಲಿ, 'ನೋಡು, ಈ ಕೀಟಗಳೇ ಮಾನವರಿಗಿಂತ ಮೇಲು! ಅವಕಾಶ ಸಿಕ್ಕಲ್ಲಿ ತಿಂದುಂಡು ತೇಗಿ ಸಂತಾನೋತ್ಪತ್ತಿ ಮಾಡುತ್ತ ನೆಮ್ಮದಿಯಾಗಿರುತ್ತವೆ. ಅದಿಲ್ಲ! ಇದಿಲ್ಲ! ಎಂದು ದುಃಖ ಪಡುವುದಿಲ್ಲ! ಮಾನವನು ಅನಾಚಾರ ಮಾಡಿದರೂ ಪ್ರತಿಭಟಿಸದೇ ವೀರ ಸ್ವರ್ಗ ಪಡೆಯುತ್ತವೆ... ಮುಂದಿನ ಜನ್ಮದಲ್ಲಿ ಕೀಟವಾಗಿ ಹುಟ್ಟೋಣವೇ?' ಎಂದು ನನ್ನ ಪ್ರತಿಕ್ರಿಯೆಗೆ ಕಾದರು. 'ಬೇಡಪ್ಪ! ಈ ಇರುವೆಯ ಕಷ್ಟ, ಜಿರಳೆಗಳ ತರಲೆಗೆ ನಾನು ತಯಾರಿಲ್ಲ!' ಎಂದೆ. 'ಹಾಗಾದರೆ ಬಣ್ಣ–ಬಣ್ಣದ ಪಾತರಗಿತ್ತಿಯಾಗಿ ಹೂವಿನಿಂದ ಹೂವಿಗೆ ಹಾರುತ್ತ, ಮಧು ಹೀರುವ ವಿಲಾಸ ಜೀವನ ಹೇಗೆ?' ಎಂದರು. 'ಪರವಾಗಿಲ್ಲ! ಆಗ ಜೇನು ಇದ್ದ ದಾಸವಾಳ ಹೂಗಳನ್ನೆಲ್ಲ ನೀವು ನನಗೆ ಮೀಸಲಿಟ್ಟರೆ ಒಪ್ಪಿಗೆ!' ಎಂದಾಗ ಇಬ್ಬರೂ ಮನಸ್ವೀ ನಕ್ಕೆವು!

# 4. ಒದು ಪತ್ಯ – ನಾನು... ಕಸ್ತೂರ್

**– ಡಾ.ಎಚ್.ಎಸ್.ಅನುಪಮಾ**

---

**ಬಾಪುವಾದ ಭಾಯಿ**

ಭಾರತಕ್ಕೆ ಬಂದು ನಾಲ್ಕೈದು ತಿಂಗಳು ಹೀಗೇ ಕಳೆಯಿತು. ಭಾರತದಲ್ಲಿ ಇನ್ನೂ ಆಶ್ರಮ ಶುರು ಮಾಡಲಿಕ್ಕೆ ಆಗಿರಲಿಲ್ಲ. ಶಾಂತಿನಿಕೇತನ ನೋಡಿದ್ದೆವು. ಹರಿದ್ವಾರದಲ್ಲಿ ಒಂದು ಆಶ್ರಮ ನೋಡಿದ್ದೆವು. ದಕ್ಷಿಣ ಆಫ್ರಿಕಾದ ಆಶ್ರಮದ ಬದುಕಿನ ಅನುಭವ ನಮಗಿತ್ತು. ಆಶ್ರಮ ಶುರು ಮಾಡಲು ಹರಿದ್ವಾರ, ರಾಜಕೋಟೆ, ಕಲಕತ್ತಾಗಳಿಂದ ಆಹ್ವಾನವಿತ್ತು. ಆದರೆ ಭಾಯಿಗೆ ಅಮದಾವಾದಿನಲ್ಲಿ ಆಶ್ರಮ ಶುರು ಮಾಡುವ ಆಸೆ. ಎತ್ತರದ ಗೋಡೆಯ ಒಳಗಿದ್ದ ಆ ಊರಿನಲ್ಲಿ ಬರಿಯ ವ್ಯಾಪಾರಿಗಳು, ಸಿರಿವಂತರೇ ತುಂಬಿದ್ದರು. ಬಲು ಅತಿಗಳ ಊರು ಅದು. ಅಲ್ಲಿ ಎಲ್ಲವೂ ಅತಿ. ಮಿಗುವಷ್ಟು ಥಾಳು. ಅಂಥಲ್ಲಿ ಸರಳತೆ, ಶ್ರಮದ ಬದುಕು, ಬಡತನವೇ ಮೊದಲಾದ ಮೌಲ್ಯಗಳನ್ನು ಪ್ರತಿಪಾದಿಸುವ ಆಶ್ರಮ ಮಾಡಬೇಕೆನ್ನುವುದು ಭಾಯಿಯ ಇಚ್ಛೆ. ಕೊನೆಗೆ ಹೃಷಿಕೇಶದಿಂದ ವಾಪಸು ಬರುತ್ತಿರುವ ಹೊತ್ತಿಗೆ ಉರಿಬಿಸಿಲಿನ ದಿನಗಳಲ್ಲಿ ಜೀವನಲಾಲ ಮೆಹ್ತಾ ಅಂತ ಬ್ಯಾರಿಸ್ಟರ್, ಭಾಯಿಯ ದೋಸ್ತರು, ಅವರದ್ದು ಅಮದಾವಾದ್ ನಗರದ ಹೊರಗೆ ಸಬರಮತಿ ನದಿ ದಂಡೆಗೆ ಹತ್ತಿರವೇ ಒಂದು ಬಂಗಲೆಯಿತ್ತು. ಕೊಚ್ರಾಬ್ ಬಂಗಲೆ ಅಂತ ಕರೀತಿದ್ದರು. ಅದನ್ನು ಆಶ್ರಮ ಮಾಡಿಕೊಳ್ಳಲಿಕ್ಕೆ ಅಂತ ಕೊಟ್ಟರು.

ಮೊದಲು ಅಲ್ಲಿ ಹೋಗಿ ಜಾಗ ನೋಡಿದಾಗ ನಾನು ದಂಗುಬಡಿದು ಹೋಗಿದ್ದೆ. ಒಳ್ಳೇ ಹವೇಲಿ ತರಹ ಇರೋ ಭಾರೀ ಬಂಗಲೆ. ಆ ಬ್ಯಾರಿಸ್ಟರರು ಅಂಥಾ ದೊಡ್ಡ ಬಂಗಲೇನ, ಅಷ್ಟು ಊರ ಹೊರಗೆ, ಅದೂ ಬಯಲಿನ ನಡುವೆ ಯಾತಕ್ಕಾಗಿ ಕಟ್ಟಿಸಿದ್ದರೋ ಅಂತ ಆಶ್ಚರ್ಯ ಆಯ್ತು. ನಮ್ಮಪ್ಪನ ಮನೆ, ಕಾಬಾ ಮಾವನೋರ ಮನೆ ಎಲ್ಲ ಮೂರು ಮಹಡಿ ಮನೆಗಳೇ. ಆದರೆ ಅಲ್ಲಿ ಕೋಣೆಗಳು ಹತ್ತಿಪ್ಪತ್ತು ಇದ್ದರೂ ಹೀಗೆ ಇಷ್ಟು ವಿಶಾಲವಾಗಿ ಇರಲಿಲ್ಲ. ಇಲ್ಲಿ ಕೆಳಗಣ ಮಹಡಿಯಲ್ಲಿ ವಿಶಾಲ ಹಜಾರ, ಅಡುಗೆ ಕೋಣೆ, ಊಟದ ಹಜಾರ, ಜಗಲಿ ಎಲ್ಲ ಇತ್ತು. ಮೇಲಿನ ಮಹಡಿಯಲ್ಲಿ ಒಂದೆರೆಡು ಕೋಣೆ, ಅಲ್ಲೂ ದೊಡ್ಡ ಹಜಾರ. ಹೊರಗೆ ಜನ ಚಾಪೆ ಹಾಸಿ ಮಲಗಬಲ್ಲಷ್ಟು ಅಗಲದ ಬಾಲ್ಕನಿ. ಸುತ್ತಾ ಕೃಷಿ ಭೂಮಿ. ಆ ಶ್ರೀಮಂತರ ಮನೆ ಬಳಸುವವರಿಲ್ಲದೆ ಧೂಳು ತಿನ್ನುತ್ತ ಇತ್ತು. ಅದನ್ನು ನೋಡಿಕೊಳ್ಳುವವ ಅಲ್ಲೇ ಪಕ್ಕದ ಒಂದು ಬಿಡಾರದಲ್ಲಿದ್ದ. ಬಂಗಲೆ ಆಶ್ರಮವಾಗಲಿಕ್ಕೆ ಸರಿಯಾಗಿದೆಯೇ ಅಂತ ನಮ್ಮಿಬ್ಬರಿಗೂ ಅನುಮಾನವಿತ್ತು. ಮಗನನೂ ಅದೇ ಹೇಳಿದ. ಆದರೆ ಬೇರೆ ಆಯ್ಕೆಗಳಿರಲಿಲ್ಲ. ಅಲ್ಲಿಗೇ ಎಲ್ಲರೂ ಹೋದೆವು.

ಹ್ಞಾಂ, ಒಂದು ವಿಷಯ ಹೇಳಬೇಕು. ದಕ್ಷಿನ ಆಫ್ರಿಕಾದಿಂದ ಹಿಡಿದು ಭಾರತದಲ್ಲಿ ಆಶ್ರಮ ಶುರು ಮಾಡುವ ತನಕ ಮೋಕ ಗಾಂಧಿ 'ಗಾಂಧಿ ಭಾಯಿ' ಆಗಿದ್ದರು. ಭಾರತದಲ್ಲಿ ಆಶ್ರಮ ಶುರು ಮಾಡಿದ್ದೇ ಬಾಪುವಾದರು. ಇದೊಂದು ದೊಡ್ಡ ಬದಲಾವಣೆ. ಇದಕ್ಕೂ ಮುಂಚೆಯೇ ಅವರನ್ನು ಬಾಪು ಅಂದವರಿದ್ದರು. ಆದರೆ ಈಗ ಎಲ್ಲರ ಬಾಯಲ್ಲಿ ಬಾಪುವಾದರು. ನಾನೂ ಹಾಗೇ ಕರೆಯತೊಡಗಿದೆ.

ಅಲ್ಲಿ ೨೫ ಜನರ ನಮ್ಮ ಸಂಸಾರ ಶುರುವಾಯಿತು. ಅದರಲ್ಲಿ ೧೩ ಜನ ತಮಿಳರಿದ್ದರು. ಉಳಿದಂತೆ ದೇಶದ ನಾಲ್ಕೂ ಮೂಲೆಗಳಿಂದ ಬಂದವರು ಅಲ್ಲಿದ್ದರು. ದೇಶಸೇವೆಗಾಗಿ ತಮ್ಮನ್ನು ಮುಡಿಪಾಗಿಟ್ಟುಕೊಂಡು ಸತ್ಯಾಗ್ರಹಿಗಳಿಗೆ ಸತ್ಯ, ಅಹಿಂಸೆ, ಬ್ರಹ್ಮಚರ್ಯಗಳ ಬಗೆಗೆ ನಂಬಿಕೆಯಿರುವುದು ಮುಖ್ಯವಾಗಿತ್ತು. ಆಶ್ರಮವಾಸಿ ಸತ್ಯಾಗ್ರಹಿಗಳು ಎಲ್ಲ ರೀತಿಯ ಭಯದಿಂದ ಮುಕ್ತರಾಗಿರಬೇಕು. ರಾಜ, ಕಳ್ಳಕಾಕರು, ಜನ, ಜಾತಿ, ಸಂಸಾರ ಕ್ರೂರಮೃಗ, ಸಾವು ಈ ಎಲ್ಲದರ ಹೆದರಿಕೆಯಿಂದ ಮುಕ್ತವಾಗಿರಬೇಕು ಎಂದು ಬಾಪು ಹೇಳುತ್ತಿದ್ದರು. ಅಭ್ಯರ್ಥಿ, ವಿದ್ಯಾರ್ಥಿ, ಮೇಲ್ವಿಚಾರಕರು ಅಂತ ನಾವೇ ಆಶ್ರಮವಾಸಿಗಳನ್ನು ಮೂರು ಭಾಗ ಮಾಡಿಕೊಂಡು ಪ್ರತಿಯೊಬ್ಬರೂ ಬೇರೆಬೇರೆ ಜವಾಬ್ದಾರಿ ವಹಿಸಿಕೊಂಡೆವು.

ವಿದ್ಯಾರ್ಥಿಗಳಿಗೆ ಅವರವರ ಮಾತೃಭಾಷೆಯಲ್ಲಿ ಧರ್ಮ, ಬೇಸಾಯ, ಗಣಿತ, ಇತಿಹಾಸ, ಸಾಹಿತ್ಯ, ಅರ್ಥಶಾಸ್ತ್ರ, ಭೋಗೋಳ ಮುಂತಾದವನ್ನೆಲ್ಲ ಹೇಳಿಕೊಡುತ್ತಿದ್ದೆವು. ಓದುಬರಹದ ಜೊತೆಗೆ ದೈಹಿಕ ಕೆಲಸಗಳೂ ಇರುತ್ತಿದ್ದವು. ದಿನಕ್ಕೆ ಕನಿಷ್ಠ ಎಂಟು ಗಂಟೆ ಕಾಲವಾದರೂ ಮನುಷ್ಯರು ದುಡಿಯಬೇಕೆನ್ನುವುದು ಬಾಪುವಿನ ಅಭಿಪ್ರಯ. ಅಲ್ಲಿ ಒಂದೇ ಅಡಿಗೆ ಮನೆ, ಒಂದೇ ಒಲೆ. ಎಲ್ಲ ಒಟ್ಟಿಗೇ ಸೇರಿ ಆಶ್ರಮದ ಕೆಲಸ ಮಾಡುತ್ತಿದ್ದೆವು. ಮಗನಲಾಲ ಎಲ್ಲ ವ್ಯವಹಾರ ನೋಡಿಕೊಳ್ಳುತ್ತಿದ್ದ.

ಆಶ್ರಮಕ್ಕೆ ಮತ್ತೆ ೪೦ ಜನ ಬರಲಿಕ್ಕೆ ಸಿದ್ಧರಾಗಿದ್ದರು. ಅದಕ್ಕೆ ಸರಿಯಾದ ವ್ಯವಸ್ಥೆಯಾಗಲು ದುಡ್ಡು ಬೇಕಿತ್ತು. ನಮ್ಮ ಗಳಿಕೆಯನ್ನೆಲ್ಲ ದಕ್ಷಿಣ ಆಫ್ರಿಕಾದಲ್ಲೇ ಬಿಟ್ಟು ಬಂದಿದ್ದೆವು. ಕೊನೆಗೆ ಭಾಯಿ ಅಮದಾವಾದಿನ ಮಂಗಲದಾಸ್ ಗಿರಿಧರ ದಾಸ್ ಸೇಠ್ ಎನ್ನುವವರಿಗೆ ಒಂದು ಪತ್ರ ಬರೆದರು. ಒಟ್ಟೂ ೫೦ಕ್ಕಿಂತ ಹೆಚ್ಚು ಜನ ಇರಲಿರುವ ಆಶ್ರಮಕ್ಕೆ ೫೦ ಸಾವಿರ ಚದರಡಿ ಜಾಗ, ಮೂರು ಅಡುಗೆ ಕೋಣೆಗಳು, ಕೃಷಿಗಾಗಿ ಐದು ಎಕರೆ ಜಾಗ, ಆಚೀಚೆ ಹೋಗಿ ಬರಲು ಎತ್ತು ಅಥವಾ ಕುದುರೆ ಗಾಡಿ ಬೇಕಾಗುವುದೆಂದು ತಿಳಿಸಿ ಒಂದು ತಿಂಗಳಿಗೆ ಒಬ್ಬರಿಗೆ ೧೦ ರೂಪಾಯಿಯಂತೆ ವರ್ಷಕ್ಕೆ ೬೦೦೦ ರೂಪಾಯಿ ಧನಸಹಾಯ ಬೇಕೆಂದು ಕೇಳಿದರು. ಒಂದು ವರ್ಷದ ಮಟ್ಟಿಗೆ ಅಮದಾವಾದು ಇಷ್ಟು ಖರ್ಚನ್ನು ಭರಿಸಿಕೊಳ್ಳದಿದ್ದಲಿ ತಾವು ಬಾಡಿಗೆಯನ್ನಾದರೂ ಭರಿಸಲು ಸಿದ್ಧ ಎಂದು ತಿಳಿಸಿದ್ದರು.

ಅಷ್ಟೊತ್ತಿಗೆ ಒಂದು ಕಾಂಗ್ರೆಸ್ ಸಮ್ಮೇಳನಕ್ಕೆ ಹೋಗಿಬಂದೆವು. ಅಲ್ಲಿ ಭಾಯಿಗೆ ಮಾತಾಡುವ ಅವಕಾಶ ಇತ್ತು. ಅಖಿಲ ಭಾರತ ಸಮ್ಮೇಳನದಲ್ಲಿ ಹಿರಿಯ ರಾಜಕಾರಣಿಗಳು ಸಮಯದ ಶಿಸ್ತೇ ಇಲ್ಲದೆ ಬಂದು ಹೋಗುವುದು ನೋಡಿ ಬಾಪುವಿಗೆ ಬಲು ರೇಜಿಗೆಯಾಯಿತು. ಅವರು ಹೇಗೆಂದರೆ ಸರೀ ಸಮಯಕ್ಕೆ ಹೋಗುವುದು ಮತ್ತು ಸರೀ ಸಮಯಕ್ಕೆ ಬರುವುದು. ಅದರಲ್ಲಿ ಕೊಂಚ ವ್ಯತ್ಯಾಸ ಆದರೂ ಸಹಿಸುತ್ತಿರಲಿಲ್ಲ. ಆದರೆ ಇಲ್ಲಿ ಜಿನ್ನಾ ಮತ್ತು ತಿಲಕರಂತಹ ಹಿರಿಯ ನಾಯಕರೇ ಸಮ್ಮೇಳನಕ್ಕೆ ತಡವಾಗಿ ಬಂದರು. ತಿಲಕರು ಮುಕ್ಕಾಲು ಗಂಟೆ ತಡವಾಗಿ ಬಂದರು. 'ಸಮಯಪಾಲನೆ ಇಲ್ಲದೆ ಸಭೆಗೆ ಬರಲು ತಡಾವಾದರೆ ಸ್ವರಾಜ್ಯ ಸಿಗುವುದೂ ತಡವಾಗುತ್ತದೆ' ಎಂದು ತಿಲಕರಿಗೆ ಬಾಪು ತಾಗಿಸಿಯೇಬಿಟ್ಟರು. ಜಿನ್ನಾ ಇಂಗ್ಲೀಷಿನಲ್ಲಿ ಮಾತಾಡಿದರು. ಜನಸಾಮಾನ್ಯರಿಗೆ ಅರ್ಥವಾಗುವಂತೆ ಜನನಾಯಕರು ಮಾತಾಡಬೇಕು. ಜಿನ್ನಾ ಅವರು ಗುಜರಾತಿ–ಹಿಂದೂಸ್ತಾನಿ ಕಲಿಯಬೇಕು ಎಂದರು ಬಾಪು. ಸ್ವರಾಜ್ಯ ಚಳುವಳಿ ದುರ್ಬಲವಾಗಲು ಎರಡು ಮುಖ್ಯ ಕಾರಣ. ಒಂದು ಅದರಲ್ಲಿ ಹೆಂಗಸರೇ ಇಲ್ಲದಿರುವುದು. ಎರಡು ರೈತರ ಜೊತೆಗೆ ಅಕ್ಷರವಂತರು ಮುಕ್ತವಾಗಿ ಸೇರಿಲ್ಲದಿರುವುದು ಎಂದು ತಮ್ಮ ಭಾಷಣದಲ್ಲಿ ಹೇಳಿಬಿಟ್ಟರು. ನನ್ನನ್ನು ಹೋದಲ್ಲಿ, ಬಂದಲ್ಲಿ ಅವರು ಕರೆದೊಯ್ದು, ಎಲ್ಲವನ್ನೂ ವಿವರಿಸಿ ತಿಳಿಸಿ ಹೇಳುತ್ತಿದ್ದುದರಿಂದ ಇದೆಲ್ಲ ನನಗೆ ಗೊತ್ತು. ಆದರೆ ಬಹಳಷ್ಟು ಜನ ಅವರ ಹೆಂಡತಿಯರಿಗೆ ಹೀಗೆ ಹೇಳುತ್ತಿರಲಿಲ್ಲ. ಕರಕೊಂಡು ಬರುವುದಂತೂ ದೂರವೇ ಉಳಿಯಿತು.

ಒಮ್ಮೆ ಬಾಪುವಿಗೆ ಅವರ ಗೆಳೆಯ ಅಮೃತಲಾಲ್ ಥಕ್ಕರ್ ಒಂದು ಪತ್ರ ಬರೆದು ತಮ್ಮ ಪರಿಚಯದ ಹರಿಜನ ಸಂಸಾರವೊಂದು ಆಶ್ರಮಕ್ಕೆ ಬಂದು ನೆಲಸಲು ಇಷ್ಟಪಡುತ್ತದೆ, ಅದು ಸಾಧ್ಯವೇ ಅಂತ ಕೇಳಿದರು. ಆಶ್ರಮದ ನಿಬಂಧನೆ ಅನುಸರಿಸಿಕೊಂಡು ಇರುವುದಾದರೆ ಬರಲು ಅಡ್ಡಿಯಿಲ್ಲ ಎಂದು ಬಾಪು ತಿಳಿಸಿದರು. ಮುಂಬೈಯಲ್ಲಿ ಶಿಕ್ಷಕರಾಗಿದ್ದ ದುದಾಭಾಯಿ, ಅವರ ಪತ್ನಿ ದಾನಿ ಬೆಹೆನ್ ಮತ್ತು ಮಗು ಲಕ್ಷ್ಮಿ ಬಂದರು.

ಆದರೆ ದುದಾಭಾಯಿ–ದಾನಿ ಬೆಹೆನ್ ಬಂದದ್ದು ಕೆಲವರಿಗೆ ಕಷ್ಟವೂ ಆಯಿತು. ಯಾಕೆಂದರೆ ಅವರು ಅಸ್ಪೃಶ್ಯ ಜಾತಿಯವರಾಗಿದ್ದರು. ಈಗ ಹೇಳಲಿಕ್ಕೆ ನಾಚಿಕೆಯಾಗುತ್ತದೆ, ಅವರು ಬರುತ್ತಾರೆನ್ನುವುದು ನನಗೂ ಕಷ್ಟವಾಯಿತು. ಮಗನಲಾಲನಿಗೂ ಇರುಸು ಮುರುಸಾಯಿತು.

ನಂಗೆ ಅಸ್ಪೃಶ್ಯಸಮುದಾಯದ ಬಂಧುಗಳ ಬಗೆಗೆ ಪ್ರೀತಿ, ಅನುಕಂಪ ಎಲ್ಲ ಇತ್ತು. ಅವರನ್ನ ಕೆಟ್ಟದಾಗಿ ನಡೆಸಿಕೊಳ್ಳಬಾರದು. ಅದು ಧರ್ಮ ಅಲ್ಲ ಅಂತನೂ ಗೊತ್ತಿತ್ತು. ಅದರ ಮೇಲೆ ದಕ್ಷಿಣ ಆಫ್ರಿಕಾದಲ್ಲಿ ವಿನ್ಸೆಂಟ್ ನಮ್ಮ ಮನೆಗೆ ಬಂದಾಗ ಆದದ್ದೂ ನೆನಪಿತ್ತು. ಆದರೆ ಅಸ್ಪೃಶ್ಯರ ಜೊತೆ ಬದುಕುವುದು ಸಾಧ್ಯ ಅಂತ ಮನಸ್ಸಿನಲ್ಲಿ ಇನ್ನೂ ಮೂಡಿರಲಿಲ್ಲ. ದುದಾ–ದಾನಿ ಇಬ್ಬರೂ ಮಗು ಲಕ್ಷ್ಮಿಯೊಂದಿಗೆ ಆಶ್ರಮಕ್ಕೆ ಬಂದಾಗ ಬಾಪು ದುದಾಭಾಯಿ–ದಾನಿ ಬೆಹನ್ ಅವರನ್ನು ಎಲ್ಲರಿಗೂ ಪರಿಚಯಿಸಿದರು. ಉಳಿದವರಿಗೆ ಹೇಗೆ ಶ್ರಮದಾನ ಹಂಚಿಕೆಯಾಗುವುದೋ ಹಾಗೇ ಅವರಿಗೂ

ಹಂಚಿದರು. ಆದರೆ ಅವರ ಜಾತಿ ತಿಳಿದಾಗ ನನಗೂ, ಮಗನನಿಗೂ ತುಂಬ ತ್ರಾಸವಾಯಿತು. ಅಸ್ಪೃಶ್ಯರು ಅಂದ ಕೂಡಲೇ ನಮ್ಮ ಅಪ್ಪನ ಮನೆಯ ಜಗಲಿ ಹೊರಗೆ ಸಂಡಾಸು ರೂಮಿನಿಂದ ಮಲ ಎತ್ತಿಕೊಂಡು ಹೋಗುತ್ತಿದ್ದ ಭಂಗಿಯ ನೆನಪಾಯಿತು. ನನಗಂತೂ ಅವನ ಹೆಸರು ಕೂಡಾ ಗೊತ್ತಿರಲಿಲ್ಲ. ಮನೆಯ ಎದುರಿಗೇ ಮೊದಲು ಕಕ್ಕಸ್ಸು ಕೋಣೆಯಿತ್ತು. ಹೊರಗಿನಿಂದ ಹೊರಗೇ ಮಲವನ್ನು ಎತ್ತಿ ಒಯ್ಯಬೇಕಲ್ಲ. ಅದಕ್ಕೇ. ನಮ್ಮ ಗುಂಡಿಯಿಂದ ಬಾಚಿ ಕೆರೆದು ಮಲವನ್ನು ಗಡಿಗೆಯಲ್ಲಿ ತುಂಬಿ ಹೊರಗೊಯ್ದು ಊರ ಹೊರಗೊಯ್ದು ಒಂದೆಡೆ ಚೆಲ್ಲುತ್ತಿದ್ದ. ಅವನ ಮೈತುಂಬ ವಾಸನೆ, ಗಲೀಜು. ಒಂದು ದಿನ ಅವ ಬರಲಿಲ್ಲವೆಂದರೆ, ಬರುವುದು ಒಂದಿನ ತಡವಾದರೆ ನಮ್ಮ ಗತಿ ಮುಗಿಯಿತು. ಮನೆಯೆಲ್ಲ ಗಬ್ಬೆದ್ದು ನಾರುತ್ತಿತ್ತು. ನಮಗೆಲ್ಲ ನಮ್ಮ ಮಲದ ಮೇಲೆ, ಮಲ ತುಂಬಿದ ನಮ್ಮ ದೇಹದ ಮೇಲೆ ಅಸಹ್ಯ ಹುಟ್ಟುತ್ತಿತ್ತು. ನನಗೆ ಅಂತಹ ದೇಹ ಅಸಹ್ಯ ಜಾಸ್ತಿ. ನಮ್ಮ ಮೇಲಿನ ಅಸಹ್ಯವನ್ನು ಮಲದ ರೂಪದಲ್ಲಿ, ಅದನ್ನು ಹೊರುತ್ತಿದ್ದ ಭಂಗಿಯ ಮೇಲೆ ಹೇರುತ್ತಿದ್ದೆವು ಎಂದು ಈಗ ಗೊತ್ತಾಗಿದೆ. ಒಬ್ಬ ಮನುಷ್ಯನ ಬಳಿ, ಅದೂ ಅವನ ತಲೆ ಮೇಲೆ ನಮಗೇ ಅಸಹ್ಯವಾದ ನಮ್ಮ ಮಲವನ್ನು ಹೊರಿಸುತ್ತಿದ್ದೆವಲ್ಲ, ನಾವೆಂಥ ದುಷ್ಟ ಪ್ರಾಣಿಗಳು ಎಂದು ಈಗ ಪಶ್ಚಾತ್ತಾಪವಾಗುತ್ತಿದೆ. ಆದರೆ ಅವತ್ತು ದುದಾ–ದಾನಿ ಬಂದಾಗ ಮಲದ ಮೇಲಿನ ಅಸಹ್ಯ ಹಾವಿನಂತೆ ಹೆಡೆಯೆತ್ತಿ ಮನುಷ್ಯರ ಮೇಲೆ ತಿರುಗಿದ್ದು ಹೇಗೋ ಎಂದು ಗಾಬರಿಯಾಗುತ್ತದೆ. ಆದರೆ ಬಾಪುವಿಗೆ ಹಾಗಲ್ಲ. ಅವರಿಗೆ ಮಲದ ಮೇಲೂ ಅಸಹ್ಯವಿಲ್ಲ, ದೇಹದ ಮೇಲೂ ಇಲ್ಲ, ಭಂಗಿಗಳ ಮೇಲೂ ಇಲ್ಲ. ಅವರಿಗೆ ಎಲ್ಲವೂ ಸಹಜ, ಎಲ್ಲವೂ ಸತ್ಯ.

ದುದಾ–ದಾನಿ ಇರುವುದರಿಂದ ಹುಟ್ಟಿದ ಅಸಹನೆ ಬಾಪುವನ್ನು ಮುಟ್ಟಿರಲೂ ಸಾಕು. ಒಂದು ದಿನ ಸಂಜೆ ಪ್ರಾರ್ಥನೆಯ ಬಳಿಕ, ಯಾರಿಗೆ ಆಶ್ರಮದಲ್ಲಿ ಇರಲಿಕ್ಕೆ ಕಷ್ಟವಾಗಿತ್ತಿದೆಯೋ ಅವರು ಆಶ್ರಮ ಬಿಟ್ಟು ಹೋಗಬಹುದು ಎಂದು ಬಾಪು ಕಟ್ಟುನಿಟ್ಟಾಗಿ ಹೇಳೀಬಿಟ್ಟರು. ಮಗನ ಹೋಗಿಯೇ ಬಿಟ್ಟ. ಆರು ತಿಂಗಳು ಬಿಟ್ಟು ಮತ್ತೆ ಬಂದ ಅದು ಬೇರೆ ವಿಷಯ. ನಾನೆಲ್ಲಿ ಹೋಗಲಿ? ಗಂಡನ ದಾರಿಯಲಿ ನಡೆಯುವುದೇ ಪತ್ನಿಯ ಧರ್ಮ, ಅವರಂತೆ ನಡೆದರೆ ಪಾಪವಿಲ್ಲ ಎಂದು ನಾನು ಒಪ್ಪಿಕೊಂಡೆ. ಆದರೆ ಎಲ್ಲರೂ ಜೊತೆ ಇರತೊಡಗಿದ ಮೇಲೆ ಗೊತ್ತಾಯಿತು, ನಾನೆಂತಹ ಅಧರ್ಮಿ, ಅಜ್ಞಾನಿ ಅಂತ. ಅಂಥ ಪಾಪದ ವಿಷಯವನ್ನು ತಲೆಯಲ್ಲಿಟ್ಟುಕೊಂಡಿದ್ದೆ ಎಂದು ನಾಚಿಕೆಯಾಯಿತು. ನನಗೆ ತುಂಬ ಸಲ ಒಂದು ಹೆಣ್ಣು ಮಗುವಿರಬೇಕಿತ್ತು ಅನಿಸಿತ್ತು. ಈಗೊಂದು ಹೆಣ್ಣು ಮಗು ಲಕ್ಷ್ಮಿ ಬಂದಿತ್ತು. ಅವಳು ಬಲು ಚೂಟಿ. ಬಲುಚುರುಕಾಗಿದ್ದಳು. ಪಟಪಟ ಮಾತಾಡುತ್ತಿದ್ದಳು. ಒಂದಾದ ಮೇಲೊಂದು ಪ್ರಶ್ನೆ ಕೇಳುತ್ತಿದ್ದಳು. ಅವಳು ಆಶ್ರಮಕ್ಕೆ ಬಂದು ಓಡಾಡತೊಡಗಿದ್ದೇ ಎಲ್ಲರ ಸಂಭ್ರಮವೇ ಬೇರೆಯಾಯಿತು.

ಆಶ್ರಮಕ್ಕೆ ಕಟ್ಟಡದ ಯಜಮಾನರ ಮನೆಯ ಬಾವಿಯಿಂದಲೇ ನೀರು ಸಿಗುತ್ತಿತ್ತು. ಹರಿಜನರು ಇರಲಿಕ್ಕೆ ಬಂದದ್ದು ನೋಡಿ ನೀರು ಸೇದಿ ಹಾಕುತ್ತಿದ್ದ ಕೆಲಸಗಾರ ಕೋಪಾವಿಷ್ಟನಾದ. ಎಲ್ಲ ಆಶ್ರಮವಾಸಿಗಳನ್ನೂ ಅಸ್ಪೃಶ್ಯರಂತೆ ಕಾಣಲು ಶುರುಮಾಡಿದ. ಆಶ್ರಮವಾಸಿಗಳ ಚರಿಗೆಯಿಂದ ಒಂದೆರೆಡು ಹನಿ ತನ್ನ ಮೈಮೇಲೆ ಹಾರಿದರೂ ಸಾಕು, ಹೌಹಾರುತ್ತಿದ್ದ. ದುದಾಭಾಯಿ–ದಾನಿ ಬೆಹೆನರ ಮೇಲೆ ಒಂದೆರೆಡು ಬಾರಿ ಬಾಯಿ ಮಾಡಿದ. ಎಲ್ಲರಿಗೂ ತನಗೆ ಗೊತ್ತಿರುವ ಎಲ್ಲಾ ಬೈಗುಳ ಬೈದ. ಆದರೆ ನಾವ್ಯಾರೂ ಒಂದು ಮಾತನ್ನೂ ವಾಪಸು ಹೇಳಲಿಲ್ಲ. ನಮ್ಮ ತಾಳ್ಮೆ ನೋಡಿ ನೋಡಿ ನೀರೆತ್ತಿ ಹಾಕುವವ ದಂಗುಬಡಿದು ಸುಮ್ಮನಾದ. ಇದು ಒಂದು ತರಹ ಸತ್ಯಾಗ್ರಹವಾಯಿತು.

ಆದರೆ ಈ ವಿಷಯ ಊರಲ್ಲೆಲ್ಲ ಹಬ್ಬಿತು. ಆಶ್ರಮ ನಡೆಸಲು ಬರುತ್ತಿದ್ದ ಧನಸಹಾಯ ನಿಂತುಹೋಯಿತು. ಆಶ್ರಮವಾಸಿಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕುವ ಮಾತು ಕೇಳತೊಡಗಿತು. ಏನು ಮಾಡುವುದೆಂದು ನಾವೆಲ್ಲ ಚಿಂತಾಕ್ರಾಂತರಾಗಿದ್ದಾಗ ಎಲ್ಲೋ ತಿರುಗಾಟಕ್ಕೆ ಹೋಗಿದ್ದ ಬಾಪು ಬಂದರು. ಅಸ್ಪೃಶ್ಯರು ಇದ್ದಾರೆಂಬ ಕಾರಣಕ್ಕೆ ಆಶ್ರಮವನ್ನು ಬಹಿಷ್ಕರಿಸುವ ಸಮಾಜವನ್ನೇ ನಾವು ಬಹಿಷ್ಕರಿಸೋಣ, ಅಸ್ಪೃಶ್ಯರ ಕೇರಿಗೇ ಆಶ್ರಮವನ್ನು ಸ್ಥಳಾಂತರಿಸಿ ಅವರೊಡನೆ ಕೂಲಿನಾಲಿ ಮಾಡಿ ಬದುಕೋಣ ಎಂದುಬಿಟ್ಟರು. ಇಷ್ಟೆಲ್ಲ ಆಗಿ ಒಂದು ವಾರ ಆಗುವುದರಲ್ಲಿ ಅಮದಾವಾದಿನ ಉದ್ಯಮಿ ಅಂಬಾಲಾಲ ಸಾರಾಭಾಯಿ ಬಂದರು. ಆಶ್ರಮದ ನಿರ್ವಹಣೆಗೆ ಅಂತ ಹದಿಮೂರು ಸಾವಿರ ರೂಪಾಯಿ ಕೊಟ್ಟು ಹೋದರು.

ಹೀಗೇ ಏನೇನೋ ಸವಾಲು, ಸಮಸ್ಯೆಗಳು ಬಂದವು. ಕೆಲವು ಪರಿಹಾರವಾದವು. ಆದರೆ ಈ ಘಟನೆ ಆಶ್ರಮವಾಸಿಗಳು ಅಸ್ಪೃಶ್ಯತೆ ಬಗ್ಗೆ ಮನಸ್ಸು ಕೊಟ್ಟು ಯೋಚಿಸಲು, ಅಸ್ಪೃಶ್ಯತೆ ನಿರ್ಮೂಲನೆಗೆ ಕೆಲಸ ಮಾಡಲು ಹೆಚ್ಚಿತು ಅನ್ನುವುದು ನಿಜ.

ಆಶ್ರಮವಾಸ ಅಷ್ಟು ಸುಲಭವಿರಲಿಲ್ಲ. ಬಾಪು ಅಷ್ಟಷ್ಟು ದಿನಕ್ಕೆ ಒಂದೊಂದು ನಿಯಮ ಹೊಸದಾಗಿ ಸೇರಿಸುತ್ತಿದ್ದರು. 'ಇನ್ಮೇಲೆ ಯಾರೂ ಸಕ್ಕರೆ ತಿನ್ನಬಾರದು, ಬೆಲ್ಲವನ್ನೇ ಬಳಸಬೇಕು'; 'ಇನ್ಮೇಲೆ ಯಾರೂ, ಯಾವ ಕಾರಣಕ್ಕೂ ಅಸ್ಪೃಶ್ಯತೆ ಆಚರಿಸಬಾರದು'; 'ಇನ್ಮೇಲೆ ಯಾರೂ, ಯಾವ ಕಾರಣಕ್ಕೂ ದುಡ್ಡುಕಾಸು ಇಟ್ಟುಕೊಳ್ಳಬಾರದು. ಅಕಸ್ಮಾತ್ ಆಶ್ರಮವಾಸಿಗಳಿಗೆ ಹಣ ದೊರೆತರೂ ಅದನ್ನು ಆಶ್ರಮದ ಲೆಕ್ಕಕ್ಕೆ ಒಪ್ಪಿಸಿ ಪಟ್ಟಿಯಲ್ಲಿ ಬರೆಸಬೇಕು'; 'ಇನ್ಮೇಲೆ ಯಾರೂ, ಯಾವ ಕಾರಣಕ್ಕೂ ಆಶ್ರಮದ ಕಚೇರಿಗೆ ಗೊತ್ತಿಲ್ಲದಂತೆ ಯಾವುದೇ ವ್ಯವಹಾರ ಮಾಡಬಾರದು' – ಹೀಗೇ. ಕೆಲವೊಂದು ಸಲ ನಿಯಮಗಳು ಮರೆತು ಹೋಗಿ ಏನೇನೋ ತಪ್ಪು ಮಾಡಿ ಬಿಡುತ್ತಿದ್ದೆವು. ತಗಳಪ್ಪ, ಅದನ್ನ ಪ್ರಾರ್ಥನೆ ಆದಮೇಲೆ ಎಲ್ಲಾರ ಎದುರಿಗೆ, ಮಾಡಿದವರ ಎದುರಿಗೇ ಹೇಳಿ, ನಾವು ಮಾಡಿದ ಲೋಪಕ್ಕೆ ತಾವು ಉಪವಾಸ ಕೂರೋರು ಬಾಪು. ಇಂತಾ ಸಣ್ಣಪುಟ್ಟ ಉಪವಾಸ ಲೆಕ್ಕಕ್ಕೆ ಹಿಡಿದರೆ ಬಾಪು ಜೀವಮಾನವಿಡೀ ಎಷ್ಟು ದಿನ ಉಂಡಿದಾರೋ ಅಷ್ಟು ದಿನ ಉಪವಾಸ ಮಾಡಿದಾರೆ.

ಒಂದು ಸಲ ಅಂತೂ, ನನಗೆ ಹೇಗೆ ಹೇಳುವುದು ತಿಳಿಯುತ್ತಿಲ್ಲ, ನಮ್ಮಮ್ಮ ವ್ರಜಾದೇವಿನೂ ಅಪ್ಪಯ್ಯನಿಗೆ ಗೊತ್ತಿಲ್ಲದ ಹಾಗೆ ಎಲ್ಲಾದರೂ ನಾಕು ಕಾಸು ಇಟ್ಕಂಡಿರೋಳು. ಮಗೂ, ನೀನು ಇಟ್ಟುಕೊಳ್ತೀಯೋ ಇಲ್ಲವೋ ಹೇಳು? ಗಂಡಸರು, ಹಿರೀಕರು ಇಲ್ಲದಂತಹ ಕಾಲದಲ್ಲಿ ಏನೋ ಅನುವು, ಆಪತ್ತು ಅಂತ ಬಂದರೆ ಇರಲಿ ನಮ್ಮ ಹತ್ರನು ಎರಡು ಕಾಸು ಅಂತ ನಮ್ಮಮ್ಮನೂ, ನಮ್ಮತ್ತೆನು, ನಾನು ನೋಡಿದ ಎಲ್ಲ ಹೆಂಗಸರೂ ಇಟ್ಟುಕೊಳ್ಳೋರು. ಆಶ್ರಮಕ್ಕೆ ಬಂದವರಲ್ಲಿ ಕೆಲವರು, 'ಇಟ್ಕಳಿ ಏನ್ಕಾರಾ ಮಹಾತ್ಮರು ಇಲ್ಲದಾಗ ಬೇಕಾದರೆ' ಅಂತ ಎರಡು, ಮೂರು ರೂಪಾಯಿ ಕೊಟ್ಟಿರೋರು. ಹೆಚ್ಚಾಗಿ ಅವನ್ನೆಲ್ಲ ಸೇರಿಸಿ ಆಶ್ರಮದ ಲೆಕ್ಕಕ್ಕೇ ಕೊಟ್ಟಿರತಾ ಇದ್ದೆ. ಒಂದು ಸಲ ಹೀಗೆ ನಾಕು ರೂಪಾಯಿ ಆಗಿತ್ತು ನನ್ನ ಹತ್ತಿರ. ಕೊಡಲೋ ಇಟ್ಟುಕೊಳ್ಳಲೋ ಎಂಬ ದ್ವಂದ್ವ ಆಗಿದ್ದು ಹೌದು. ಆ ಹೊತ್ತಿಗೆ ಆಶ್ರಮಕ್ಕೆ ಒಬ್ಬ ಕಳ್ಳ ಬಂದು ಎಲ್ಲ ಹೊರಗೆ ಎಳೆದು ಹಾಕಿ ನನ್ನ ಬಟ್ಟೆನೆಲ್ಲ ಚಲ್ಲಾಪಿಲ್ಲಿ ಮಾಡಿ ಹೋಗಿದ್ದ. ಆಗ ನಾಲ್ಕು ರೂಪಾಯಿ ಹೊರಗೆ ಬಿದ್ದಿತ್ತು. ಆಗೇ ಹೋಯಿತು, ಮರುದಿನ ಪ್ರಾರ್ಥನೆ ಹೊತ್ತಿಗೆ, ಎಲ್ಲ ಆದ ಮೇಲೆ ಶುರು ಮಾಡೇಬಿಟ್ಟರು ಬಾಪು. ಹೇಳುತ್ತ ಹೇಳುತ್ತ ಕೊನೆಗೆ ಇದು ನನ್ನ ಹೆಂಡತಿಯ ಕಳ್ಳತನ, ಅದಕ್ಕೆ ನಾನು ಪ್ರಾಯಶ್ಚಿತ್ತ ಮಾಡಿಕೊಳ್ತೀನಿ ಅಂದುಬಿಟ್ಟರು.

ಹ್ಞೂಂ ಮಗೂ. ನನ್ನ ಗಂಡನ ಕಣ್ಣಲ್ಲಿ ನಾನು ಕಳ್ಳಿ ಆಗೋಗಿದ್ದೆ. ನಂಗಂತೂ ಎದೆ ಒಡೆದು ಸತ್ತು ಹೋಗುವ ಹಾಗೆ ಆಯ್ತು. ಆ ಸೀತಾಮಾತೆಯನ್ನು ಭೂಮಿ ಬಾಯಿ ತೆಗೆದು ನುಂಗಿದ ಹಾಗೆ ನನಗೂ ಆಗಬಾರದೇ ಅನಿಸಿ ಹೋಯಿತು. ಸೀತಾಮಾತೆಯೂ ಹಾಗೇ ತಾನೇ, ತನ್ನ ಗಂಡನಿಂದಲೇ ಅನುಮಾನ, ಅವಮಾನ ಎರಡನ್ನೂ ಎದುರಿಸಿದವಳು. ತಪ್ಪಾಯ್ತು ಅಂತ ಎಲ್ಲರ ಕ್ಷಮೆ ಕೇಳಿ ಒಳಗೆ ಹೋಗಿಬಿಟ್ಟೆ. ನಮ್ಮ ಮಕ್ಕಳು, ಅವರ ಮಕ್ಕಳು, ಅವರ ಹೆಂಡಿರು ಕೆಲವು ಸಲ ಅದು ಬೇಕು, ಇದು ಬೇಕೇಬೇಕು ಅಂತ ಪಟ್ಟು ಹಿಡಿಯುತ್ತಿದ್ದರು. ಅವೆಲ್ಲ ದೊಡ್ಡದೇನೂ ಅಲ್ಲ, ತೀರಾ ಸಣ್ಣಪುಟ್ಟದು, ನಿಮಗೆ ಹೇಳಿದರೆ ನಗು ಬರಬೋದು. ಅಂತಹ ಏನಕ್ಕಾದರೂ ಬರಲಿ ಅಥವಾ ಕಾಯಿಲೆ, ಕಸಾಲೆ ಅಂತಾದರೆ ಇರಲಿ ಅಂತ ಇಟ್ಕಂಡಿದ್ದು ಅದು ಎಷ್ಟು ರೂಪಾಯಿ? ನಾಲ್ಕು. ಬರೀ ನಾಲ್ಕು ರೂಪಾಯಿ. ಅದಕ್ಕೆ ಬೆಲೆನೇ ಕಟ್ಟಲಿಕ್ಕಾಗದೇ ಇರೋವಷ್ಟು ಮಾನ ತೆಗೆದರು. ಮಾಡಿದ ತಪ್ಪನ್ನು ಸಾರ್ವಜನಿಕಗೊಳಿಸಿದರೆ ಅದು ಪಾಪವಾಗುವುದಿಲ್ಲ ಎನ್ನುವುದು ಅವರ ಅಭಿಪ್ರಾಯ.

ದಕ್ಷಿಣ ಆಫ್ರಿಕಾದಲ್ಲಿ ಫೀನಿಕ್ಸ್ ಆಶ್ರಮದಲ್ಲಿದ್ದಾಗ ಸಹ ಒಮ್ಮೆ ಹೀಗೇ ಆಗಿತ್ತು. ದೇವದಾಸ ಟೈಫಾಯ್ಡ್ ಆಗಿ ಬಾಯಿರುಚಿಯೇ ಇಲ್ಲದೆ ಮಲಗಿ ಸುಸ್ತಾಗಿದ್ದ. ಏಳೆಂಟು ವರ್ಷದವನು ಆಗ. 'ನನಗೆ ಸಕ್ಕರೆ ಹಾಕಿದ ಕಷಾಯನೇ ಕೊಡು, ಬೆಲ್ಲದ್ದು ಬೇಡವೇ ಬೇಡ' ಅಂತ ಹಠ ಮಾಡಿದ. ಈ ಕಡೆ ಇವನ ಹಠ, ಆ ಕಡೆ ಅವನ ಅಪ್ಪನ ನಿಯಮ. ನಾನು ಅಮ್ಮ ಆಗಲೋ, ಪತ್ನಿಯಾಗಿ ಜವಾಬ್ದಾರಿ ನಿಭಾಯಿಸಲೋ, ಗೊಂದಲವಾಗಿತ್ತು. ಕೊನೆಗೆ ಬಾಪುವಿಗೆ ಗೊತ್ತಿಲ್ಲದ ಹಾಗೆ ಯಾರ ಹತ್ತಿರವೋ ಸಕ್ಕರೆ ತರಿಸಿ ಕಷಾಯ ಮಾಡಿದ್ದೆ. ಅದು ಬಾಪುವಿಗೆ ತಿಳಿಯಿತು. ನನ್ನನ್ನ ಒಂದು ಮಾತು ಹೌದಾ ಅಂದ

ಕೇಳಲಿಲ್ಲ. ಯಾಕೆ ಅಂತ ಬೈಯಲಿಲ್ಲ. ಮರುದಿನ ಪ್ರಾರ್ಥನೆ ಆದ ಮೇಲೆ ನನ್ನ ಹೆಂಡತಿಯೇ ನಾನು ಮಾಡಿದ ನಿಯಮ ಪಾಲನೆ ಮಾಡದೇ ಉಲ್ಲಂಘನೆ ಮಾಡುತ್ತಿದ್ದಾಳೆ, ಅವಳ ಆತ್ಮಶುದ್ಧಿಗಾಗಿ ನಾನು ಮೂರು ದಿನ ಉಪವಾಸ ಮಾಡ್ತೀನಿ ಅಂದರು! ಆಗ ನನ್ನ ಪರಿಸ್ಥಿತಿ ಏನಾಗಿರ್ಬಹುದು? ಇಲ್ಲೂ ಹಾಗೇ ಆಯಿತು. ಎಷ್ಟೋ ದಿನ ಯಾರಿಗೂ ಮುಖ ತೋರಿಸಲಿಕ್ಕೆ ಆಗಲಿಲ್ಲ. ಈ ಆಶ್ರಮ, ಈ ಮಹಾತ್ಮ ಎಲ್ಲರನ್ನೂ ಬಿಟ್ಟು ಹೋಗಬೇಕು, ಸಬರಮತಿ ನದಿಯಲ್ಲಿ ಸಮಾಧಿ ಆಗಬೇಕು ಅಂತೆಲ್ಲ ಅನಿಸಿತ್ತು. ಆದರೆ ಎಲ್ಲಿ ಹೋಗಲಿ? ಹೇಗೆ ಹೋಗಲಿ? ಯಾವುದಕ್ಕೂ ಧೈರ್ಯವಿರಲಿಲ್ಲ. ಬಾಪುವಿನ ಹೊರತಾಗಿ ನನಗೆ ಬೇರೆ ಜಗತ್ತೇ ಇರಲಿಲ್ಲ.

ಕೊನೆಗೆ ನನಗೆ ನೋವಾಗಿದೆ ಅಂತ ಬಾಪುವಿಗೂ ಗೊತ್ತಾಯ್ತು. ಒಂದು ಸಂಜೆ ನನ್ನ ಕೋಣೆಯಲ್ಲಿ ನಾನೊಬ್ಬಳೇ ಕಿಟಕಿಯಿಂದ ಹೊರಗೆ ನೋಡುತ್ತ ಸುಮ್ಮನೆ ಕೂತಿದ್ದೆ. ಯಾಕೋ ನನಗೆ ನನ್ನವ ಅಂತ ಯಾರೂ ಇಲ್ಲ ಅನಿಸಿಬಿಟ್ಟಿತ್ತು. ಯಾರೂ ಬಾ ಪರವಾಗಿ ಬಾಪು ಹತ್ತಿರ ಮಾತನಾಡುವವರು ಇರಲಿಲ್ಲ. ಮಹದೇವ, ಮಗನ, ಮೀರಾ, ದೇವದಾಸ ಎಲ್ಲರೂ ಮೌನವಾಗಿದ್ದರು. ಕೈಹಿಡಿದ ಗಂಡನೇ ಮುಟ್ಟುವವನಲ್ಲ, ಮೆಚ್ಚುವವನಲ್ಲ. ಇನ್ಯಾರು ನನ್ನ ಪರವಾಗಿ ನಿಂತಾರು? ಎಲ್ಲರಿಗೂ ಅವನಿಗಿರುವಷ್ಟೇ ಅಸಡ್ಡೆ ನನ್ನ ಮೇಲಿರಬಹುದು ಅಂತೆಲ್ಲ ಏನೇನೋ ಅನ್ನಿಸಿ ಕುಸಿದುಹೋಗಿದ್ದೆ.

ಅಷ್ಟೊತ್ತಿಗೆ ಕೋಣೆಯೊಳಗೆ ಬಾಪು ಬಂದರು. ತುಂಬ ಅನಿರೀಕ್ಷಿತ. ಅವರನ್ನು ಕಂಡಿದ್ದೇ ಸಿಟ್ಟೋ, ಬೇಸರವೋ, ಒಂಟಿತನವೋ, ಸೆರಗಲ್ಲಿ ಮುಖ ಹುದುಗಿಸಿಕೊಂಡು ಗಳಗಳ ಅತ್ತುಬಿಟ್ಟೆ. ಒತ್ತರಿಸಿ ಇಟ್ಟಿದ್ದೆಲ್ಲ ಒಳಗಿಂದ ಹೊರಬಂದು ಬಿಕ್ಕಳಿಸಿ, ಬಿಕ್ಕಳಿಸಿ ಅತ್ತೆ. ಬಾಪು ನನ್ನ ಕೈ ಹಿಡಿದು ಸುಮ್ಮನ್ನೆ ಒತ್ತುತ್ತ ಕುಳಿತರು. 'ಕಸ್ತೂರ್, ಇದು ಅಗ್ನಿಪರೀಕ್ಷೆ. ದೇಶಕ್ಕೆ ದಿಕ್ಕಾಗಬೇಕಾದರೆ ನಮ್ಮನ್ನು ನಾವು ಸುಟ್ಟುಕೊಳ್ಳಲೇಬೇಕು. ಎರಡು ಹಸಿ ಮಡಕೆ ಪಕ್ಕಪಕ್ಕ ಇಟ್ಟರೆ ಏನಾಗುತ್ತೆ? ಒಡೆದು ಹೋಗುತ್ತವೆ. ಅವು ಸುಟ್ಟುಕೊಳ್ಳಲೇಬೇಕು. ಇದು ಇಂಥ ಸುಟ್ಟುಕೊಳ್ಳುವ ಕ್ರಿಯೆ. ನಾನೂ ನಿರಂತರ ಸುಟ್ಟುಕೊಳ್ಳುತ್ತ ಇದ್ದೇನೆ ಜೀವವೇ, ನಾವು ಎಲ್ಲರಂತಲ್ಲ, ಸತ್ಯಾಗ್ರಹಿಗಳಾಗಿ ಬದುಕಬೇಕಾದವರು. ನೊಂದುಕೊಳ್ಳುವುದಕ್ಕಿಂತ ಪ್ರಾಯಶ್ಚಿತ್ತ ಇಲ್ಲ. ಇಷ್ಟು ಸಾಕು. ಬೇಸರಿಸುತ್ತ ಕೂರಬೇಡ. ನಮಗಿನ್ನೂ ಸಾಧಿಸಬೇಕಾದದ್ದು ತುಂಬ ಇದೆ, ಕ್ರಮಿಸಬೇಕಾದ ಮಾರ್ಗ ದೀರ್ಘವಿದೆ, ದುಃಖಿಸುತ್ತ ಕಾಲ ಕಳೆಯುವುದು ಬೇಡ. ಏಳು ಎನ್ನುತ್ತ ತಲೆಸವರಿ ಹೊರನಡೆದುಬಿಟ್ಟರು.

ಕ್ಷಣಾರ್ಧದಲ್ಲಿ ನನ್ನ ದುಃಖದುಮ್ಮಾನ, ಅನುಮಾನ, ಅವಮಾನಗಳೆಲ್ಲ ಜರ್‍ರಂತ ಇಳಿದು ಹೋದವು. ಚರಕಾ ಎದುರು ಕುಳಿತೆ. ಬಾಪು ಹೇಳಿದ್ದು ನಿಜವೇ. ಮೊದಲು ಇಂಥ ಘಟನೆ ಆಗಿತ್ತು. ಬಾಪು ಎತ್ತಿ ತೋರಿಸಿದ್ದರು. ಆದರೂ ಜಾರಿದಲ್ಲೇ ಮತ್ತೆಮತ್ತೆ ನಾನು ಜಾರುತ್ತಿರುವುದೇಕೆ? ಅಸ್ಪೃಶ್ಯತೆ ಕುರಿತೂ ಹಾಗೇ ಆಯಿತು. ಹಣದ ವಿಷಯದಲ್ಲಿಯೂ ಅಷ್ಟೇ, ನಾನು ಮಾಡಿದ ತಪ್ಪನ್ನೇ ಮತ್ತೆಮತ್ತೆ ಮಾಡುತ್ತಿರುವೆನಲ್ಲ, ಹಾಗೆ ಆಗಬಾರದೆಂದರೆ ನಾನು ಆಳವಾಗಿ ಯೋಚಿಸಬೇಕು. ನನ್ನೊಳಗೇ ನಾನಿಳಿದು ಯೋಚಿಸಬೇಕು ಎಂದುಕೊಂಡೆ. ನನ್ನ ಕೈಲಿದ್ದ ಚರಕಾ ತಿರುಗತೊಡಗಿದಂತೆ ನಾನೂ ಆಳಕ್ಕಿಳಿಯುತ್ತ ಹೋದೆ.

ಹೌದು, ಆ ವೇಳೆಗೆ ಆಶ್ರಮದಲ್ಲಿ ಒಂದು ಹೊಸ ಕಲಿಯುವಿಕೆ ಶುರುವಾಗಿತ್ತು. ಅದು ಚರಕಾ. ಬಡವರೂ, ಭೂಹೀನರೂ, ಎಲ್ಲ ಜಾತಿಯವರೂ, ಹಳ್ಳಿಯವರೂ ಸ್ವತಂತ್ರವಾಗಿ ಬದುಕಬೇಕೆಂದರೆ ಅದಕ್ಕೆ ಸ್ವ ಉದ್ಯೋಗ ಒಂದೇ ದಾರಿ ಎಂದು ಬಾಪು ಭಾವಿಸಿದರು. ನಮ್ಮ ದೇಶದಲ್ಲಿ ರೈತಾಪಿ ಜನ ಹೆಚ್ಚಿದ್ದಾರೆ. ಅವರಿಗೆ ವರ್ಷಪೂರ್ತಿ, ದಿನಪೂರ್ತಿ ಕೆಲಸ ಇರುವುದಿಲ್ಲ. ಅಂಥವರಿಗೆ ಕೈತುಂಬ ಕೆಲಸವೂ ಸಿಗಬೇಕು, ಕೊಂಚ ಹಣವೂ ಬರಬೇಕು, ಉಪಯೋಗಿಯೂ ಆಗಬೇಕು ಅಂತಹ ಕೆಲಸ ಯಾವುದು ಮಾಡಬಹುದು ಅಂತ ಯೋಚಿಸಿ, ಯೋಚಿಸಿ ಕೊನೆಗೆ ಚರಕಾದಿಂದ ನೂಲು ತೆಗೆಯುವ ಕೆಲಸ ಆಯ್ದುಕೊಂಡರು. ಉಣ್ಣಲು ಅನ್ನ, ಉಡಲು ಬಟ್ಟೆ, ಕೈತುಂಬಾ ಕೆಲಸಕ್ಕಾಗಿ ಚರಕಾ. ಎಲ್ಲರೂ ಕಲಿಯುವಾ ಎಂದರು.

ಮೊದಲೆಲ್ಲ ಎಲ್ಲರ ಮನೆಗಳಲ್ಲಿ ಚರಕಾಗಳಿರುತ್ತಿದ್ದವು. ಪುರುಸೊತ್ತಾದಾಗೆಲ್ಲ ಜನ ನೂಲುತ್ತಿದ್ದರು. ತಮ್ಮ ನೂಲನ್ನು ನೇಕಾರರಿಗೆ ಕೊಟ್ಟು ಬಟ್ಟೆ ಮಾಡಿಸಿಕೊಳ್ಳುತ್ತಿದ್ದರು. ಆದರೆ ಈಗ ಚರಕಾಗಳಂತೆ ನೂಲುವವರೂ ಹಿನ್ನೆಲೆಗೆ ಸರಿದುಬಿಟ್ಟಿದ್ದರು. ವಡೋದರದ ಹತ್ತಿರ ಒಂದೂರು. ವಿಜಾಪುರ ಅಂತ. ಅಲ್ಲಿ ಹೋದೆವು. ಅಲ್ಲಿದ್ದವರೆಲ್ಲ ಅತ್ಯುತ್ತಮ ನೇಕಾರರು ಅಂತ ಹೆಸರಾಗಿದ್ದರು. ಈಗ ನೇಕಾರರು ಆದಾಯ ಕಮ್ಮಿ ಮತ್ತು ಬೇಡಿಕೆಯಿಲ್ಲ ಅಂತ ಚರಕಾಗಳನ್ನು ಅಟ್ಟಕ್ಕೆ ಏರಿಸಿಬಿಟ್ಟಿದ್ದರು.

ಅವನ್ನು ಕೆಳಗಿಳಿಸುವಂತೆ ಕೇಳಿಕೊಂಡೆವು. ಅವರವರ ಬಟ್ಟೆಗಾಗಿ ನೂಲನ್ನು ಅವರವರೇ ತಮ್ಮ ಚರಕಾಗಳಲ್ಲಿ ನೂಲುವುದು, ನಂತರ ಆಶ್ರಮದ ಕೈಮಗ್ಗಗಳಲ್ಲಿ ಬಟ್ಟೆ ಮಾಡುವುದು ಅಂತಾಯಿತು.

ನೂಲುವ, ನೇಯುವ ಕೆಲಸ ಎಲ್ಲರೂ ಕಲಿಯುವುದು ಅಂದಾಯಿತು. ಮೊದಲು ಅದೆಲ್ಲ ನಮಗೆ ಬಂದೀತೇ ಅಂತ ಅನುಮಾನಪಟ್ಟಿದ್ದೆವು. ತಲೆತಲಾಂತರಗಳಿಂದ ಅದನ್ನೇ ಮಾಡುತ್ತ ಬಂದವರಿಗೆ ಆ ಸೂಕ್ಷ್ಮ ವಿದ್ಯೆ ಒಲಿಯುತ್ತದೆಯೇ ಹೊರತು ತಕ್ಕಡಿ ಹಿಂದೆ ಕೂತು ಸಾಮಾನು ಮಾರಿದ ನಮಗೆ ಅಥವಾ ನಮ್ಮಂಥ ಇತರರಿಗೆ ಕಷ್ಟವೇ ಸರಿ. ಆದರೆ ಬಾಪು ಪ್ರಕಾರ ಜಾತಿಗೊಂದು ಕೆಲಸ ಅಂತ ಇಲ್ಲ, ಕಲಿತರೆ ಯಾವುದೂ ಕಷ್ಟವಿಲ್ಲ, ಅದು ನಮಗಲ್ಲ ಅಂದುಕೊಂಡರೆ ಬರಲ್ಲ ಅಷ್ಟೆ. ನೇಯುವುದಕ್ಕಿಂತ ಮೊದಲು ನೂಲುವುದು ಇದೆಯಲ್ಲ, ಅದನ್ನು ಎಲ್ಲರೂ ಕಲಿಯಬಹುದು. ಅದಕ್ಕೇ ಮೊದಲು ನೂಲಲು ಕಲಿಯೋಣ ಅಂದರು. ಮೊದಲು ತಾವು ಕಲಿತರು, ಅನಂತರ ಉಳಿದವರಿಗೂ ಕಲಿಸಿದರು. ಆಶ್ರಮಕ್ಕೆ ಬಂದವರಿಗೆಲ್ಲ ಚರಕಾ ಕಲಿಸಿದರು. ಎಲ್ಲರೂ ಒಂದಷ್ಟು ಹೊತ್ತು ಕೂತು ನೂಲು ತೆಗೆದು ಹೋಗುತ್ತಿದ್ದರು. ಬಾಪು ನೂಲುವ ಫೋಟೋ ತೆಗೆಯಬೇಕೆಂದರೆ, ಅದರ ಬಗ್ಗೆ ಮಾತಾಡಬೇಕೆಂದರೆ ಚರಕಾದಲ್ಲಿ ನೂಲಲು ಕಲಿಯಬೇಕಿತ್ತು. ಅವರಿಗೆ ಅದು ಎಷ್ಟು ಅಂಟಿತೆಂದರೆ ತಾವು ಸಾಯುವ ಹೊತ್ತು ತಮ್ಮ ಕೈ ಚರಕಾದ ಮೇಲಿರಲಿ ಎಂಬ ಆಸೆ ಅನ್ನುತ್ತಿದ್ದರು! ದಕ್ಷಿಣ ಆಫ್ರಿಕಾದಲ್ಲಿದ್ದಾಗಲೇ ಸರಳತೆ ಇಲ್ಲದೆ ಯಾವ ಅಹಿಂಸೆಯೂ ಸಾಧ್ಯವಿಲ್ಲ ಮತ್ತು ಎಲ್ಲ ರೀತಿಯಿಂದ ಚರಕಕ್ಕೆ ಹಿಂತಿರುಗುವುದೇ ಭಾರತದ ಉಳಿವಿನ ದಾರಿ ಅಂತ ಅನಿಸಿತ್ತು.

ನನಗೆ ಮೊದಲು ಇದು ಆದೀತೋ ಇಲ್ಲವೋ ಅನಿಸಿತ್ತು. ಆದರೆ ಬರಬರುತ್ತ ತಿಳಿಯಿತು, ಇದು ನನಗೆ ಹೇಳಿ ಮಾಡಿಸಿದ್ದು ಅಂತ. ನೂಲುವುದು ನನ್ನ ಬಲು ಇಷ್ಟದ ಕೆಲಸವಾಗಿ ಬಿಟ್ಟಿತು. ನಿಜಕ್ಕೂ ಚರಕ ತಿರುಗಿಸುವುದು ಒಂದು ಅದ್ಭುತ ಕೆಲಸ. ಅದೂ ಕೂತಲ್ಲೇ ಕೂತು, ಸುಮ್ಮನಿರುವುದನ್ನು ಇಷ್ಟಪಡುವ ನನ್ನಂಥವರಿಗೆ ಬಲು ಪ್ರಿಯವಾಗುವ ಕೆಲಸ ಅದು. ನಾನು ನೂಲಲು ಕಲಿತೆ. ಬಾಪು ನೂಲುವುದು ಕಲಿತರು. ಆಶ್ರಮಕ್ಕೆ ಬರುವವರಿಗೆಲ್ಲ ನೂಲುವುದನ್ನು ಹೇಳಿಕೊಡುತ್ತಿದ್ದೆವು. ಆಶ್ರಮದಲ್ಲಿದ್ದ ಎಲ್ಲರೂ ನೂಲುತ್ತಿದ್ದರು. ಬಾಪು ಆಶ್ರಮದಲ್ಲಿ ಇರುವುದೇ ಕಡೆಮೆಯಾದ್ದರಿಂದ ನೂಲುವುದರಲ್ಲೇ ನಾನವರ ಜೊತೆ ಕಂಡುಕೊಂಡಿದ್ದೆ. ಬರಬರುತ್ತ ನನಗಿಂತ ಬೇಗ ನೂಲುವುದು ಕಲಿತುಬಿಟ್ಟೆಯಲ್ಲ ಎಂದು ನಗುತ್ತಿದ್ದರು.

ನೂಲುವುದು ಅಂದರೆ ಧ್ಯಾನ. ಒಂದೇಸಮ, ಒಂದೇ ರೀತಿ ಗಂಟಿರದ ಎಳೆಗಳನ್ನು ನೂಲಬೇಕು. ಒಂದು ಕೈಯಲ್ಲಿ ರಾಟೆ ತಿರುಗಿಸುತ್ತ, ಮತ್ತೊಂದು ಕೈಯಲ್ಲಿ ನಿಧಾನಕ್ಕೆ ಹತ್ತಿ ಬಿಟ್ಟು, ಎಳೆನೂಲನ್ನು ಎಳೆದು ಗಂಟಿರದೆ ಲಡಿ ಸುತ್ತಿಕೊಳ್ಳುವಂತೆ ಮಾಡಬೇಕು. ಎಳೆಯುವ ಬಲ ಹೆಚ್ಚೂ ಆಗಬಾರದು, ಕಡಿಮೆಯೂ ಆಗಬಾರದು. ರಾಟೆಯ ವೇಗ ಒಂದೇ ಸಮ ಇರಬೇಕು. ಇದ್ದಕ್ಕಿದ್ದಂತೆ ನಿಲ್ಲಿಸಲೂ ಆಗದು, ಒಂದೇ ಏಟಿಗೆ ಶುರುಮಾಡಲೂ ಆಗದು. ನಿಧನಿಧಾನ ಗತಿ ಪಡೆದುಕೊಳ್ಳುತ್ತ ಹತ್ತಿ ದಾರವಾಗುವುದು, ದಾರ ಲಡಿಯಾಗುವುದು. ನಮ್ಮ ಬದುಕೂ ಗಂಟಿರದೆ ಹತ್ತಿಯಿಂದ ನೂಲು ತೆಗೆಯಲು ಚರಕಾ ತಿರುಗಿಸುವುದಕ್ಕಿಂತ ಬೇರೆಯಲ್ಲ ಅಲ್ಲವೆ? ಚರಕ ತಿರುಗಿಸುವುದಕ್ಕೂ, ನಾವು ಹತ್ತಿಯಾಗಿ, ದಾರವಾಗಿ, ಲಡಿಯಾಗಿ, ಬಟ್ಟೆಯಾಗಿ ಬದುಕು ನಡೆಯುವುದಕ್ಕೂ ಎಷ್ಟು ಹೋಲಿಕೆಯಿದೆ ಅಲ್ಲವೆ?

ಚರಕಾದಿಂದ ದೇಶಕ್ಕೆ ಆಗುವ ಉಪಯೋಗ ಒಂದಿದ್ದರೆ ಪ್ರತಿಯೊಬ್ಬರಿಗೂ ಆಗುವ ಅನುಭವ ಅದಕ್ಕಿಂತ ಹೆಚ್ಚಿನದು. ಅದರ ಎದುರು ಕೂತು ನೂಲು ತೆಗೆಯುತ್ತ, ತೆಗೆಯುತ್ತ ಸಮಯ ಹೋದದ್ದೇ ತಿಳಿಯುತ್ತಿರಲಿಲ್ಲ. ಅದರಲ್ಲೂ ನಮ್ಮ ತಲೆಯೊಳಗೆ ಚರಕದಂತೆ ಸುತ್ತುವ ವಿಷಯವೊಂದಿದ್ದರೆ ಮುಗಿಯಿತು, ಸುತ್ತಿಸುತ್ತಿ ಸುಳಿದು ಚರಕದಿಂದ ಏಳುವುದರಲ್ಲಿ ಎಳೆಯಾಗಿ ಲಡಿ ಸುತ್ತಿಕೊಂಡು ಸಮಾಧಾನವಾಗಿಬಿಡುತ್ತಿತ್ತು. ಮಣಿ ತಿರುಗಿಸುತ್ತ ಮಾಡುವ ಜಪಕ್ಕಿಂತ ನೂಲುವುದು ತುಂಬ ಒಳ್ಳೆಯ ಪೂಜೆ. ತಿರುಗುವ ರಾಟೆಯ ಸದ್ದಿನ ಲಯಕ್ಕೆ ಒಂದು ಶಾಂತಿ ಆವರಿಸಿಬಿಡುತ್ತಿತ್ತು.

ಹೌದು ತಾಯಿ, ಚರಕದಲ್ಲಿ ನೂಲುವುದು ಎಂದರೆ ನಮ್ಮನೇ ನಾವು ನೋಡಿಕೊಳ್ಳುವುದು. ಪ್ರಶ್ನೆಯೂ ನಾವಾಗಿ ಉತ್ತರವೂ ನಾವೇ ಆಗಿ ನಮ್ಮನ್ನು ನಾವು ಹುಡುಕಿಕೊಳ್ಳುವುದು. ನೂಲುತ್ತ ನೂಲುತ್ತ ನನ್ನ ಎಷ್ಟೋ ಸಂಕಟಗಳಿಗೆ ಚರಕವೇ ಉತ್ತರ ನೀಡಿದೆ. ಜಡಗೊಂಡದ್ದೆಲ್ಲ, ಜಡಗೊಂಡವರೆಲ್ಲ ತಿರುಗುವಂತೆ ಮಾಡುವ ಶಕ್ತಿ ಆ ಪುಟ್ಟ ಚಕ್ರಕ್ಕೆ, ಹತ್ತಿಗೆ, ಎಳೆಗೆ ಇದೆ.

# ೨. ನಿರಂತರತೆ

**ಆಶಯ :**

ಇಲ್ಲಿ
　　ಯಾರು ಮುಖ್ಯರಲ್ಲ
　　ಯಾರು ಅಮುಖ್ಯರಲ್ಲ
　　ಯಾವುದು ಯಕಶ್ಚಿತವಲ್ಲ
ಇಲ್ಲಿ
　　ಯಾವುದಕ್ಕೂ ಮೊದಲಿಲ್ಲ
　　ಯಾವುದಕ್ಕೂ ತುದಿಯಿಲ್ಲ
　　ಯಾವುದು ಎಲ್ಲಿಯೂ ನಿಲ್ಲುವುದು ಇಲ್ಲ!
ಇಲ್ಲಿ
　　ಅವಸರವೂ ಸಾವಧಾನದ ಬೆನ್ನೇರಿದೆ!
ಇಲ್ಲಿ
　　ಎಲ್ಲಕ್ಕೂ ಇದೆ ಅರ್ಥ
　　ಯಾವುದೂ ಅಲ್ಲ ವ್ಯರ್ಥ
　　ನೀರೆಲ್ಲವೂ ತೀರ್ಥ

ಕುವೆಂಪು ಅವರ ಈ ವಾಣಿಯಂತೆ ಜಗತ್ತಿನ ಎಲ್ಲಾ ಸೃಷ್ಟಿಯ ಮೂಲ ಪ್ರಕೃತಿ. ಈ ಪ್ರಕೃತಿ ಅಧಮ್ಯ ನಿಗೂಢತೆಯನ್ನು, ವಿಸ್ಮಯತೆಗಳನ್ನು, ನಿರಂತರತೆಯನ್ನು ಮೌನವಾಗಿ ತನ್ನೊಳಗೆ ಲೀನವಾಗಿಸಿಕೊಂಡು ನೋಡುವ ಕಣ್ಣಿಗೆ ನಿರ್ಲಿಪ್ತವೊ, ನಿರ್ಭಾವುಕವೂ, ನಿರ್ವಿಕಾರವಾಗಿಯೂ ಗೋಚರಿಸುತ್ತದೆ. ಆದರೆ ನೋಡುವ ಶಕ್ತಿಗಿಂತ ಗ್ರಹಿಸುವ ಶಕ್ತಿ ಇದ್ದಾಗ ಮಾತ್ರ ಪಿಸುಮಾತುಗಳಿಗೆ ಕಿವಿ ಕೊಡಬಹುದು.

ಇತ್ತೀಚಿನ ಕರೋನ ಇಡೀ ವಿಶ್ವವನ್ನೇ ಒಂದು ನಿರಂತರತೆಯಿಂದ ಅಲುಗಾಡಿಸಿದ್ದು ನಮ್ಮ ಕಣ್ಣ ಮುಂದಿದೆ. ಇದು ನಿರಂತರವಾಗಿ ನಡೆಯುತ್ತಲೇ ಇರುವ ಪ್ರಕ್ರಿಯೆ. ಹಣ್ಣೆಲೆ ಉದುರಿ ಚಿಗುರೆಲೆ ಅರಳುವ ಸಮಯವನ್ನು ಸಮಸ್ಥಿತ ಮನಸ್ಸಿನಿಂದ ಅರಿಯಬೇಕು.

ಹುಟ್ಟು, ಸಾವು, ಪ್ರೀತಿ, ದ್ವೇಷ ಇವೆಲ್ಲಿ ನಿರಂತರವಾಗಿ ಮನುಷ್ಯನೊಂದಿಗೆ ಬೆಳೆದಂತವು. ಇವುಗಳನ್ನು ಸ್ವೀಕರಿಸುವ ಮನಸ್ಥಿತಿಯ ಮೇಲೆ ಬದುಕು ನಿಂತಿದೆ. ಕಷ್ಟಕ್ಕೆ ಕುಗ್ಗದೆ, ಸುಖಕ್ಕೆ ಹಿಗ್ಗದೆ ಬಾಳುವುದನ್ನು ಕಲಿಯಬೇಕಿದೆ. "ಎಲ್ಲವೂ ವಿಫಲವಾದಾಗ ತಾಳ್ಮೆಯೊಂದೇ ಸಫಲವಾಗುತ್ತದೆ" ಎಂಬ ಮಾತಿನಂತೆ ಭರವಸೆಯೊಂದಿಗೆ ಹೆಜ್ಜೆ ಹಾಕಬೇಕಿದೆ.

ಮಾನವೀಯತೆಯ ಮನಸ್ಸು, ದ್ವೇಷವಿಲ್ಲದೆ ಸಹಬಾಳ್ವೆ, ನೀನು ಬದುಕು ಇತರರನ್ನು ಬದುಕಲು ಬಿಡು ಎಂಬ ನುಡಿಗಳು ನಿರಂತರವಾಗಿ ಒರತೆಯಾದಾಗ ಮಾತ್ರ ಬದುಕು ಸಹ್ಯವಾಗಲು ಸಾಧ್ಯ.

# 1. ಜಾಜಿ ಮಲ್ಲಿಗೆ

**– ಸತ್ಯಾನಂದ ಪಾತ್ರೋಟ**

ಪುಟ್ಟ ಗುಡಿಸಲಿನಲ್ಲಿ ಕೆಟ್ಟ ಕನಸುಗಳಿಲ್ಲ
ಮನಸು–ಕನಸುಗಳಿಲ್ಲಿ ಜಾಜಿ ಮಲ್ಲಿಗೆ
ಸತ್ತ ನರಗಳ ಸುತ್ತ ಹಸಿದ ಹಾವುಗಳಿಲ್ಲ
ಟೊಂಗೆ ಟೊಂಗೆಯ ತುಂಬ ಬಿರಿವ ಮೊಗ್ಗೆ.

ಬಂದ ಕಾಗೆಗಳೆಷ್ಟೊ ತಿಂದ ಹದ್ದುಗಳೆಷ್ಟೊ
ಲೆಕ್ಕವಿಡಲೂ ಒಬ್ಬ ಕರುಣಿಕನು ಇಲ್ಲ
ಬರುವ ಯಾತ್ರಿಕರಿಗೆಲ್ಲ ಜಾತ್ರೆಯಾದರೂ ಕೂಡ
ಯಾರ ಮೇಲೂ ಇವರ ಮುನಿಸೆಂಬುದಿಲ್ಲ.

ಸೂರ್ಯ ಮೂಡದ ಮುನ್ನ ಕಾಡು ಬೆಟ್ಟವ ಹತ್ತಿ
ನಗು–ನಗುತ ನಡೆದಿಹದು ಇವರ ಪಯಣ
ಸಪ್ತ ಸಾಗರ ಈಸಿ ಲೋಕಕಲ್ಯಾಣಾರ್ಥ
ಬೆಳದಿಂಗಳು ಸೂಸಿಹವು ಇವರ ನಯನ

ಬುದ್ಧ–ಬಸವ–ಗಾಂಧಿ ಬಂದದ್ದು ಆಯಿತು
ಇವರ ನೋವಿಗೆ ಆದಿ ಅಂತ್ಯವೆ ಇಲ್ಲ
ನೋವಿನೆದೆ ಮಡುವಲ್ಲಿ ಮುತ್ತು ರತ್ನವ ಬೆಳೆದು
ಒಮ್ಮೆಯೂ ಕಂಡಿಲ್ಲ ಬದುಕಲ್ಲಿ ಬೆಲ್ಲ

ಭುವಿಯ ಸಹನೆಯು ಇಲ್ಲಿ ಮಡುಗಟ್ಟಿ ನಿಂತಿಹದು
ನಾಡು–ನುಡಿ ಕಾಲಗಳ ಮೀರಿ ಎಲ್ಲೆ
ಪುಟ್ಟ ಗುಡಿಸಲಿನಲ್ಲಿ ಕೆಟ್ಟ ಕನಸುಗಳಿಲ್ಲ
ಮನಸು–ಕನಸುಗಳಿಲ್ಲಿ ಜಾಜಿ ಮಲ್ಲಿಗೆ.

# 2. 1967 – ಚದುರಂಗ

**ಲೇ : ಚದುರಂಗ**

---

'ಹಸರು ಪ್ರಭು'

'ಅಲ್ಲ'

'ಹೌದು, ಹಸರಲ್ಲ ಹಳದಿ!'

'ಛೇ, ಹಸರಲ್ಲ ಹಳದಿ!'

'ಹ – ಹ ಹೌದು ಪ್ರಭು.......... ಹಳದಿ'

ಎಂದು ಹೇಳಿದ್ದಕ್ಕೆಲ್ಲಾ ಭಟ್ಟಂಗಿಗಳ ತಾಳ ಬೀಳುತ್ತಿದ್ದುದು ೧೯೪೭ ರಲ್ಲಿ ! ಇಪ್ಪತ್ತು ವರುಷಗಳ ಹಿಂದೆ !!...... ಆಗ ಆತ ಭಾರತ ದೇಶೀಯ ಸಂಸ್ಥಾನವೊಂದರ ಅರಸನಾಗಿದ್ದ. ಎಲ್ಲರೂ 'ಮಹಾಸ್ವಾಮೀ' ಎಂದು ಭೂಮಿಗೆ ಇಳಿದ ದೇವರೋ ಎಂಬಂತೆ, ಸಂಬೋಧಿಸುತ್ತಿದ್ದ ಕಾಲ ಅದು. ಆದರೆ ಎಂಟೇ ವರ್ಷಗಳ ಸ್ವೇಚ್ಛಾಚಾರ, ಅವನ ಸ್ವೈರವರ್ತನೆ ಜನತೆಯನ್ನು ಕೆರಳಿಸಿತು. ಕ್ರಾಂತಿ ತನ್ನ ಕೋಟಿ ಕೋಟಿ ಕೈಗಳಿಂದ ಅವನನ್ನು ಸಿಂಹಾಸನದಿಂದ ದೂಡಿತು.

ಆದರೆ ಸಿಂಹಾಸನ ಹೋದರೂ ಆತನ ದರ್ಪ ಉಳಿದಿದೆ. ಕಾಲ ಮುಂದೆ ಹೋಗಿ ೧೯೬೭ ಎಂದರೂ ಆತ ಇನ್ನೂ ೧೯೪೭ ರಲ್ಲೇ ಇದ್ದಾನೆ.

* * *

'ರಾಜ ಹೋಟೆಲಿನಲ್ಲಿ ಕಾಫಿ ಕುಡಿಯುತ್ತಿದ್ದಾನೆ. ಚರ್ಚೆಗೆ ಆರಂಭವಾಗುತ್ತದೆ–ಅವನಿಗೂ ಅವನ ಪಕ್ಕದಲ್ಲಿ ಕುಳಿತಿದ್ದ ವಿದ್ಯಾರ್ಥಿಗಳಿಗೂ!

'ಕಾಲ ಕೆಟ್ಟುಹೋಯ್ತು, ತುಂಬ ಕೆಟ್ಟು ಹೋಯ್ತು' ಎಂದು 'ರಾಜ' ಪ್ರಾರಂಭಿಸುತ್ತಾನೆ.

"ಕಾಲ ಅಲ್ಲ ಕೆಡೋದು – ಮನುಷ್ಯರು!" ವಿದ್ಯಾರ್ಥಿ ತಿದ್ದುತ್ತಾನೆ.

"ಹೂ, ಮನುಷ್ಯನೇ ಆಗಲಿ. ನನಗೆ ಅದೇ ಬೇಕಾದದ್ದು. ಹಾಗಾದರೂ ಈಗಿನ ಕಾಲದ ಜನ ಕೆಟ್ಟಿದ್ದಾರೆ ಅಂತ ನೀವು ಒಪ್ಪಿದ ಹಾಗಾಯಿತು."

'ಇಲ್ಲ–ನಿಷ್ಠುರವಾಗಿ ನುಡಿಯುತ್ತಾನೆ ವಿದ್ಯಾರ್ಥಿ.

'ರಾಜ'ನಿಗೆ ಕೋಪ ಪ್ರವಾಹದಂತೆ ತುಂಬಿ ಬರುತ್ತದೆ. ಹುಬ್ಬುಗಂಟಿಕ್ಕುತ್ತಾನೆ. ಔಡು ಕಚ್ಚುತ್ತಾನೆ.

ಆದರೆ–೧೯೬೭!

ವಿಧಿಯಿಲ್ಲ.

'ಮತ್ತೆ?' ಎಂದು ದರ್ಪದಿಂದ ಕೆರಳುತ್ತಾನೆ.

'ಕಾಲವಲ್ಲ ಕೆಡುವುದು ಮನುಷ್ಯರೇ.... ಆದರೆ ಕೆಟ್ಟಿದ್ದವರು ಹಿಂದಿನವರು, ಈಗಿನವರಲ್ಲ' ವಿದ್ಯಾರ್ಥಿ ಒತ್ತಿ ಒತ್ತಿ ಹೇಳುತ್ತಾನೆ.

'ಹೇಗೆ'? ಕೋಪದಿಂದಲೇ ಕೇಳುತ್ತಾನೆ 'ರಾಜ'.

'ಹೇಗೆ ಅಂತಿರೋ, ೧೯೪೭ನೇ ಇಸವೀನೇ ತೆಗೆದುಕೊಳ್ಳಿ. ಜನರು, ಆಗ ಆರನೂರು ಚಿಲ್ಲರೆ ಇಸ್ಪೀಟು ರಾಜರ ಗುಲಾಮರಾಗಿದ್ದರು... ಈಗ, ನಾವು ಸ್ವತಂತ್ರರು.'

ಇಸ್ಪೀಟು ರಾಜ ! ......... ತಾನು ! ........ ಏನು ಗುಂಡಿಗೆ ಈ ವಿದ್ಯಾರ್ಥಿಯರದು? '೧೯೪೭' ಆಗಿದ್ದರೆ ಗುಂಡಿನ ಬಾಯಿಗೇ ಹಾಕಿಸುತ್ತಿದ್ದೆ.

ಆದರೆ ೧೯೬೭ – ಹಾಳು!

ಉಕ್ಕಿ ಬರುತ್ತಿರುವ ರೋಷವನ್ನು ಅದುಮುತ್ತಾ ಹೇಳುತ್ತಾನೆ:

'ಸ್ವಾತಂತ್ರ್ಯ ! ಸ್ವಾತಂತ್ರ್ಯ ! ಎಲ್ಲಿರೀ ಇದೆ ಸ್ವಾತಂತ್ರ್ಯ ನಿಮಗೆ? ಕೆಲಸಕ್ಕೆ ಬಾರದ ಕೂಲಿಗಳು ಮತ್ತು ರೈತರ ಕೈಗೆ ರಾಜ್ಯ ಕೊಟ್ಟುಬಿಟ್ಟು ತೆಪ್ಪನೆ ಕುಳಿತಿದ್ದೀರಲ್ಲಾ, ನಿಮಗೆಲ್ಲಿ ಬಂತು ಸ್ವಾತಂತ್ರ್ಯ?'.

ಅಪ್ರತಿಭನಾಗದೆ ವಿದ್ಯಾರ್ಥಿ ನಿಧಾನವಾಗಿ ಉತ್ತರವೀಯುತ್ತಾನೆ:

'ಸ್ವಾಮೀ, ಇದು ದುಡಿಯುವವರ ರಾಜ್ಯ. ಕೂಲಿಗಳ ರಾಜ್ಯ. ನಾನೂ ಕೂಲೀನೇ? ಆದ್ದರಿಂದ ಇದು ನನ್ನ ರಾಜ್ಯ. ಹೀಗಿರುವಾಗ ನಮ್ಮಂಥವರಿಗೆ ಪಾರತಂತ್ರ್ಯವೆಲ್ಲಿ ಬಂತು?'

'ರಾಜ' ತಲೆಯನ್ನು ಕೆರೆದುಕೊಳ್ಳುತ್ತಾನೆ.

'ಇದೇನ್ರಿ ಕೂಲೀಗೀಲಿ ಅಂತೀರಿ? ನೀವು ವಿದ್ಯಾರ್ಥಿ ಅಲ್ಲವೇ?'

'ಹೌದು.'

'ಮತ್ತೆ ಅದು ಹೇಗೆ ಕೂಲಿ ಆದಿರಿ?'

'ಇಲ್ಲಿ ಕೇಳಿ ಇಲ್ಲಿ. ಹಿಂದೆ ವಿದ್ಯಾರ್ಥಿ ಅನ್ನುವ ಪ್ರಾಣಿ. ಓದುತ್ತಿದ್ದುದು ಸರ್ಕಾರದ ಹುದ್ದೆಗಾಗಿ–ಸ್ವಾರ್ಥಕ್ಕಾಗಿ. ತನ್ನ ಮತ್ತು ತನ್ನವರ ಸುಖಕ್ಕಾಗಿ. ಈಗ ನಾವು ಓದುವುದು ಜನತೆಯ ಅಭಿವೃದ್ಧಿಗಾಗಿ! ಮೇಲ್ಮೆಗಾಗಿ!!........

'ಸಾಕು ಸಾಕು ನಿಲ್ಲಿಸಿ ಎಷ್ಟು ಹರಟತೀರಿ ನಿಮ್ಮ ಕೊಳಕು ಜನತೇನೋ, ನಿಮ್ಮ ಹದ ಮೀರಿದ ವಿದ್ಯೇನೋ, ತುಟಿ ಮೀರಿದ ಹಾಸ್ಯಾನೋ ಸಾಕಪ್ಪ ಸಾಕು. ತಲೆನೋವು ಬಂದು ಹೋಯ್ತು.'

ತಲೆನೋವು ಬಂದೇ ಇತ್ತು – ರಾಜನಿಗೆ!

ಆದರೆ 'ಯೂಡಿಕಲೋಸ್'ನಲ್ಲಿ ಅದ್ದಿದ್ದ ರೇಷ್ಮೆ ಪಟ್ಟಿಯನ್ನು ಹಣೆಯ ಮೇಲಿಡಲು ೧೯೪೭ ರಲ್ಲಿದ್ದಂತೆ ಪಕ್ಕದಲ್ಲಿ ಡಾಕ್ಟರ್ ಇರಲಿಲ್ಲ.

ಥೂ ೧೯೬೭!

* * *

ಮಾತಿನಲ್ಲಿ ಸೋತರೂ ಮನಸ್ಸಿನಲ್ಲಿ ಸೋಲದೆ, ಹೋಟೆಲಿನಿಂದ ಮೆಲ್ಲನೆದ್ದು ಮನೆಯ ಹಾದಿ ಹಿಡಿದಿದ್ದ. ದಾರಿಯುದ್ದಕ್ಕೂ ಅವನಿಗೆ ಯೋಚನೆ........ ಹಿಂದೆ ಹೀಗೆ ನಡೆಯಬೇಕಿತ್ತೆ? ಕಲ್ಲು ಮುಳ್ಳುಗಳ ಕಾಠಿಣ್ಯಕ್ಕೆ ಹೀಗೆ ಕಾಲುಗಳನ್ನು ಒಪ್ಪಿಸಬೇಕಿತ್ತೆ? ಎಂದಿಗೂ ಇಲ್ಲ. ಆಗ ತನ್ನ ಕಣ್ಣಿಗೆ ಬೇಕಾದ ಕಾರುಗಳು ತನ್ನ ಇಷ್ಟವಿದ್ದಲ್ಲಿಗೆ 'ನಿಮಿಷಾರ್ಧದಲ್ಲಿ ಒಯ್ಯುತ್ತಿದ್ದವು – ಎಂಥೆಂಥಾ ಕಾರುಗಳು ಅವು. 'ರೋಲ್ಸ್‌ರಾಯ್ಸ್' 'ಡೇಮ್ಲರ್' 'ಮರ್‌ಸಿಡಿಸ್ ಬೆನ್ಸ್' 'ಬೆನೆಟ್ಲೆ' 'ಪೆಕ್ಕಾರ್ಡ್' ... ಒಂದೇ? ಎರಡೇ? ನೂರಾರು ಕಾರು!

ಈಗ? ......... ಅವನ ಕಾಲೇ ಕಾರು!!

ಏನು ಮಾಡುವುದು – ೧೯೬೭ !!!!

ಕಾಲೆಯುತ್ತಾ ಮನೆಗೆ ಬಂದು ಊಟಕ್ಕೆ ಕುಳಿತಾಗಲೂ 'ರಾಜ'ನ ಮುಖ ಸಿಂಡರಿಸಿತ್ತು.

ಆಗಲೇ ಅವನ 'ರಾಣಿ' ಮುದ್ದೆ ಮುದ್ದೆ ಅನ್ನ, ಬೇಯದೇ ಇದ್ದ ಬೇಳೆ ಸಾರು ಬಡಿಸಬೇಕೇ?
ಅವಳು ತಾನೆ ಏನು ಮಾಡಿಯಾಳು? ಅಡಿಗೆಯೇ ಬಾರದು ಅವಳಿಗೆ ......... ಹಿಂದೆ ಮಾಡಿದ್ದರೆ ತಾನೆ ಬರುವುದು! ಆಗ ಕೈಗೊಬ್ಬಳು ಕಾಲಿಗೊಬ್ಬಳು ದಾಸಿಯರಿದ್ದರು.

ಕಲಸಿದ ಅನ್ನದ ತುತ್ತು ರಾಜನ ಗಂಟಲಿನೊಳಗಿಳಿಯಲು ನಿರಾಕರಿಸಿತು. ತುತ್ತಿಗೂ ಗಂಟಲಿಗೂ ನಡೆಯುತ್ತಿದ್ದ ದ್ವಂದ್ವದಲ್ಲಿ (?) 'ರಾಜ' ಕಣ್ಣುಮುಚ್ಚಿದ. ಅವನು ಎಷ್ಟೇ ಕಣ್ಣು ಮುಚ್ಚಿದರೂ ಬೃಹದಾಕಾರವನ್ನೂ ತಾಳಿದ ಕಾಲ ನಿರ್ದಯವಾಗಿ ಕಣ್ಣು ಮಿಟುಕಿಸಿ ೧೯೬೭–೧೯೬೮ ಎಂದು ಹಾಸ್ಯ ಮಾಡುತ್ತಿತ್ತು.

* * *

ಕೈ ತೊಳೆದು ಎದ್ದಾಗ 'ರಾಜ'ನಿಗೆ ಅರೆಹೊಟ್ಟೆ. ತಲೆಯೋ ಕಾಲಿಗೆ ಮುಳ್ಳು ಚುಚ್ಚಿದಷ್ಟೇ ಮೊನೆಯಾಗಿ, ನೋಯುತ್ತಿತ್ತು. ಒಂದು ನಾಟಕವನ್ನಾದರೂ ನೋಡಿ ಬರೋಣವೆಂದು ಎದ್ದು ಹೊರಟ.

ಆತ ನಾಟಕಮಂದಿರವನ್ನು ಸೇರುವ ಹೊತ್ತಿಗೆ ಮಂದಿರದ ಹೊರಗೆ 'ಬಾಲಂಗೋಚಿ'ಯ ಹಾಗೆ ಜನ 'ಕ್ಯೂ' ನಿಂತಿತ್ತು. ರಾಜನೂ ಅಲ್ಲಿ ಹೋಗಿ ತುತ್ತ ತುದಿಯಲ್ಲಿ ನಿಂತ.

ಕ್ಯೂ ಕರಗಿ ಅವನಿಗೆ ಟಿಕೆಟ್ ಸಿಗುವ ಹೊತ್ತಿಗೆ ಎಷ್ಟೋ ವರ್ಷಗಳು ಉರುಳಿ ಉರುಳಿ ಹೋದಂತಾಗಿತ್ತು ಅವನಿಗೆ!

ಕಡೆಗೆ ನಾಲ್ಕಾಣೆಯ ಟಿಕೇಟು ಕೊಂಡು ಚಾಪೆಯ ಮೇಲೆ ಹೋಗಿ ಕುಳಿತ.

ಆ ಹಾಳು ಚಾಪೆಯೋ ಮುಳ್ಳು ಹರವಿದಂತೆ ಒತ್ತುತ್ತಿತ್ತು.

ಜತೆಗೆ ಸೆಕೆ ಬೇರೆ ! ........ ಶಿವನ ಶಿರದಿಂದ ಹರಿದ ಗಂಗೆಯಂತೆ ಬೆವರಿನ ಪ್ರವಾಹ ತಡೆಬಡೆಯಿಲ್ಲದೆ ಒಂದೇ ಸಮನೆ 'ರಾಜ'ನ ತಲೆಯಿಂದ ಕೋಡಿ ಕೋಡಿಯಾಗಿ ಹರಿಯಿತು.

ಬೆವರು ಒರೆಸೋಣವೆಂದು ಕರವಸ್ತ್ರಕ್ಕಾಗಿ ಜೇಬುಗಳನ್ನೆಲ್ಲಾ ಹುಡುಕಿದ. ಆದರೆ...... ಅವನು ಕೈಯಿಟ್ಟ ಜೇಬಿನಲ್ಲಿ ಕರವಸ್ತ್ರ ಸಿಕ್ಕುವುದಕ್ಕೆ – ಕಾಲ ಇಪ್ಪತ್ತು ವರ್ಷಗಳ ಹಿಂದಿರಲಿಲ್ಲ.

ನಾಟಕ ಆರಂಭವಾಯಿತು.

ಕುಡಿಮೀಸೆ ಕಾಣಿಸಿದಂದಿನಿಂದಲೂ ನಾಟಕ, ಹೆಣ್ಣು, ಹೆಂಡದಲ್ಲಿ 'ರಾಜ'ನಿಗೆ ಅತಿಶಯವಾದ ಆಸಕ್ತಿ. ಆಸಕ್ತಿಯನ್ನೇ ಜನ 'ಹುಚ್ಚು' ಎಂದು ಕರೆಯುತ್ತಿದ್ದರು.

ಅದರಿಂದಾಗಿ ರಾಜ ಶ್ರದ್ಧೆಯಿಂದ ತನ್ನ ಮುಂದೆ ನಡೆಯುತ್ತಿದ್ದ ನಾಟಕವನ್ನು ನೋಡುತ್ತ ಕುಳಿತ. ಆದರೆ ಮೊದಲ ದೃಷ್ಯವೇ ಅವನ ಆಸೆಯ ಕುಡಿಯನ್ನು ಚಿವುಟಿತು....... ಕೂಲಿಯೊಬ್ಬನ ಸಂಸಾರ ಆ ಗಂಡ ಹೆಂಡಿರ ಸಂವಾದ...... ಅವರ ಮಕ್ಕಳ ಆಟಪಾಟ........ ಯಾರಿಗೆ ಬೇಕು ಹಾಳು ಈ ಕೂಲಿಗಳ ಜೀವನ?

ಆದರೂ ಗಟ್ಟಿ ಮನಸ್ಸು ಮಾಡಿ ನಾಟಕವನ್ನು ನೋಡುತ್ತ ಕುಳಿತ 'ರಾಜ'.

ಆದರೂ ಉದ್ದಕ್ಕೂ ಅದೆ ! – ಕೂಲಿಗಳ ಕಥೆ.......... ಇತರ ಕೂಲಿಗಳಿಂದ ಬೇರೆಯಾಗಿ ಬಾಳನ್ನು ನಡೆಸುವೆನೆಂದು ಹಟ ಹಿಡಿದ ಒಬ್ಬ ಕೂಲಿಯ ಸಂಸಾರ ನಾಶ – ಒಗ್ಗಟ್ಟಾದ ಕೂಲಿಗಳು ಪ್ರಕೃತಿಯ ಮುಡಿಯನ್ನು ಜಗ್ಗಿ ಮೆಟ್ಟಿ ನಿಂತ ವೀರ ಕಥೆ.....

ನಾಟಕವನ್ನು ನೋಡುತ್ತಾ ನೋಡುತ್ತಾ 'ರಾಜ'ನ ತಲೆ ಸುತ್ತಿದಂತಾಯಿತು.

ಏನು ಕಲೆಯ ಕೊಲೆ ಇದು?

ಹಿಂದೆ ೧೯೪೭ ರಲ್ಲಿ ತನ್ನಂತಹವರು ರಾಜರಾಗಿದ್ದಾಗ ಇಂಥ ಕೂಲಿಗಳನ್ನೇ ಬಡಿದು ಗುಲಾಮರನ್ನಾಗಿ ಮಾಡಿ ಮೆರೆಯುತ್ತಿದ್ದ ವೈಭವವನ್ನು ನಾಟಕಗಳು ವಿಧವಿಧವಾಗಿ ರಂಗಮಂಟಪದ ಮೇಲೆ ತೋರುತ್ತಿದ್ದವು.

ಈಗಲೋ....... ಅಂಗರೇಖು, ಸುರವಾಲು, ಸುರಪೇಸು ಧರಿಸಿದ ರಾಜನಿಲ್ಲ ! ಸುಂದರವಾಗಿ ಅಲಂಕೃತಳಾಗಿ ಮನ ಸೆಳೆಯುವ ಲಲನೆಯಿಲ್ಲ !! ಚಿತ್ತಾಕರ್ಷಕವಾದ ಚಂಚಲ ನಯನದ, ಬಳಕುವ ನಡಿಗೆಯ ವೇಶ್ಯೆಯಿಲ್ಲ !!!

ಬರಿಯ ಕೂಲಿಗಳು ! ಕೂಲಿಗಳು !! ಕೂಲಿಗಳು !!! ಎಲ್ಲಾ ಕಾಲದ ಮಹಿಮೆ–೧೯೬೭!

* * * *

'ರಾಜ' ನಾಟಕಮಂದಿರವನ್ನು ಬಿಟ್ಟಾಗ ಒಂಭತ್ತೂವರೆ ಗಂಟೆಯಾಗಿತ್ತು. ಅವನ ಮನಸ್ಸಿನ ಕತ್ತಲಿನಷ್ಟೇ ದಟ್ಟವಾಗಿ ಹೊರಗೆ ಕತ್ತಲು ಕವಿದಿತ್ತು. ಎದುರಿಗೆ ಅವನ ನಿಟ್ಟುಸಿರಿನಂತೆ ನೀಳವಾದ ಹಾದಿ, ಕಣ್ಣು ಕಾಣುವವರೆಗೂ ಕಂಬಗಳ ವಿದ್ಯುದ್ದೀಪದ ಬೆಳಕಿನಲ್ಲಿ ಮೌನವಾಗಿ ಮಲಗಿತ್ತು.

'ರಾಜ' ಒಬ್ಬನೇ ನಡೆಯುತ್ತಿದ್ದ. ಕತ್ತಲೆಯ ಕಠೋರ ಧಾಳಿಗೆ ಅಸ್ತಮ ರವಿಯ ಅಳಿದುಳಿದ ಬೆಳಕು ಚದರಿ ಹೋಗುವಂತೆ, ಅವನ ಜತೆಯಲ್ಲಿ ನಡೆದು ಬರುತ್ತಿದ್ದ ಜನ ಸಂದಿಗೊಂದಿಯಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಕಾಣದಾಗಿದ್ದರು.

'ರಾಜ' ನಡೆದು ಹೋಗುತ್ತಿದ್ದ. ಬಹುದೂರದ ಹಾದಿ ಆಗಲೇ ಸವೆದಿತ್ತು. ಅಷ್ಟಷ್ಟು ದೂರಕ್ಕೆ ನಿಂತಿದ್ದ ಕಂಬಗಳ ಮೇಲೆ ಕುಳಿತು ವಿದ್ಯುದ್ದೀಪ ದಾರಿ ತೋರುತ್ತಿತ್ತು.

ಮುಂದೆ ಮುಂದೆ ನಡೆದಂತೆಲ್ಲಾ 'ರಾಜ'ನ ಮನಸ್ಸು ಯೋಚನಾರಹಿತವಾಗಿ ಬರಿದಾಗಿತ್ತು. ನೇರವಾಗಿ ಹೋಗುತ್ತಿದ್ದ ಬೀದಿಯೂ ಕೂಡ ಜನರಹಿತವಾಗಿ ಬರಿಬರಿದಾಗಿತ್ತು.

ಗಾಳಿ ರೊಯ್ಯೆಂದು ಬೀಸಿ ಚಳಿ ಹುಟ್ಟಿಸುತ್ತಿತ್ತು. ಶಾಖವನ್ನರಸುವಂತೆ ಮಾಡಿತ್ತು.

ಹಾಗೆ ಒಂದು ಸಲ ಗಾಳಿ ಬಲವಾಗಿ ಬೀಸಿದಾಗಲೇ, ವಿಪರೀತ ಚಳಿಯಾಗಿ. 'ರಾಜ' ಕತ್ತೆತ್ತಿ ನೋಡಿದುದು!

ಹಾಗೆ ಅವನು ಕತ್ತೆತ್ತಿ ನೋಡಿದುದಕ್ಕೂ ಅವನ ಕಾಲುಗಳು ಮುನ್ನಡೆಯದೆ ನಿಂತು ಹೋದುದಕ್ಕೂ ಒಂದೇ ಆಯಿತು.

'ರಾಜ'ನಿಗೆ ಆಶ್ಚರ್ಯವೋ ಆಶ್ಚರ್ಯ ! ........ ಬಡವರ ಮನೆಯಲ್ಲೂ ಶ್ರೇಷ್ಠ ರತ್ನಗಳು ಇವೆಯಲ್ಲಾ ಎಂದು ಸೋಜಿಗ !

ಆತನ ಎದುರಿಗೇ ಮನೆಯೊಂದರ ಬಾಗಿಲನ್ನು ಒರಗಿ ಎಳೆ ಪ್ರಾಯದ ಹೆಣ್ಣೊಂದು ನಿಂತಿತ್ತು.

ಅವಳನ್ನು ಕಂಡ ಕೂಡಲೇ 'ರಾಜ'ನ ಸೊಂಟಕ್ಕೆ ಬಿಸಿರಕ್ತವಿಳಿದು ಕಾವೇರಿತು.

ಬರಿದಾಗಿದ್ದ ಅವನ ಮನಸ್ಸಿನಲ್ಲಿ ಮೊದಮೊದಲು ಕಿರಿದಾಗಿದ್ದ ಆಸೆಯ ಸಸಿ ಅವಳನ್ನು ನೋಡನೋಡಿದಂತೆಲ್ಲಾ ವಿಷವೃಕ್ಷವಾಗಿ ಹಬ್ಬಿ ಬೃಹದಾಕಾರವಾಗಿ ಬೆಳೆಯಿತು!

ರಸ್ತೆ ನಿರ್ಜನವಾಗಿಯೇ ಇತ್ತು.

ಶಾಖವೇರಿದ 'ರಾಜ' ಅವಳ ಹತ್ತಿರ ಹತ್ತಿರ ಹೋದ.

ಹೆಣ್ಣು ನಿಂತೇ ಇದ್ದಿತು.

ರಾಜ ಮತ್ತೂ ಹತ್ತಿರ ಹೋದ.

ಹುಡುಗಿ ಅನಮನಸ್ಕಳಾಗಿ ನೋಡುತ್ತಿದ್ದಳು.

'ರಾಜ' ಪಕದಲ್ಲೇ ಹೋಗಿ ನಿಂತು ಅವಳ ಯೌವನದ ಪತಾಕೆಯಂತಿದ್ದ ಭುಜದ ಮೇಲೆ ಕೈಯಿಟ್ಟ.

ಹೆಣ್ಣು ಸರ್ರನೆ ತಿರುಗಿ 'ಬುಸ್' ಎಂದಿತು!

ಒಳಗೆ ಕೆಲಸ ಮಾಡುತ್ತಿದ್ದ ಹೆಂಗಸರ ತಂಡ ಧಾವಿಸಿ ಬಂದು 'ರಾಜ'ನಿಗೆ ಚೆನ್ನಾಗಿ ಮೈಮನಗಳು ಮುರಿಯುವಂತೆ ಪೊರಕೆ ಪ್ರಯೋಗ ಮಾಡಿ ಬೀದಿಗೆ ಹಾಕಿದರು.

ಬೀದಿಯ ಧೂಳಿನಲ್ಲಿ ಹೊರಳುತ್ತಿದ್ದ 'ರಾಜ'ನ ಮನಸ್ಸು ೧೯೪೭ನೇ ಇಸವಿಗೆ ಹಾರಿತು.......

೧೯೪೭ನೇ ಇಸವಿಯಲ್ಲಿ ಇಸವಿಯಲ್ಲಿ ಹೀಗಾಗುತ್ತಿತ್ತೇ?........ ದೇಶದ ಯಾವ ಮೂಲೆಯಲ್ಲೇ ಆಗಲಿ ತನ್ನ ಕಣ್ಣಿಗೆ ಬಿದ್ದ ಹುಡುಗಿ ತತ್ಕ್ಷಣ ತನ್ನ ಅಂತಃಪುರವನ್ನು ಸೇರುತ್ತಿದ್ದಳು.

ಹಾಗಿತ್ತು ಆ ಕಾಲ !

ಆದರೆ ಈಗ?

ಥೂ, ಥೂ, ಥೂ, ಬಲು ಕೆಟ್ಟ ಕಾಲ – ೧೯೬೭.

# 1. ಪ್ರೀತಿ ಕಾರಣವಿಲ್ಲದೆ ಅರಳುವಂತದ್ದು

ಮೂಲ : ಜಿಡ್ಡು ಕೃಷ್ಣಮೂರ್ತಿ
ಅನು : ನಿ. ಮುರಾರಿ ಬಲ್ಲಾಳ

ಜಗತ್ತಿನಲ್ಲಿ ಆಗಬೇಕಾದದ್ದು ಒಂದೇ ಒಂದು ಮೂಲಭೂತ ಕ್ರಾಂತಿ. ಪ್ರೀತಿಯ ಕ್ರಾಂತಿ. ಪ್ರೀತಿ ಮಾತ್ರ ಮನುಷ್ಯನ ಅಂತರಂಗ ಮತ್ತು ಸಮಾಜದ ಸಮಗ್ರ ಪರಿವರ್ತನೆ ಮಾಡುವ ಶಕ್ತಿ ಪಡೆದಿದೆ. ಅದು ಮಾತ್ರ ಈ ಆಧುನಿಕ ಜಗತ್ತಿನಲ್ಲಿ ಹೆಚ್ಚುತ್ತಿರುವ ಸ್ವಾರ್ಥಪರ ಹುಚ್ಚನ್ನು, ವ್ಯಾಪಾರೀ ಪ್ರವೃತ್ತಿಯನ್ನು, ಪೈಪೋಟಿ–ಹಿಂಸೆಗಳನ್ನು ಕಡಿಮೆ ಮಾಡಿ ನಮ್ಮನ್ನು ಪರಿಪೂರ್ಣ ಆನಂದದತ್ತ ಕೊಂಡೊಯ್ಯುವಂಥದು. ಯಾವುದೇ ಹೊಸ ವ್ಯವಸ್ಥೆಯಿಂದ ಅಥವಾ ಎಡ–ಬಲ ಸಿದ್ಧಾಂತಗಳಿಂದ ಮನುಷ್ಯನ ಹೃದಯ ಪರಿವರ್ತನೆ ಸಾಧ್ಯವಿಲ್ಲ.

**ಪ್ರೀತಿ – ಇರುವಿಕೆಯ ಸಹಜ ಸ್ಥಿತಿ**

ಪ್ರೀತಿ ನಮ್ಮ ಇರುವಿಕೆಯ ಸಹಜ ಸ್ಥಿತಿ. ಆದರೆ ಪ್ರೀತಿಯ ವಿಶಾಲ ಹರವಿನ ಬಗ್ಗೆ, ಕೋಮಲತೆಯ ಬಗ್ಗೆ ನಮಗೇನು ಗೊತ್ತಿದೆ? ಒಬ್ಬ ಸೇನಾಧಿಕಾರಿ, ಕಟುಕ, ಭಾರೀ ಶ್ರೀಮಂತ, ಹರೆಯದ ಹುಡುಗ ಹುಡುಗಿಯರು ಎಲ್ಲರೂ ಈ ಶಬ್ದವನ್ನು ಧಾರಾಳವಾಗಿ ಬಳಸುವವರೇ. ಆದರೆ ಅಳತೆಗೇ ಸಿಲುಕದ ನೈಜ ಪ್ರೀತಿಯ ಆಳ ವಿಶಾಲಗಳ ಅರಿವು ಇವರಿಗಿದೆಯೇ?

ಪ್ರೀತಿ ಎಂದರೇನು? ಸುಖದ ಬಯಕೆಯೇ? ದೈಹಿಕ ತೃಷೆಯೇ? ಕೇವಲ ಆಕರ್ಷಣೆಯೇ? ಅಥವಾ ಅದು ಮನಸ್ಸಿನ ವೈಚಾರಿಕ ವಸ್ತುವೇ? ಗೆಳೆತನ, ಅನುಕಂಪ, ಕರುಣೆಯೇ? ಇವು ಯಾವುವೂ ಪ್ರೀತಿ ಅಲ್ಲ. ಪ್ರೀತಿ ಸಾವಿನಷ್ಟೇ ಸತ್ತ್ವಶಾಲಿಯಾದ ಆತ್ಯಂತಿಕ ಸ್ಥಿತಿ. ಆ ಸ್ಥಿತಿಯಲ್ಲಿ ಒಳ್ಳೆಯದು, ಕೆಟ್ಟದು, ಸುಂದರ, ಕುರೂಪ ಎನ್ನುವ ಎಲ್ಲಾ ದ್ವಂದ್ವಗಳೂ ಕರಗಿ ಮಾಯವಾಗುತ್ತವೆ.

ಪ್ರೀತಿ, ವರ್ತಮಾನದಲ್ಲಿರುವ ನಮ್ಮ ಸಹಜ ಸ್ಥಿತಿ. ಕ್ಷಣಕ್ಷಣದಲ್ಲೂ ಭೂತದ ನೆನಪುಗಳಿಗೆ ಸಾಯುವುದೇ ಪ್ರೀತಿ. ಈ ಸಾವಿನಲ್ಲೇ ಪ್ರೀತಿ ಮತ್ತೆ ಮತ್ತೆ ಮರುಹುಟ್ಟು ಪಡೆಯುತ್ತದೆ. ಈ ಪ್ರೀತಿಗೆ ಆಲಂಬನೆ ಇಲ್ಲ; ಬೇರುಗಳಿಲ್ಲ. ಇದು ಕಾರಣವಿಲ್ಲದೆ ಅರಳುವಂಥದು. ಇದು ಹೊಗೆಯೇ ಇಲ್ಲದೆ ಪರಿಶುದ್ಧ ಜ್ವಾಲೆ. ನಮ್ಮ ಪ್ರಜ್ಞೆ ಬಹಳ ಜಾಗ್ರತೆಯಿಂದ ತನ್ನ ಸುತ್ತ ಕಟ್ಟಿಕೊಂಡ ಎಲ್ಲ ಪ್ರೀತಿ ಒಂದು ಸುಂದರ ಕವಿತೆಯಿದ್ದಂತೆ, ಸಂಗೀತವಿದ್ದಂತೆ. ಅದರ ಉಗಮ ಹೃದಯದಲ್ಲಿ, ಪ್ರೀತಿಯ ಬೆಚ್ಚನೆಯ ಅನುಭವ ಹೃದಯಕ್ಕೆ ಇರದಲ್ಲಿ, ಪ್ರೀತಿಯ ಹಾಡು ಹೃದಯದಲ್ಲಿ ದ್ರವಿಸದಿದ್ದಲ್ಲಿ ನಮ್ಮೆಲ್ಲ ವೈಚಾರಿಕತೆ ಶುಷ್ಕವಾಗಿ, ಬದುಕಿನ ಅಂದವನ್ನೇ ಕೆಡಿಸುತ್ತದೆ; ನೈಜತೆ ಮಾಯವಾಗುತ್ತದೆ. ಪ್ರೀತಿಯಿಲ್ಲದೆ ಕೇವಲ ಜ್ಞಾನವನ್ನು ಅರಸುವ ಮನಸ್ಸು ನಿರ್ದಯತೆಯಲ್ಲಿ ಕಾರ್ಯವೆಸಗುತ್ತಿರುತ್ತದೆ. ಕೇವಲ ರಾಕ್ಷಸ ದಕ್ಷತೆ ಅದರ ಗುರಿಯಾಗುತ್ತದೆ.

ನೀತಿ–ಅನೀತಿ ಎರಡಕ್ಕೂ ಪ್ರೀತಿ ಗೊತ್ತಿಲ್ಲ. ಸಾಮಾಜಿಕ ಸಂಬಂಧಗಳನ್ನು ಹಿಡಿದಿಟ್ಟಿರುವ ಈ ನೈತಿಕ ಚೌಕಟ್ಟು ಮನಸ್ಸಿನ ಸೃಷ್ಟಿ. ಇದು ಪ್ರೀತಿಯಲ್ಲ. ಅಂತರಂಗವನ್ನು ಕಠಿಣಗೊಳಿಸುತ್ತ ಹೋಗುವ ಕ್ರಿಯೆ. ಪ್ರೀತಿ ಅಂದರೆ ಶೀಲ. ಶೀಲವನ್ನು ಕಲಿಯಲು ಸಾಧ್ಯವಿಲ್ಲ. ಅದೊಂದು ಮಾನಸಿಕ ಅವಸ್ಥೆ. ಶೀಲವಂತರಾಗಲು ಮಾಡುವ ಪ್ರಯತ್ನ ನಮ್ಮನ್ನು ಶೀಲಗೇಡಿಗಳನ್ನಾಗಿ ಮಾಡುತ್ತದೆ. ಹಾಗೆಯೇ ಪ್ರೀತಿ ಕೂಡ. ಅದು ನಮ್ಮ ಮೂಲಭೂತ ಪ್ರವೃತ್ತಿ. ಪ್ರಯತ್ನದಿಂದ ಅದನ್ನು ಬೆಳೆಸಿಕೊಳ್ಳಲು ಸಾಧ್ಯವಿಲ್ಲ.

## 'ನನ್ನ'–'ನಿನ್ನ' ಲೆಕ್ಕಚಾರಗಳಿಲ್ಲ

ಆದರೆ ದುರದೃಷವಶಾತ್, ಸ್ವಂತ ಲಾಭದ ಶರತ್ತುಗಳ ಮೇಲೆ ಮಾತ್ರ ಪ್ರೀತಿಸಬಲ್ಲವರಾದ ನಾವು, ಪ್ರೀತಿಯನ್ನು ಕೊಟ್ಟು–ಕೊಳ್ಳುವ ಒಂದು ವ್ಯಾಪಾರದ ಸರಕನ್ನಾಗಿ ಮಾಡಿದ್ದೇವೆ. ಒಂದು ವಸ್ತುವನ್ನು ನಾವು ಪ್ರೀತಿಸುತ್ತೇವೆ. ಅಂದರೆ, ಅದನ್ನು ಬೇರೆಯವರಿಂದ ಪ್ರತ್ಯೇಕಿಸಿ, ನಮ್ಮದನ್ನಾಗಿ ಮಾಡಿಕೊಂಡು, ನಮ್ಮ ಅಂಕೆಯಲ್ಲಿರಿಸಿ ಕೊಂಡಿದ್ದೇವೆ ಎಂದು ಅರ್ಥ. ಈ ಕ್ರಿಯೆಯಲ್ಲಿ ಕ್ಷಣಕ್ಷಣಕ್ಕೂ ಅದನ್ನು ಕಳಕೊಳ್ಳುವ ಭಯ ಇದ್ದೇ ಇರುತ್ತದೆ; ಮತ್ತು ಅದನ್ನು ಕಳಕೊಂಡಾಗ ನಮ್ಮನ್ನೇ ನಾವು ಕಳಕೊಂಡ 'ಖಾಲಿತನ'ದ ಅನುಭವ ಇರುತ್ತದೆ. ಈ ಭಯದಿಂದಲೇ ನಾವು ನಮ್ಮ ಪ್ರೀತಿಯ ವಸ್ತುವಿನ ಒಡೆತನಕ್ಕೆ ಕಾನೂನಿನ ಮುದ್ರೆ ಒತ್ತಿ ಭದ್ರ ಮಾಡಲು ಪ್ರಯತ್ನಿಸುತ್ತೇವೆ. ಇದು ಪ್ರೀತಿಯೇ? ಅಥವಾ ನಮ್ಮದೇ ಒಳಗಿನ ಅಭಾವದ ಅಭಿವ್ಯಕ್ತಿಯೇ? ಪಡೆಯಬೇಕೆನ್ನುವ ಆಸೆ, ಹೊಟ್ಟೆಕಿಚ್ಚು, ಆಸೆ ಬುರುಕತನ ಯಾವುದೂ ಇಲ್ಲದಾಗ, ಕರುಣೆ, ಅನುಕಂಪ, ಗೌರವಗಳು ಇದ್ದಾಗ, ಹೆಂಡತಿ–ಮಕ್ಕಳನ್ನು ಮಾತ್ರವಲ್ಲದೆ, ಅಕ್ಕಪಕದವರನ್ನೂ, ನಮ್ಮ ಕೆಲಸದವರನ್ನೂ ಸಹಾನುಭೂತಿಯಿಂದ ಕಾಣಲು ಸಾಧ್ಯವಾದಾಗ ಮಾತ್ರ ಪ್ರೀತಿಸಲು ಸಾಧ್ಯ. ಪ್ರೀತಿಯ ಬಗ್ಗೆ ಯೋಚಿಸಿ ತೀರ್ಮಾನ ತೆಗೆದುಕೊಳ್ಳಲಿಕಾಗುವುದಿಲ್ಲ. ಪ್ರೀತಿಯ ಬಗ್ಗೆ ಇರುವ ನಂಬಿಕೆಗಳು, ಆಗ್ರಹಗಳು, ಸಿದ್ಧಾಂತಗಳು, ತೀರ್ಮಾನಗಳು ನೈಜ ಸ್ಥಿತಿಯನ್ನು ಮರೆಮಾಚುತ್ತವೆ. ಯಾಕೆಂದರೆ ಇವೆಲ್ಲವೂ ಮನಸ್ಸಿನಲ್ಲಿ ನಡೆಯುವ ಕ್ರಿಯೆಗಳು. ಮನಸ್ಸಿನ ಎಲ್ಲಾ ಆಟಗಳು ನಿಂತಾಗ ಮಾತ್ರ ಪ್ರೀತಿ ಪ್ರಕಟವಾಗುತ್ತದೆ.

ಪ್ರೀತಿ ಎನ್ನುವುದು ಲೆಕ್ಕಾಚಾರಕ್ಕೆ ಸಿಗುವಂಥದಲ್ಲ. ಅದು ಗುಣಾತ್ಮಕವಾದುದು. "ಇಡೀ ಜಗತ್ತನ್ನೇ ನಾನು ಪ್ರೀತಿಸುತ್ತೇನೆ" ಎನ್ನುವ ಮಾತೇ ಸುಳ್ಳು. ನಮಗೆ ಒಬ್ಬನನ್ನು ನಿಜವಾಗಿ ಪ್ರೀತಿಸಲು ಸಾಧ್ಯವಾದಾಗ ಮಾತ್ರ ಇಡೀ ವಿಶ್ವವನ್ನು ಪ್ರೀತಿಸುವುದೆಂದರೇನು ಎಂಬುದು ತಿಳಿಯುತ್ತದೆ. ಒಬ್ಬರನ್ನು ಪ್ರೀತಿಸಲು ಸಾಧ್ಯವಾಗದವನು, ಮಾನವ ಜನಾಂಗವನ್ನೇ ಪ್ರೀತಿಸುತ್ತೇನೆ ಎನ್ನುವುದು ಹಾಸ್ಯಾಸ್ಪದವಾಗುತ್ತದೆ. ದೇವರ ಬಗ್ಗೆ ಪ್ರೀತಿ, ಮನುಷ್ಯನ ಬಗ್ಗೆ ಪ್ರೀತಿ ಎಂದು ಪ್ರೀತಿಯನ್ನು ವಿಭಜಿಸಲಿಕ್ಕಾಗುವುದಿಲ್ಲ. ಅರಳಿಕೊಂಡ ಒಂದು ಹೂ ವಿಪುಲವಾಗಿ ತನ್ನ ಪರಿಮಳ ಬೀರುವಂತೆ, ಪ್ರೀತಿಯೂ ತನ್ನನ್ನು ತಾನು ವಿಪುಲವಾಗಿ ಕೊಟ್ಟುಕೊಳ್ಳುತದೆಯಷ್ಟೆ. ಹಾಗಾಗಿಯೇ ನೈಜ ಪ್ರೀತಿಯಲ್ಲಿ 'ಒಬ್ಬರು', 'ಎಲ್ಲರು' ಎನ್ನುವ ಭೇದವೇ ಇರುವುದಿಲ್ಲ. ಅಲ್ಲಿ ಪ್ರೀತಿ ಮಾತ್ರ ಹೊರಹೊಮ್ಮುತ್ತಿರುತ್ತದೆ, ಲೆಕ್ಕಾಚಾರವಲ್ಲ. ಆ ಸ್ಥಿತಿಯಲ್ಲಿ ಸಮಸ್ಯೆಗಳು ಕರಗಿ ಹೋಗುತ್ತವೆ. ಪ್ರಜ್ಞೆ ಅರಳುತ್ತದೆ. ಆನಂದ ಉಕ್ಕುತ್ತಿರುತ್ತದೆ. ಇಂಥ ಪ್ರೀತಿಯ ಆಳವಾದ ಅನುಭವ ಆಗದಿದ್ದರೆ ನಮಗೆ ನೋವು ನಿರಾಸೆಗಳು ತಪ್ಪಿದ್ದಲ್ಲ. ಯಾಕೆಂದರೆ, ತೋರಿಕೆಯ ಪ್ರೀತಿ ಯಾವಾಗ ಆರಂಭವಾಗುವುದು ಮತ್ತು ಯಾವಾಗ ಕೊನೆಗೊಳ್ಳುವುದು ಎಂದು ಹೇಳುವುದು ಕಷ್ಟ.

ನಮ್ಮ ಬುದ್ಧಿಶಕ್ತಿಯನ್ನು ನಾವು ಎಷ್ಟು ಬೇಕಾದರೂ ಬೆಳೆಸಿಕೊಳ್ಳಬಹುದು. ನಾವು ಮಹಾಮೇಧಾವಿಗಳಾಗಬಹುದು, ಕಲಿಯುವ ಅದ್ಭುತ ಶಕ್ತಿಯನ್ನು ಪಡೆದಿರಬಹುದು, ಮಹಾತ್ಯಾಗಶೀಲರಾಗಬಹುದು, ಆದರ್ಶವಾದಿಗಳಾಗಬಹುದು. ಆದರೆ ಇವೆಲ್ಲವೂಗಳೂ ಕೇವಲ ಬುದ್ಧಿಗೆ ಸಂಬಧಪಟದ್ದು. ಈ ಬುದ್ಧಿಯ ಜತೆ ಹೃದಯದ ಕಸಿ ಆಗದಿದ್ದಲ್ಲಿ, ನಮ್ಮ ಬಾಳು ಕಂಪು ಬೀರದ ಕಾಗದದ ಹೂವಿನಂತೆ, ವ್ಯರ್ಥ. ಏಕೆಂದರೆ ಬುದ್ಧಿ ರಕ್ಷಣಾತ್ಮಕವಾದ ಆಟಗಳನ್ನು ಆಡುತ್ತಲೇ ಇರುತ್ತದೆ. ನಮ್ಮ ಬಾಳಿನ ಸುತ್ತ ರಕ್ಷಣೆಯ ಕೋಟೆಯನ್ನು ಕಟ್ಟುವ ಮನಸ್ಸಿಗೆ ಪ್ರೀತಿಸಲು ಸಾಧ್ಯವಿಲ್ಲ. ಆದರೆ ಹೃದಯದಿಂದ ಹೊರಹೊಮ್ಮುವ ಪ್ರೀತಿಗೆ ಬುದ್ಧಿಯ ಇಂಥ ಕಸರತ್ತುಗಳು ಗೊತ್ತಿರುವುದಿಲ್ಲ. ಬುದ್ಧಿ, ಕಾಲದ ಜತೆ ವ್ಯವಹರಿಸುವಂಥದು; ಪ್ರೀತಿ, ಕಾಲವನ್ನು ಮೀರಿದ್ದು. ಪ್ರೀತಿಯನ್ನು ಬುದ್ಧಿ ಮುಟ್ಟಿದರೆ, ಪ್ರೀತಿ ಮೈಲಿಗೆ ಆಗುತ್ತದೆ. ಆಗ ಪ್ರೀತಿ ಕೇವಲ ಕಣ್ಣುಮುಚ್ಚಾಲೆ ಆಟವಾಗುತ್ತದೆ.

## ಪ್ರೀತಿ ಭಾವಾವೇಶವಲ್ಲ

ಪ್ರೀತಿಯೆಂಬುದು ಕೇವಲ ಭಾವಾವೇಶವಲ್ಲ; ರಸಾತಿರೇಕತೆ ಅಲ್ಲ. ಯಾಕೆಂದರೆ ಈ ಭಾವಾವೇಶವೆಂಬುದು ಇಂದ್ರಿಯ ರಸೋದ್ರೇಕ ಮಾತ್ರ. ಒಬ್ಬ ಧಾರ್ಮಿಕ ಮನುಷ್ಯ ಕೃಷ್ಣನಿಗಾಗಿ, ಏಸುಕ್ರಿಸ್ತನಿಗಾಗಿ ಅಥವಾ ತನ್ನ ಗುರುವಿಗಾಗಿ ಅಳುವುದು ಭಾವಾತಿರೇಕ–ವಾದೀತೇ ವಿನಾ ಪ್ರೀತಿ ಅಲ್ಲ. ಈ ಭಾವೋದ್ರೇಕ ತನ್ನ ಒಳಗಿನ ಅಭಾವದ

ಅಭಿವ್ಯಕ್ತಿಯಾಗಿರುತ್ತದೆ. ಯಾವುದೇ ಧರ್ಮ, ಸತ್ಯದ ಬಗ್ಗೆ ನಿಷ್ಕಾರಣ ಪ್ರೀತಿಯನ್ನು ಒಳಗೊಂಡಿಲ್ಲ. ಸಂಘಟಿತ ಧರ್ಮಗಳು ಪ್ರೀತಿಯನ್ನು ಬಳಸಿಕೊಂಡಾಗ ಅದು ಬತ್ತಿಹೋಗುತ್ತದೆ. ತಮ್ಮ ತಮ್ಮ ಜನಾಕರ್ಷಕ ಚಟುವಟಿಕೆಗಳಲ್ಲೆಲ್ಲಾ ಸಮಾಜಗಳು, ಸಂಘಟಿತ ಧರ್ಮಗಳು, ಸರ್ವಾಧಿಕಾರೀ ಸರ್ಕಾರಗಳು ಪ್ರೀತಿಯನ್ನು ಕೇವಲ ಭಾವೋದ್ರೇಕದ ಮನೋವಿಕಾರವನ್ನಾಗಿ ಪರಿವರ್ತಿಸಿ ನಾಶಮಾಡುತ್ತಿರುತ್ತವೆ. ತನ್ನ ಭಾವಾವೇಶಕ್ಕೆ ಸರಿಯಾದ ಪ್ರತಿಕ್ರಿಯೆ ಬರದಿದ್ದರೆ ಮತ್ತು ತನ್ನ ಭಾವನೆಗಳ ಅಭಿವ್ಯಕ್ತಿಗೆ ಸರಿಯಾದ ಅವಕಾಶ ಸಿಗದಿದ್ದರೆ, ಆತ ಮಹಾ ಕ್ರೂರಿಯಾಗುತ್ತಾನೆ. ಭಾವನಾತ್ಮಕವಾದ ಮನುಷ್ಯನನ್ನು ಯಾವಾಗಲೂ ದ್ವೇಷಕ್ಕೆ, ಯುದ್ಧಕ್ಕೆ, ಕೊಲೆಗೆ ಬಹಳ ಸುಲಭವಾಗಿ ಹುರಿದುಂಬಿಸಬಹುದು. ಇಂಥ ಭಾವಾವೇಶ ಪ್ರೀತಿಯಾಗಬಲ್ಲುದೇ? ನಿಜವಾದ ಪ್ರೀತಿ ನಮ್ಮನ್ನು ಇಂಥ ಯಾವುದೇ ಸಂಕಟಕ್ಕೀಡು ಮಾಡುವುದಿಲ್ಲ.

ಕ್ಷಮಿಸುವುದು ಪ್ರೀತಿಯಲ್ಲ. 'ನನಗೆ ಆತ ನೋವು ಮಾಡಿದ್ದಾನೆ. ಆದರೂ ನಾನು ಆತನನ್ನು ಕ್ಷಮಿಸಿದ್ದೇನೆ' ಎನ್ನುವ ಮನೋಭಾವ 'ನಾನು' ಎನ್ನುವ ಅಹಂಕಾರದ ಅಭಿವ್ಯಕ್ತಿಯಾಗಿರುತ್ತದೆ. ನಿಜವಾದ ಗೌರವವಿಲ್ಲದಲ್ಲಿ ಪ್ರೀತಿಯಿರುವುದಿಲ್ಲ. ನಮಗಿಂತ ಮೇಲಿದ್ದವರ ಮೇಲೆ ಮಾತ್ರ ಗೌರವವಿರುವುದು ಗೌರವದ ಲಕ್ಷಣವಲ್ಲ. ಪ್ರೀತಿ–ಗೌರವಗಳು ನಮಗೆ ಪ್ರಯೋಜನಕ್ಕೆ ಬೀಳುವ ಸಂಬಂಧಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಅದು ಮೇಲಿನವರ ಮೇಲೆ ಹೇಗೋ ಹಾಗೆ ನಮಗಿಂತ ಕೆಳಗಿರುವವರ ಮೇಲೂ ಹರಿಯುತ್ತಿರುತ್ತದೆ.

**ಆಕರ್ಷಣೆ ಪ್ರೀತಿಯಲ್ಲ**

ಹೆಣ್ಣು–ಗಂಡುಗಳ ಪ್ರೇಮ ಅನೇಕ ಸಂದರ್ಭಗಳಲ್ಲಿ ಕೇವಲ ಪರಸ್ಪರ ದೈಹಿಕ ಆಕರ್ಷಣೆಯಾಗಿರುತ್ತದೆಯೇ ವಿನಾ ಪರಸ್ಪರ ಗೌರವ–ತಿಳುವಳಿಕೆಗಳಿಂದ ಹುಟ್ಟಿರುವುದಿಲ್ಲ. 'ನನ್ನವನು, ನನಗೆ ಸೇರಿದವಳು' ಎನ್ನುವ ಭಾವದಲ್ಲಿ ಪ್ರೀತಿಯಿರುವುದಿಲ್ಲ ಇಂಥ ಪ್ರೀತಿ, ತಾನು ಪ್ರೀತಿಸುವ ವಸ್ತುವಿನಲ್ಲಿರುವ ಆಕರ್ಷಣೆ ಹೊರಟು ಹೋದಾಗ, ಬತ್ತಿ ಹೋಗುತ್ತದೆ; ಮಾತ್ರವಲ್ಲ, ತಾನು ಪ್ರೀತಿಸಿದ ವಸ್ತುವಿನ ಜವಾಬ್ದಾರಿಯನ್ನು ವಹಿಸಿಕೊಳ್ಳಲೂ ತಯಾರಿರುವುದಿಲ್ಲ.

ನಮಗೆ ಗೊತ್ತಿರುವ ಯಾವುದೂ ಪ್ರೀತಿಯಲ್ಲ. ಗೊತ್ತಿಲ್ಲದರತ್ತ ಏನೊಂದೂ ಆಯ್ಕೆಯಿಲ್ಲದೆ ಪೂರ್ಣ ಗಮನವಿಡುವುದರ ಮೂಲಕ ಪ್ರೇಮದ ನೈಜ ಸ್ವರೂಪವನ್ನು ಅರಿಯಬಹುದು. ಯಾವುದನ್ನೂ ಹೊಂದುವ ಆಸೆ ಮನಸ್ಸಿನಲ್ಲಿ ಇಲ್ಲದಿದ್ದಾಗ, ಯಾವುದರ ಆರಾಧಕರೂ ನಾವು ಆಗದೇ ಇದ್ದಾಗ, ಒಬ್ಬಂಟಿಯಾಗಿರಲು ಸಮರ್ಥರಾದಾಗ, ಪ್ರೇಮವಿರುತ್ತದೆ. ನಿಸರ್ಗಕ್ಕೆ ಮುಕ್ತವಾಗಿ ತೆರೆದುಕೊಂಡು ಸಂವೇದನಾಶೀಲರಾಗಿರುವುದು, ನಾಶಕ್ಕೂ ಒಡ್ಡಿಕೊಳ್ಳುವ ಬಿಚ್ಚು ಮನಸ್ಸಿರುವುದು, ಒಳ್ಳೆಯದನ್ನು ಮಾಡುವುದು ಎಲ್ಲವೂ ಪ್ರೇಮದ ಅಂಶಗಳೇ. ಆದರೆ ಪ್ರೀತಿ ಇವೆಲ್ಲದಕ್ಕಿಂತಲೂ ಹೆಚ್ಚಿನದು. ಸಂವೇದನಾಶೀಲರಾಗಿರುವುದೇ ಪ್ರೀತಿ.

ನಿಜವಾದ ಪ್ರೀತಿ ಏನನ್ನೂ ಬಯಸುವುದಿಲ್ಲ. ಅದು ತನ್ನನ್ನೇ ತಾನು ಕೊಟ್ಟು ಕೊಳ್ಳುವಂಥದು. ಪರಿಶುದ್ಧ ಪ್ರೀತಿಗೆ ಗುರಿಯಿರುವುದಿಲ್ಲ. 'ನನ್ನ ಪ್ರೀತಿ–ನಿನ್ನ ಪ್ರೀತಿ' ಎಂಬ ದ್ವಂದ್ವವಿರುವುದಿಲ್ಲ. ಇಂಥ ಪ್ರೀತಿ ಪ್ರಕಟವಾಗಬೇಕಾದರೆ ಆಂತರ್ಯದಲ್ಲಿ ಯಾವ ಅವಲಂಬನೆಯೂ ಇರಬಾರದು. ಆದರೆ ನಾವು ಯಾವಾಗಲೂ ನಮ್ಮ ಸಂಬಂಧಗಳಲ್ಲೆಲ್ಲಾ ಪ್ರೀತಿಯನ್ನು ಅಳೆಯಲು ಪ್ರಯತ್ನಿಸುತ್ತ ಪ್ರೀತಿಯನ್ನು ಸತತವಾಗಿ ನಾಶ ಮಾಡುತ್ತಿರುತ್ತೇವೆ. ನಿಜವಾದ ಪ್ರೀತಿ ಮನುಷ್ಯ ಸಂಬಂಧಗಳಲ್ಲಿ ದುಃಖವನ್ನು ತರುವುದಿಲ್ಲ.

# 4. ಓದು ಪಠ್ಯ : ಮುಲ್ಲಾ ನಸ್ರುದ್ದೀನ್ ಕಥೆಗಳು

**ಅನು : ಡಾ.ಜೆ.ಬಾಲಕೃಷ್ಣ**

## ಪ್ರಾಮಾಣಿಕ ಕಳ್ಳ

ಕಳ್ಳ ನಸ್ರುದ್ದೀನ್ ಒಂದು ದಿನ ತನ್ನ ಕತ್ತೆಯ ಮೇಲೆ ಹುಲ್ಲಿನ ಕಂತೆಯನ್ನು ಇರಿಸಿಕೊಂಡು ಊರಿಗೆ ಪ್ರವೇಶಿಸುತ್ತಿದ್ದ. ಊರಿನ ಮುಖ್ಯ ದ್ವಾರದಲ್ಲಿದ್ದ ಸೈನಿಕ ಅವನನ್ನು ತಡೆದು, 'ನಿಲ್ಲು! ಯಾರು ನೀನು?' ಎಂದು ಕೇಳಿದ.

'ನಾನೊಬ್ಬ ಪ್ರಾಮಾಣಿಕ ಕಳ್ಳ' ಎಂದ ನಸ್ರುದ್ದೀನ್.

'ಹೌದೆ. ಹುಡುಕುತ್ತೇನೆ. ಕಳ್ಳಮಾಲು ಸಿಕ್ಕಲ್ಲಿ ನಿನ್ನನ್ನು ಸೆರೆಮನೆಗೆ ಹಾಕುತ್ತೇನೆ' ಎಂದ ಸೈನಿಕ.

'ಆಯಿತು. ನಿಮ್ಮಿಷ್ಟದಂತೆ ಮಾಡಿ' ಎಂದ ಕಳ್ಳ ನಸ್ರುದ್ದೀನ್.

ಸೈನಿಕ ಕತ್ತೆಯ ಮೇಲಿನ ಹುಲ್ಲಿನ ಕಂತೆಯನ್ನು, ಚೀಲವನ್ನು ಎಲ್ಲಾ ಹುಡುಕಿದ. ಆದರೆ ಏನೂ ಸಿಗಲಿಲ್ಲ.

'ಆಯಿತು. ಈ ದಿನ ತಪ್ಪಿಸಿಕೊಂಡಿದ್ದೀಯ. ಹೋಗು' ಎಂದ ಸೈನಿಕ.

ಊರಿಗೆ ಪ್ರವೇಶಿಸಿದ ನಸ್ರುದ್ದೀನ್ ಪುನಃ ಮರುದಿನ ಕತ್ತೆಯ ಮೇಲೆ ಹುಲ್ಲಿನ ಕಂತೆ ಹೊತ್ತು ಅದೇ ದ್ವಾರದ ಮೂಲಕ ಊರಿಗೆ ಪ್ರವೇಶಿಸಲು ಬಂದ. ಅವನನ್ನು ಬಾಗಿಲಲ್ಲಿ ತಡೆದ ಅದೇ ಸೈನಿಕ 'ಪ್ರಾಮಾಣಿಕ ಕಳ್ಳನ' ಕತ್ತೆಯ ಮೇಲಿನ ಹುಲ್ಲಿನ ಕಂತೆ, ಚೀಲ, ನಸ್ರುದ್ದೀನನ ಕಿಸೆಗಳನ್ನು ಎಲ್ಲಾ ಹುಡುಕಿದ. ಆ ದಿನವೂ ಅವನಿಗೆ ಯಾವುದೇ ಕದ್ದ ಮಾಲು ಸಿಗಲಿಲ್ಲ. ಅವನನ್ನು ಬಿಟ್ಟುಬಿಟ್ಟ. ಅದೇ ಪ್ರಕ್ರಿಯೆ ಪ್ರತಿ ದಿನವೂ ನಡೆಯುತ್ತಿತ್ತು. ಸೈನಿಕನಿಗೆ ಏನೂ ಸಿಗುತ್ತಿರಲಿಲ್ಲ. ಆದರೆ ನಸ್ರುದ್ದೀನ್ ದಿನೇ ದಿನೇ ಸಾಹುಕಾರನಾಗುತ್ತಿದ್ದ. ಒಳ್ಳೆಯ ಒಡವೆ ವಸ್ತ್ರಗಳನ್ನು ಧರಿಸಲಾರಂಭಿಸಿದ್ದ. ಅವನನ್ನು ನೋಡುತ್ತಿದ್ದ ಸೈನಿಕನಿಗೆ ಇವನ್ಯಾವನೋ ಚತುರ ಕಳ್ಳನೇ ಇರಬೇಕು ಎನ್ನಿಸಿತ್ತು. ಎಷ್ಟು ಪ್ರಯತ್ನಿಸಿ ತಲೆಕೆಡಿಸಿಕೊಂಡರೂ ನಸ್ರುದ್ದೀನ್ ಒಂದು ದಿನವೂ ಸಿಕ್ಕಿಹಾಕಿಕೊಂಡಿರಲಿಲ್ಲ. ಕೊನೆಗೊಂದು ದಿನ ಸೈನಿಕ ತನ್ನ ಸೇವೆಯಿಂದ ನಿವೃತ್ತಿ ಹೊಂದಿದ. ಆದರೂ ಅವನಿಗೆ ನಸ್ರುದ್ದೀನನ ಚಾಕಚಕ್ಯತೆ ನಿಗೂಢವೆನ್ನಿಸಿ ಅವನ ಬಾಯಿಯಿಂದಲೇ ಅದರ ಬಗ್ಗೆ ಕೇಳೋಣವೆಂದು ಅವನನ್ನು ಅರಸಿ ಹೊರಟ.

ಮಾರುಕಟ್ಟೆಯಲ್ಲಿ ಕತ್ತೆಗಳನ್ನು ಮಾರಾಟಮಾಡುತ್ತಿದ್ದ ನಸ್ರುದ್ದೀನನನ್ನು ಭೇಟಿಯಾಗಿ, 'ನಸ್ರುದ್ದೀನ್ ನೀನೊಬ್ಬ ಕಳ್ಳಸಾಗಣೆದಾರನೆಂದು ನನಗೆ ಗೊತ್ತು. ಆದರೆ ನೀನು ನನಗೆ ಒಂದು ದಿನವೂ ಸಿಕ್ಕಿಬೀಳಲಿಲ್ಲ. ನಿಜ ಹೇಳು, ನೀನು ಏನನ್ನು ಕದ್ದು ಸಾಗಿಸುತ್ತಿದ್ದೆ?' ಎಂದು ಕೇಳಿದ.

'ಕತ್ತೆಗಳನ್ನು' ಹೇಳಿದ ನಸ್ರುದ್ದೀನ್.

## ನಾವು ಅಳದಿದ್ದರೆ ಮತ್ಯಾರು ಅಳಬೇಕು

ದೊರೆ ತೈಮೂರ್ ಅತ್ಯಂತ ಕುರೂಪಿ, ಒಕ್ಕಣ್ಣಿನವ ಹಾಗೂ ಕುಂಟನಾಗಿದ್ದ. ಒಂದಿ ದಿನ ಮುಲ್ಲಾ ನಸ್ರುದ್ದೀನ್ ಆತನ ಜೊತೆಗಿದ್ದಾಗ, ತೈಮೂರನಿಗೆ ತನ್ನ ತಲೆ ತುರಿಕೆಯಾಯಿತು. ತನ್ನ ತಲೆ ತುರಿಸಿಕೊಂಡಾಗ ಕೂದಲು ವಿಪರೀತ ಉದ್ದ ಬೆಳೆದಿರುವುದು ಆತನ ಗಮನಕ್ಕೆ ಬಂದಿತು. ದೊರೆ ಕೂಡಲೇ ಅರಚಿದ, 'ಕ್ಷೌರಿಕನನ್ನ ಕರೆತನ್ನಿ!'

ಕ್ಷೌರಿಕನಿಗೆ ಕರೆಹೋಯಿತು. ಕ್ಷೌರಿಕ ಬಂದವನೆ ದೊರೆಯ ಕೂದಲನ್ನು ಕತ್ತರಿಸಿ ತನ್ನ ಮುಖ ನೋಡಿಕೊಳ್ಳಲೆಂದು ಕನ್ನಡಿಯನ್ನು ದೊರೆ ತೈಮೂರನ ಕೈಗೆ ಕನ್ನಡಿಯನ್ನು ನೀಡಿದ. ಕನ್ನಡಿಯಲ್ಲಿ ತನ್ನ ಕುರೂಪ ಮುಖ ನೋಡಿಕೊಂಡ ತಕ್ಷಣ ತೈಮೂರನಿಗೆ ಅಳುಬಂತು. ಜೋರಾಗಿ ಅಳತೊಡಗಿದ. ನಸ್ರುದ್ದೀನನಿಗೆ ದೊರೆ ಅಳುತ್ತಿರುವ ಕಾರಣ ಗೊತ್ತಿತ್ತು. ಅವನೂ ಸಹ ಆತನ ಜೊತೆಯಲ್ಲಿ ಜೋರಾಗಿ ಅಳತೊಡಗಿದ. ಇಬ್ಬರೂ ಕೆಲಕಾಲ ಅತ್ತರು. ಸುತ್ತಮುತ್ತಲ ಜನ ದೊರೆಗೆ

ಸೌಂದರ್ಯ ಇರುವುದು ದೇಹದಲ್ಲಿ ಅಲ್ಲ ಹೃದಯದಲ್ಲಿ ಎಂದು ಸಾಂತ್ವನ ಹೇಳಿ ಸುಮ್ಮನಾಗಿಸಿದರು. ಆದರೆ ಕನ್ನಡಿಯಲ್ಲಿ ನನ್ನ ಮುಖ ನೋಡಿಕೊಂಡಾಗ ನಾನು ಕುರೂಪಿಯೆಂದು ತಿಳಿಯಿತು. ನಾನೊಬ್ಬ ದೊರೆ. ಅತ್ಯಂತ ಸಿರಿವಂತ, ಬೇಕಾದಷ್ಟು ಹೆಂಡತಿಯರಿದ್ದಾರೆ, ಆದರೂ ನಾನೊಬ್ಬ ಕುರೂಪಿ. ಅದಕ್ಕೇ ದುಃಖವಾಯಿತು ಜೋರಾಗಿ ಅತ್ತೆ. ಆದರೆ ನೀನ್ಯಾಕೆ ಇನ್ನೂ ಅಳುತ್ತಿದ್ದೀಯೆ?' ಎಂದು ಕೇಳಿದ. ಅದಕ್ಕೆ ಮುಲ್ಲಾ, 'ನೀವೇನೊ ಒಂದು ಸಾರಿ ಕನ್ನಡಿಯಲ್ಲಿ ನಿಮ್ಮ ಮುಖ ನೋಡಿಕೊಂಡು ತಡೆಯಲಾರದೆ ಅತ್ತುಬಿಟ್ಟಿರಿ. ಆದರೆ ನಾವು ನಿನ್ನ ಪ್ರಜೆಗಳು ಹಗಲು ರಾತ್ರಿ ಪ್ರತಿ ದಿನ ನಿಮ್ಮ ಮುಖ ನೋಡುತ್ತಲೇ ಇರಬೇಕಲ್ಲಾ? ಇನ್ನು ನಾವಲ್ಲದೆ ಮತ್ತಾರು ಅಳಬೇಕು ಹೇಳಿ?' ಎಂದು ತನ್ನ ಅಳು ಮುಂದುವರೆಸಿದ.

## ಜ್ಞಾನೋದಯದ ಹಾದಿ

ಒಂದು ದಿನ ಮುಲ್ಲಾ ನಸ್ರುದ್ದೀನ್ ತನ್ನ ಊರಿನ ಮುಖ್ಯ ರಸ್ತೆಯಲ್ಲಿ ಹೋಗುತ್ತಿದ್ದ ಒಂದಷ್ಟು ಜನರ ಗುಂಪು ಆತನನ್ನು ಹಿಂಬಾಲಿಸುತ್ತಿತ್ತು ಹಾಗೂ ಅವರು ನಸ್ರುದ್ದೀನ್ ಏನು ಮಾಡುತ್ತಾನೋ ಅದನ್ನೇ ಅನುಕರಿಸುತ್ತಿದ್ದರು. ನಸ್ರುದ್ದೀನ್ ಒಂದೆರಡು ಹೆಜ್ಜೆ ಹಾಕಿ ತನ್ನ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಮುಂದಕ್ಕೆ ಬಾಗಿ ತಕ್ಷಣ ಮೇಲಕ್ಕ ಹಾರಿ 'ಹ್ಹೋ....ಹ್ಹೋ....ಹ್ಹೋ.... ಎಂದು ಜೋರಾಗಿ ಕೇಕೆ ಹಾಕುತ್ತಿದ್ದ. ಅವನ ಹಿಂಬಾಲಕರು ಅದನ್ನೇ ಅನುಕರಿಸುತ್ತಿದ್ದರು. ಅವರೆಲ್ಲರ ನಡತೆ ಊರಿನ ಜನರಿಗೆ ತಮಾಷೆಯಾಗಿ ಕಾಣುತ್ತಿತ್ತು.

ಆ ರಸ್ತೆಯಲ್ಲಿನ ಅಂಗಡಿಯೊಂದರ ವ್ಯಾಪಾರಿ ನಸ್ರುದ್ದೀನ್‌ನ ಗೆಳೆಯನಾಗಿದ್ದ. ಆತ ತನ್ನ ಗೆಳೆಯನ ಮಂಗಾಟ ನೋಡಿ, 'ಏನಿದು ನಸ್ರುದ್ದೀನ್, ಏನು ಮಾಡುತ್ತಿದ್ದೀಯ? ಇವರೆಲ್ಲಾ ಯಾರು? ಅವರೇಕೆ ನಿನ್ನನ್ನು ಅನುಕರಿಸುತ್ತಿದ್ದಾರೆ?' ಎಂದು ಕೇಳಿದ.

'ನಾನು ಸೂಫಿ ಗುರುವಾಗಿದ್ದೇನೆ' ಹೇಳಿದ ನಸ್ರುದ್ದೀನ್, 'ಇವರೆಲ್ಲಾ ನನ್ನ ಶಿಷ್ಯರು. ಅವರಿಗೆ ನಾನು ಜ್ಞಾನೋದಯದ ಹಾದಿ ತೋರಿಸುತ್ತಿದ್ದೇನೆ.'

'ಹೌದೆ? ಆದರೆ ಅವರಿಗೆ ಯಾವಾಗ ಜ್ಞಾನೋದಾಯವಾಗಿದೆಯೆಂದು ನಿನಗೆ ಹೇಗೆ ತಿಳಿಯುತ್ತದೆ?' ಎಂದ ಆ ಗೆಳೆಯ.

'ಹೋ, ಅದು ಬಹಳ ಸುಲಭ. ಪ್ರತಿ ದಿನ ಬೆಳಿಗ್ಗೆ ನಾನು ನನ್ನ ಶಿಷ್ಯರನ್ನು ಎಣಿಸುತ್ತೇನೆ. ಯಾರ್ಯಾರು ಬಿಟ್ಟುಹೋಗಿದ್ದಾರೋ, ಅವರಿಗೆಲ್ಲಾ ಜ್ಞಾನೋದಯವಾಗಿದೆಯೆಂದು ಅರ್ಥ!' ಎಂದ ಸೂಫಿ ಗುರು ನಸ್ರುದ್ದೀನ್.

## ವಿದ್ವತ್ತಿನ ಸಂಕೇತ

ಆ ಊರಿನ ಒಬ್ಬ ಅನಕ್ಷರಸ್ಥ ವ್ಯಕ್ತಿಯೊಬ್ಬನಿಗೆ ಒಮ್ಮೆ ಸರ್ಕಾರದಿಂದ ಪತ್ರವೊಂದು ಬಂದಿತ್ತು. ಆತನಿಗೆ ಓದು ಬರಹ ಗೊತ್ತಿಲ್ಲದಿದ್ದುದರಿಂದ ಆ ಊರಿನ ವಿದ್ವಾಂಸನಾದ ಮುಲ್ಲಾ ನಸ್ರುದ್ದೀನನ ಬಳಿ ಆತ ಬಂದು ಆ ಪತ್ರವನ್ನು ಓದಿ ಹೇಳುವಂತೆ ಕೇಳಿಕೊಂಡ.

ಆ ಪತ್ರವನ್ನು ತೆಗೆದುಕೊಂಡು ನೋಡಿದ ಮುಲ್ಲಾನಿಗೆ ಆ ಪತ್ರದ ಭಾಷೆ ತಿಳಿದಿರಲಿಲ್ಲ. ಅದನ್ನು ಹಿಂದೆ ಮುಂದೆ ತಿರುಗಿಸಿ ನೋಡಿ, 'ಕ್ಷಮಿಸು, ನನಗೆ ಈ ಪತ್ರವನ್ನು ಓದಲು ಬರುವುದಿಲ್ಲ' ಎಂದು ಹೇಳಿದ.

ಆ ಪತ್ರದಲ್ಲಿ ಏನೋ ಮಹತ್ತರವಾದದ್ದಿರಬಹುದೆಂದು ಕುತೂಹಲದಿಂದ ಬಂದಿದ್ದ ಆ ವ್ಯಕ್ತಿಗೆ ನಿರಾಸೆಯಾಯಿತು. ಜೊತೆಗೆ ಸಿಟ್ಟೂ ಸಹ ಬಂದಿತು. 'ನೀನೆಂಥಾ ವಿದ್ವಾಂಸ! ನಾಚಿಕೆಯಾಗಬೇಕು ನಿನಗೆ ವಿದ್ವತ್ತಿನ ಸಂಕೇತವಾದ ಆ ರುಮಾಲು ಧರಿಸಿರಲು' ಎಂದ.

ಆ ಮಾತನ್ನು ಕೇಳಿಸಿಕೊಂಡ ನಸ್ರುದ್ದೀನ್ ತನ್ನ ತಲೆಯ ಮೇಲಿದ್ದ ರುಮಾಲನ್ನು ತೆಗೆದು ಆ ವ್ಯಕ್ತಿಯ ತಲೆಯ ಮೇಲಿರಿಸಿ, 'ತಗೋ, ಈ ರುಮಾಲು ನಿನಗೆ ಜ್ಞಾನವನ್ನು ಕೊಡುತ್ತದೆ ಎನ್ನುವುದಾದರೆ ನೀನೇ ಆ ಪತ್ರವನ್ನು ಓದಿಕೋ' ಎಂದ.

# ೩. ಸ್ಮಾರಕಗಳು

**ಆಶಯ :**

ಭಾರತದ ಸಂಸ್ಕೃತಿ ಸಂಪ್ರದಾಯಗಳು ಜಗತ್ತಿನಲ್ಲಿಯೇ ವಿಶಿಷ್ಟವಾಗಿವೆ. ಅದೇ ರೀತಿ ಪುರಾತನವೂ ಆಗಿದೆ. ಪ್ರಾಚೀನ ಕಾಲದಲ್ಲಿ ನಿರ್ಮಿಸಲ್ಪಟ್ಟ ಅಥವಾ ಪ್ರಕೃತಿದತ್ತವಾಗಿ ನಿರ್ಮಾಣಗೊಂಡ ಈ ಭವ್ಯ ಸ್ಮಾರಕಗಳು ಇಂದಿಗೂ ಸದೃಡವಾಗಿ ನಿಂದು ದೇಶದ ವೈಭವತೆಯನ್ನು ಜಗತ್ತಿಗೆ ಸಾರುತ್ತಿವೆ. ಈ ಸ್ಮಾರಕಗಳು ಆಯಾ ಪ್ರದೇಶದ ಪ್ರಮುಖ ಹೆಗ್ಗುರುತುಗಳಾಗಿ ಪ್ರವಾಸೋದ್ಯಮಕ್ಕೆ ಇಂಬು ನೀಡುತ್ತಿವೆ.

ದೇವರಾಯನದುರ್ಗ ಹಾಗೂ ನಾಮದ ಚಿಲುಮೆಯನ್ನು ನೋಡಿದ ಕವಿ ಎಸ್.ವಿ.ಪರಮೇಶ್ವರ ಭಟ್ಟರು

ರಾಮನಾಮದ ಜೇನು ಹನಿಹನಿ ತೊಟ್ಟಿಕ್ಕಿ
ಒಸರುವುದೆಂಬಂತೆ ಚಿಲುಮೆಯಲ್ಲಿ
ನೀರುಕ್ಕಿ ಹರಿದಿರೆ ಜನರದಕೆ ಮುದ್ದಾದ
'ನಾಮದ ಚಿಲುಮೆ' ಯೆಂದಂಕಿತವಿಟ್ಟು
ಕಥೆಯೊಂದು ಕಟ್ಟಿದರಿನಿದಾಗಿ ಚೆಲುವಾಗಿ
ರಾಮರ ಹೆಸರನು ತಂದರಿಲ್ಲಿ
ರಾಮದೇವರ ಹೆಸರು ಚಿಲುಮೆಗಿರುವಂದದಿ
ದೇವರಾಯನ ಹೆಸರು ದುರ್ಗಕಿಹುದು.

ಭಾರತದ ಪ್ರತಿಯೊಂದು ನಗರ, ಹಳ್ಳಿಗಳೂ ಪುರಾಣ ಐತಿಹಾಸಿಕ ಸ್ಮಾರಕಗಳ ಆಗರ. ಅವುಗಳನ್ನು ಸಂರಕ್ಷಿಸುವಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕಾದಾಗ ಮಾತ್ರ ಸ್ಮಾರಕಗಳು ಮುಂದಿನ ತಲೆಮಾರಿಗೂ ಉಳಿಯಲು ಸಾಧ್ಯ.

# 1. ಸೋಮನಾಥಪುರ

**– ಕುವೆಂಪು**

ಬಾಗಿಲೊಳು ಕೈಮುಗಿದು ಒಳಗೆ ಬಾ, ಯಾತ್ರಿಕನೆ,
ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು!
ಕಂಬನಿಯ ಮಾಲೆಯನು ಎದೆಯ ಬಟ್ಟಲೊಳಿಟ್ಟು
ಧನ್ಯತೆಯ ಕುಸುಮಗಳನರ್ಪಿಸಿಲ್ಲಿ.
ಗಂಟೆಗಳ ದನಿಯಿಲ್ಲ, ಜಾಗಟೆಗಳಿಲ್ಲಿಲ್ಲ;
ಕರ್ಪೂರದಾರತಿಯ ಜ್ಯೋತಿಯಿಲ್ಲ.
ಭಗವಂತನಾನಂತ ರೂಪುಗೊಂಡಿಹುದಿಲ್ಲಿ;
ರಸಿಕತೆಯ ಕಡಲುಕ್ಕಿ ಹರಿವುದಿಲ್ಲಿ!

ಸರಸದಿಂದುಲಿಯುತಿದೆ ಶಿಲೆಯು ರಾಮಾಯಣವನಿಲ್ಲಿ!
ಬಾದರಾಯಣನಂತೆ ಭಾರತವ ಹಾಡುತಿಹುದಿಲ್ಲಿ!
ಕುಶಲತೆಗೆ ಬೆರಗಾಗಿ ಮೂಕವಾಗಿದೆ ಕಾಲವಿಲ್ಲಿ!
ಮೂರ್ಛೆಯಲಿ ಮೈಮರೆತು ತೇಲುವುದು ಭೂಭಾರವಿಲ್ಲಿ!

# ೨. ಟೈಟಾನಿಕ್ ದುರಂತ !

**– ಪೂರ್ಣಚಂದ್ರ ತೇಜಸ್ವಿ**

"ಈ ಹಡಗನ್ನು ಮುಳುಗಿಸುವಂಥ ಅಪಘಾತ ಯಾವುದನ್ನೂ ನಾನು ಊಹಿಸಲು ಸಾಧ್ಯವೇ ಇಲ್ಲ. ಆಧುನಿಕ ನೌಕಾ ನಿರ್ಮಾಣ ಈಗ ಸಮುದ್ರ ಮಧ್ಯದ ಅಪಘಾತಗಳನ್ನೆಲ್ಲಾ ಮೀರಿ ಮುಂದುವರಿದಿದೆ" ಟೈಟಾನಿಕ್ ಎಂಬ ಜಗತ್ತಿನ ಅತಿ ದೊಡ್ಡ ಮತ್ತು ಅಮೋಘ ಹಡಗಿನ ಕ್ಯಾಪ್ಟನ್ ಎಡ್ವರ್ಡ್ ಸ್ಮಿತ್ ಟೈಟಾನಿಕ್ ಹಡಗು ನಿರ್ಮಾಣವಾಗುತ್ತಿದ್ದ ಸಮಯದಲ್ಲಿ ಹೇಳಿದ್ದ ಹೇಳಿಕೆಗಳಿವು. ಆತ ಬ್ರಿಟನ್ನಿನ ಅಗ್ರಮಾನ್ಯ ನಾವಿಕನೆಂದು ಪ್ರಖ್ಯಾತನಾಗಿದ್ದವ. ತನ್ನ ಜೀವಮಾನದ ಮುಕ್ಕಾಲು ಭಾಗವನ್ನೆಲ್ಲಾ ಸಮುದ್ರದ ಮೇಲೆ ತೇಲುತ್ತಾ ಕಳೆದಿದ್ದವನು.

ಅತನ ಈ ಹೇಳಿಕೆಯ ಐದು ವರ್ಷದ ನಂತರ ೧೯೦೭ರಲ್ಲಿ ಬ್ರೆಮ್ಯಾನ್ ಎಂಬ ಹಡಗು ಉತ್ತರ ಅಟ್ಲಾಂಟಿಕ್ ಸಮುದ್ರದಲ್ಲಿ ನ್ಯೂಯಾರ್ಕಿನತ್ತ ಸಾಗುತ್ತಾ ಇತ್ತು. ಅದರ ಡೆಕ್ಕಿನ ಮೇಲೆ ತಿರುಗಾಡುತ್ತಿದ್ದ ನಾವಿಕನೊಬ್ಬ ಸಮುದ್ರದಲ್ಲಿ ತೇಲುತ್ತಿದ್ದ ಕೆಲವಾರು ವಸ್ತುಗಳತ್ತ ಅಲ್ಲಿದ್ದವರ ಗಮನ ಸೆಳೆದ ದೂರದಿಂದ ಯಾರಿಗೂ ಅವೇನಿರಬಹುದೆಂದು ಸ್ಪಷ್ಟವಾಗಲಿಲ್ಲ. ಆ ಮಹಾ ನೌಕೆ ನಿಧಾನವಾಗಿ ತೇಲುವ ವಸ್ತುಗಳ ಹತ್ತಿರಾಗುತ್ತಲೂ, ಡೆಕ್ಕಿನ ಮೇಲಿದ್ದ ಅನೇಕರಿಗೆ ಅವೇನೆಂದು ಹೊಳೆಯುತ್ತಿದ್ದಂತೆಯೇ ದುಃಖದಿಂದ ಬಿಕ್ಕುತ್ತಾ ಆ ದೃಶ್ಯ ನೋಡಲಾರದೆ ಹಲವರು ತಮ್ಮ ಒಳ ಕೋಣೆಗಳತ್ತ ಓಡಿದರು. ದೃಢ ಮನಸ್ಸಿನಿಂದ ಡೆಕ್ಕಿನ ಮೇಲೆ ನೋಡುತ್ತಾ ನಿಂತಿದ್ದವರಿಗೆ ಕಂಡ ದೃಶ್ಯ ಆಘಾತಕಾರಿಯಾಗಿತ್ತು. ಅಲ್ಲಿ ತೇಲುತ್ತಿದ್ದುದು ಕೇವಲ ಐದು ದಿನಗಳ ಹಿಂದಷ್ಟೆ ಅಪಘಾತಕ್ಕೀಡಾಗಿ ಮುಳುಗಿಹೋದ ಟೈಟಾನಿಕ್ ಹಡಗಿನ ಪ್ರವಾಸಿಗಳ ಹೆಣಗಳು. ಜೀವರಕ್ಷಕ ಉಡುಪು ಧರಿಸಿದ್ದರಿಂದ ಅವರು ಮುಳುಗಿರಲಿಲ್ಲ. ಆದರೆ ಉತ್ತರ ಅಟ್ಲಾಂಟಿಕ್ ಸಮುದ್ರದ ಅತಿ ಶೈತ್ಯದಿಂದ ಅವರೆಲ್ಲಾ ಮರಗಟ್ಟಿ ಸೆಟೆದುಕೊಂಡು ಹೆಣವಾಗಿದ್ದರು. ಏಪ್ರಿಲ್ ಹದಿನೈದನೇ ತಾರೀಖಿನ ಬೆಳಗಿನ ಝಾವದಲ್ಲಿ ನಲವತ್ತಾರು ಸಾವಿರ ಟನ್ ತೂಕದ ಟೈಟಾನಿಕ್ ಹಡಗು ಸಮುದ್ರದಲ್ಲಿ ತೇಲುತ್ತಿದ್ದ ಮಂಜುಗಡ್ಡೆಯ ಐಸ್‌ಬರ್ಗ್‌ಗೆ ಢಿಕ್ಕಿ ಹೊಡೆದು, ಎರಡೂವರೆ ಮೈಲಿಯಷ್ಟು ಆಳವಾದ ಸಮುದ್ರದಲ್ಲಿ ಮುಳುಗಿಹೋಗಿತ್ತು.

"ಶೈತ್ಯದಲ್ಲಿ ಮರಗಟ್ಟಿ ಕಲ್ಲಾಗಿಹೋಗಿದ್ದ ಸ್ತ್ರೀಯೊಬ್ಬಳು ತನ್ನ ಮಗುವನ್ನು ಹಾಗೇ ಕಂಕುಳಲ್ಲಿ ಅವಚಿಕೊಂಡು ಸತ್ತಿದ್ದಳು. ಅವಳ ಹಿಂದೆಯೇ ಇನ್ನೊಬ್ಬ ಹೆಂಗಸು ತನ್ನ ಪ್ರೀತಿಯ ನಾಯನ್ನು ಹಿಡಿದುಕೊಂಡೇ ಸೆಟೆದುಕೊಂಡು ಹೆಣವಾಗಿ ತೇಲುತ್ತಿದ್ದಳು. ಸ್ವಲ್ಪ ದೂರದಲ್ಲಿ ಮೂವರು ಗಂಡಸರು ಒಬ್ಬರನ್ನೊಬ್ಬರು ಗಟ್ಟಿಯಾಗಿ ಹಿಡಿದುಕೊಂಡು ಸತ್ತಿದ್ದರು. ಅಲ್ಲಿಂದ ಅರ್ಧ ಕಿಲೋಮೀಟರು ದೂರದಲ್ಲಿ ಮರದ ಮಂಚ ಒಂದಕ್ಕೆ ಹದಿಮೂರು ಜನ ಗಂಡಸರು ಗಟ್ಟಿಯಾಗಿ ಹಿಡಿದುಕೊಂಡು ತೇಲುತ್ತಿದ್ದುದನ್ನು ನೋಡಿದೆವು. ಅವರೆಲ್ಲಾ ಲೈಫ್ ಬೆಲ್ಟ್ ಬಿಗಿದುಕೊಂಡಿದ್ದರು. ಆದರೆ ಭಯಂಕರ ಚಳಿಯಲ್ಲಿ ಗಡ್ಡೆಗಟ್ಟಿ ಸತ್ತಿದ್ದರು. ಟೈಟಾನಿಕ್ ದುರಂತದ ಭೀಕರತೆಯನ್ನು ನೋಡಿ ಬದುಕಿದ್ದ ನಾವೂ ಮರಗುಟ್ಟುತ್ತಿದ್ದಂತೆ ಭಾಸವಾಯ್ತು." ಎಂದು ಇದನ್ನೆಲ್ಲಾ ದಿಗ್ಭ್ರಾಂತರಾಗಿ ನೋಡಿದ ಪ್ರಯಾಣಿಕರಲ್ಲೊಬ್ಬ ಅನಂತರ ಪತ್ರಿಕಾಕರ್ತರಿಗೆ ವಿವರಿಸಿದ.

೧೯೦೭ರಲ್ಲಿ ಟೈಟಾನಿಕ್ ನೌಕೆಯನ್ನು ನೀರಿಗಿಳಿಸಿದಾಗ ಅದಕ್ಕೆ ಇಂಥದೊಂದು ಭೀಕರ ದುರಂತ ಕಾದಿದೆ ಎಂದು ಯಾರೂ ಊಹಿಸಲು ಸಹ ಸಾಧ್ಯವಿರಲಿಲ್ಲ. ಸಾಗರದ ನಡುವೆ ಹಡಗು ಅಪಘಾತಕ್ಕೆ ಒಳಗಾಗುವ ಕಾಲ ಮುಗಿಯಿತು ಎಂದು ಹೇಳಿದ ಅದರ ಕ್ಯಾಪ್ಟನ್ ಅಭಿಪ್ರಾಯವೇ ಎಲ್ಲರದ್ದೂ ಆಗಿತ್ತು. ಏಕೆಂದರೆ ಟೈಟಾನಿಕ್ ಹಡಗು ಅಷ್ಟು ಬಲವಾದ ಅತ್ಯಾಧುನಿಕ ಹಡಗು ಆಗಿನ ಕಾಲಕ್ಕೆ! ಮನುಷ್ಯ ನೀರಿಗೆ ಇಳಿಸಿದ ಅತಿ ದೊಡ್ಡ ಅತ್ಯಂತ ವೈಭವೋಪೇತ ಹಡಗು ಅದು. ಅದರ ಅಂಗೋಪಾಂಗಗಳ ದೈತ್ಯ ಗಾತ್ರವೇ ಅದೆಂಥ ಹಡಗೆಂಬುದಕ್ಕೆ ಸಾಕ್ಷಿಯಾಗಿತ್ತು. ಆ ಹಡಗಿನ ಚುಕ್ಕಾಣಿಯೇ ನೂರು ಟನ್ನಿಗಿಂತಲೂ ಹೆಚ್ಚು ತೂಗುತ್ತಿತ್ತು. ಹಡಗಿನ ನಾಲ್ಕು ಚಿಮಣಿಗಳೂ ಎಷ್ಟು ದೊಡ್ಡವಾಗಿದ್ದುವೆಂದರೆ ಒಂದೊಂದು ಚಿಮಣಿಯೊಳಗೂ ಎರಡು ರೈಲು ಎಂಜಿನ್ನುಗಳು ಸುಲಭವಾಗಿ ಅಕ್ಕಪಕ್ಕ ಹೋಗಬಹುದಿತ್ತು. ಆ ಹಡಗಿನ ನೂರ

ಐವತ್ತೊಂಬತ್ತು ಕಲ್ಲಿದ್ದಲಿನ ಒಲೆಗಳು ಒಂದು ಮೈಲಿಗೆ ಎರಡು ಟನ್ನಿನಂತೆ ಕಲ್ಲಿದ್ದಲು ಉರಿಸುತ್ತಿದ್ದವು. ಹಡಗು ಹನ್ನೊಂದು ಬಹು ಮಹಡಿ ಕಟ್ಟಡದಷ್ಟು ಉದ್ದಕ್ಕೂ, ಆರು ಅಂತಸ್ತಿನ ಕಟ್ಟಡದೆತ್ತರಕ್ಕೂ ಇತ್ತು. ಇಪ್ಪತ್ತು ಸಾವಿರ ಅಶ್ವಶಕ್ತಿಯ ಉಗಿ ಯಂತ್ರವನ್ನು ಅದಕ್ಕೆ ಅಳವಡಿಸಿದ್ದರು. ಎರಡು ಸಾವಿರದ ಐನೂರು ಜನ ಪ್ರಯಾಣಿಕರನ್ನು ಒಯ್ಯುವ ಅದರಲ್ಲಿ ಹಡಗಿನ ಪರಿಚಾರಕ ವರ್ಗವೇ ಸಾವಿರ ಜನರಿದ್ದರು. ಇದಲ್ಲದೆ ಅದು ಏನು ಮಾಡಿದರೂ ಮುಳಗದಂತೆ ಕೆಳ ಭಾಗದ ಇಡೀ ಅಂತಸ್ತನ್ನೇ ಜಲನಿರೋಧಕವಾಗಿ ರಚಿಸಲಾಗಿತ್ತು. ಕೆಳ ಕೋಣೆಗಳ ಬಾಗಿಲುಗಳು ತುರ್ತು ಸಂದರ್ಭಗಳಲ್ಲಿ ಕ್ಯಾಪ್ಟನ್ ಒಂದು ಸ್ವಿಚ್ಚನ್ನು ಒತ್ತಿದರೆ ಸಾಕು ತಂತಾನೇ ಮುಚ್ಚಿಕೊಳ್ಳುವಂತೆ ಮಾಡಿದ್ದರು. ಆ ಹಡಗು ನಿಜವಾದ ಅರ್ಥದಲ್ಲಿ ಎಂದೂ ಮುಳುಗದ ನೌಕೆಯಾಗಿತ್ತು.

ಆ ಹಡಗನ್ನು ವೇಗದ ಪಯಣಕ್ಕಿಂತ ಪ್ರಯಾಣಿಕರ ಐಷಾರಾಮದ ದೃಷ್ಟಿಯಿಂದ ಕಟ್ಟಿದ್ದರು. ಮೊದಲನೇ ದರ್ಜೆ ಪ್ರಯಾಣಿಕರಿಗೆ ಪ್ಯಾರಿಸ್ಸಿನ ಅರಮನೆಯಂಥ ಕೋಣೆಗಳೂ ಭೋಜನ ಗೃಹಗಳೂ ಇದ್ದುವು. ಭೋಜನ ಗೃಹದಲ್ಲಿ ಊಟ ಮಾಡುವವರ ಮನೋಲ್ಲಾಸಕ್ಕಾಗಿ ಮೂರು ಶ್ರೇಷ್ಠ ಸಂಗೀತ ನಿರ್ದೇಶಕರನ್ನೂ ಪ್ರಖ್ಯಾತ ವಾದ್ಯವೃಂದವನ್ನೂ ನೇಮಿಸಿಕೊಳ್ಳಲಾಗಿತ್ತು. ಆ ಹಡಗಿನ ಪ್ರತಿಯೊಂದನ್ನೂ ನಾನಾ ಕೆತ್ತನೆಗಳ ಓಕ್ ಮರದಲ್ಲಿ ನಿರ್ಮಿಸಿ ಒಳಹೊಕ್ಕರೆ ಪ್ರಾಚೀನ ರಾಜವೈಭವದ ನೆನಪು ಮೂಡುವಂತೆ ಮಾಡಿದ್ದರು. ಇಂಗ್ಲೆಂಡಿನಿಂದ ಅಮೆರಿಕಾಗೆ ಹೋಗಲು ಮೊದಲ ದರ್ಜೆಯ ಟಿಕೆಟ್ಟಿಗ್ಗೆ ನಾಲ್ಕುಸಾವಿರದ ಐನೂರು ಡಾಲರ್, ಎಂದರೆ ಸ್ಥೂಲವಾಗಿ ಇವತ್ತಿನ ನಲವತ್ತು ಸಾವಿರ ಡಾಲರ್ ಎನ್ನಬಹುದು. ಪ್ರಪಂಚದಲ್ಲಿ ಅವತ್ತಿಗೆ ಈಜುಕೊಳ ಹೊಂದಿದ್ದ ಹಡಗು ಇದೊಂದೇ. ಅತ್ಯುತ್ತಮ ವ್ಯಾಯಾಮಶಾಲೆ ಸಹ ಇತ್ತು. ಫೋಟೋಗ್ರಾಫರುಗಳಿಗೆ ಹಡಗಿನಲ್ಲೇ ತಮ್ಮ ಫಿಲಮ್ ಡೆವಲಪ್ ಮಾಡಿ ಪ್ರಿಂಟ್ ಮಾಡಲು ಡಾರ್ಕ್‌ರೂಮ್ ಸೌಲಭ್ಯ ಸಹ ಇತ್ತು. ಎರಡು ಮೂರನೆ ದರ್ಜೆ ಪ್ರಯಾಣಿಕರಿಗೆ ಸಹ ಬೇರೆ ಹಡಗುಗಳಲ್ಲಿ ಮೊದಲ ದರ್ಜೆ ಪ್ರಯಾಣಿಕರಿಗೆ ದೊರೆಯುತ್ತಿದ್ದ ಸೌಲಭ್ಯ ಒದಗಿಸಲಾಗಿತ್ತು. ಒಟ್ಟಿನಲ್ಲಿ ಟೈಟಾನಿಕ್ ಇಂಗ್ಲೆಂಡಿನ ನೌಕಾ ನಿರ್ಮಾಣ ಕೌಶಲ್ಯಕ್ಕೆ ಕಿರೀಟದಂತೆ ಕಾಣಿಸುತ್ತಿತ್ತು. ಬ್ರಿಟನ್ನಿನ ಮತ್ತು ಅಮೆರಿಕಾದ ಶ್ರೀಮಂತರು ಆ ಹಡಗಿನಲ್ಲಿ ಮೊಟ್ಟಮೊದಲು ಪ್ರಯಾಣ ಮಾಡುವ ಸುಯೋಗಕ್ಕಾಗಿ ಹಾತೊರೆಯುತ್ತಾ ಅದು ಪ್ರಯಾಣ ಪ್ರಾರಂಭಿಸುವ ದಿನ ಕಾಯುತ್ತಿದ್ದರು.

ಅದು ೧೯೧೨ನೇ ಇಸ್ವಿ ಎಪ್ರಿಲ್ ಮೂರರಂದು ಅಮೆರಿಕದತ್ತ ಪ್ರಯಾಣ ಆರಂಭಿಸಿ ಮೂರು ದಿನಗಳಾದ ತರುವಾಯ ಅದರ ಎರಡನೆ ಕ್ಯಾಪ್ಟನ್ ಲಾಗ್ ಬುಕ್ಕಿನಲ್ಲಿ "ಇದೊಂದು ತೇಲುವ ಅದ್ಭುತ ಎನ್ನುವುದು ಇದು ಹೋದಲ್ಲೆಲ್ಲಾ ಜಗತ್ತಿಗೆ ಅರಿವಾಗುತ್ತದೆ. ಇದು ಮುಂದುವರಿದ ಹಾಗೂ ದಿನದಿಂದ ದಿನಕ್ಕೆ ಈ ಸತ್ಯ ಹಡಗಿನಲ್ಲಿ ಪ್ರಯಾಣ ಮಾಡುತ್ತಿರುವವರಿಗೆ ಮನದಟ್ಟಾಗುತ್ತಿದೆ. ಪ್ರತಿಯೊಬ್ಬರೂ ಸಮುದ್ರದ ಏರಿಳಿತಗಳಿಗೆ ಕೊಂಚವೂ ಅಲ್ಲಾಡದೆ ಸಾಗುವ ಇದರ ಚಲನೆಯನ್ನು ಮನಸಾರೆ ಹೊಗಳುವವರೇ! ಇನ್ನು ಕೊಂಚ ದಿನ ಓಡಿದನಂತರ ಇದರ ಯಂತ್ರಗಳು ಇನ್ನೂ ನುಣುಪಾಗಿ ಕೆಲಸ ಮಾಡಲು ಶುರು ಮಾಡುತ್ತದೆ. ಆಗಂತೂ ಹಡಗು ನಿಂತಿದೆಯೋ ಮುಂದುವರಿಯುತ್ತಿದೆಯೋ ಹೇಳುವುದೇ ಪ್ರಯಾಣಿಕರಿಗೆ ಕಷ್ಟವಾಗಬಹುದು." ಎಂದು ಬರೆದಿದ್ದಾನೆ.

ಟೈಟಾನಿಕ್ ಹಡಗಿನ ಮೊಟ್ಟಮೊದಲ ಪ್ರಯಾಣದಲ್ಲಿ ಮೊದಲ ದರ್ಜೆಯ ಪ್ರಯಾಣಿಕರಿಗೆ ಬಹಳ ಪ್ರತಿಷ್ಠಿತ ವ್ಯಕ್ತಿಗಳಿದ್ದುದರಿಂದ ಅವರ ಚಲನವಲ, ನಡೆನುಡಿ ಅವರು ಹಡಗಿನಲ್ಲಿ ಕಾಲ ಕಳೆಯುತ್ತಿದ್ದ ರೀತಿ ಇತ್ಯಾದಿಗಳನ್ನು ಗೋಪ್ಯವಾಗಿ ನೋಡಿ ಅನಂತರ ವರದಿ ಮಾಡಲೆಂದೇ ಅನೇಕ ಪತ್ರಿಕಾ ವರಿದಿಗಾರರು ಆ ಹಡಗಿನಲ್ಲಿ ಅಮೆರಿಕಾ ಯಾತ್ರೆ ಹೊರಟಿದ್ದರು. ಅಲ್ಲಿದ್ದ ಪ್ರತಿಷ್ಠಿತರಲ್ಲಿ ಹಲವಾರು ಗಣಿಗಳ ದೊರೆ ಎಂದೇ ಹೆಸರಾಗಿದ್ದ ಬೆಂಜಮಿನ್ ಗುಗೆನ್‌ಹೀಮ್ ಮತ್ತು ಜಾನ್ ಜಾಕೋಬ್ ಆಸ್ಟಾರ್ ಇದ್ದರು. ಅನೇಕ ಪ್ರಖ್ಯಾತ ಸಿನೆಮಾ ತಾರೆಯರಿದ್ದರು. ಇಂಗ್ಲೆಂಡಿನ ಬ್ಯಾಲೇ ನರ್ತಕಿ ಮಡಲೇನ್ ಇದರಲ್ಲಿ ಒಬ್ಬಳು. ಇಂಗ್ಲೆಂಡಿನ ಅತ್ಯಂತ ಶ್ರೀಮಂತರೆಂದು ಹೆಸರಾದ ಸರ್ ಕಾಸ್ಮೋ ಮತ್ತು ಆತನ ಹೆಂಡತಿ ಲೇಡಿ ಡೂಫ್, ಅಮೆರಿಕಾದ ರಾಜಕಾರಣದಲ್ಲಿ ಪ್ರಮುಖರೆನ್ನಿಸಿದ ಮೇಜರ್ ಆರ್ಚಿಬಾಲ್ಡ್ ಇದ್ದರು. ಆರ್ಚಿಬಾಲ್ಡ್ ಅಧ್ಯಕ್ಷ ಥಿಯೋಡೋರ್ ರೂಸ್‌ವೆಲ್ಟರಿಗೆ ರಾಜಕೀಯ ಸಲಹೆಗಾರರಾಗಿದ್ದುದಲ್ಲದೆ ಹಾಲಿ ಅಧ್ಯಕ್ಷ ವಿಲಿಯಂ ಹೂವಾರ್ಡಿಗೂ ಸಲಹೆಗಾರರಾಗಿದ್ದರಿಂದ ಹಡಗಿನ ಸಿಬ್ಬಂದಿ ಅವರನ್ನು ಅತ್ಯಂತ ಮುಖ್ಯ ವ್ಯಕ್ತಿಯನ್ನಾಗಿ ಪರಿಗಣಿಸಿ ಆದರೋಪಚಾರ ನೋಡಿಕೊಳ್ಳುತ್ತಿತ್ತು. ಅಲ್ಲಿ ಪ್ರಯಾಣ ಮಾಡುತ್ತಿದ್ದ ಅತ್ಯಂತ ಶ್ರೀಮಂತರೆಂದರೆ ಇಸಿಡಾರ್ ಸ್ಟ್ರಾಸ್ ದಂಪತಿಗಳು. ಅಲ್ಲಿದ್ದ

ಇನ್ನೊಬ್ಬ ಅಷ್ಟೇ ಪ್ರಖ್ಯಾತ ವ್ಯಕ್ತಿ ಚಿತ್ರತಾರೆ ಮೋಲಿ ಬ್ರೌನ್. ಇವರೆಲ್ಲಾ ಡೆಕ್ಕಿನ ಮೇಲೆ ಕುಳಿತಿದ್ದು ನಿಂತಿದ್ದನ್ನೆಲ್ಲಾ ನೋಟ್ಸ್ ಮಾಡಿಕೊಳ್ಳುತ್ತಾ ವರದಿಗಾರರು ಓಡಾಡುತ್ತಿದ್ದರು. ಹೊರಗಡೆ ಸಾರ್ವಜನಿಕ ಜೀವನದಲ್ಲಿ ಇವರನ್ನು ಹತ್ತಿರದಿಂದ ನೋಡುವುದೇ ಕಷ್ಟವಿದ್ದರೂ ಹಡಗಿನಲ್ಲಿ ವರದಿಗಾರರಿಗೆ ಸುಲಭವಾಗಿ ಕಾಣಸಿಗುತ್ತಿದ್ದರು. ಅಲ್ಲಿದ್ದ ಇನ್ನೊಬ್ಬ ಅತ್ಯಂತ ಕ್ರಿಯಾಶೀಲ ವ್ಯಕ್ತಿ ಎಂದರೆ ಥಾಮಸ್ ಆಂಡ್ರೂಸ್. ಆತ ಆ ಹಡಗು ಕಟ್ಟಿದ ಕಂಪನಿಯಲ್ಲಿ ಪ್ರಮುಖ ಸ್ಥಾನದಲ್ಲಿ ಇದ್ದವನು. ಹಡಗಿನಲ್ಲಿ ಪ್ರಯಾಣ ಮಾಡಿ ಅದರ ಸಾಧಕ ಬಾಧಕಗಳನ್ನೆಲ್ಲಾ ವರದಿ ಮಾಡೆಂದು ಕಂಪನಿಯವರು ಆತನನ್ನು ಅಲ್ಲಿ ಕಳಿಸಿದ್ದರು. ಆತ ಹಡಗಿನ ಮೂಲೆ ಮೂಲೆಗಳನ್ನೂ ಪರಿಶೀಲಿಸುತ್ತ, ಪ್ರಯಾಣಿಕರ ಅಭಿಪ್ರಾಯ, ಕುಂದು ಕೊರತೆಗಳನ್ನು ವಿಚಾರಿಸುತ್ತಾ ಅವರ ಹೇಳಿಕೆಗಳನ್ನು ಬರೆದುಕೊಳ್ಳುತ್ತಾ ಗಡಿಬಿಡಿಯಲ್ಲಿ ಓಡಾಡುತ್ತಿದ್ದ.

ಏಪ್ರಿಲ್ ಹದಿನಾಕನೇ ತಾರೀಖಿಗೆ ಟೈಟಾನಿಕ್ ವೇಗವನ್ನು ನಿಧಾನವಾಗಿ ಹೆಚ್ಚಿಸಲಾಯ್ತು. ಅದು ಈಗ ದಿನಕ್ಕೆ ಐನೂರೈವತ್ತು ಮೈಲಿ ವೇಗದಲ್ಲಿ ನೀರನ್ನು ಸೀಳಿಕೊಂಡು ಮುನ್ನುಗ್ಗುತ್ತಿತ್ತು. ಸಾಗರದ ಹವೆ ನಿಧಾನವಾಗಿ ತಂಪಾಗುತ್ತಾ ಈಗ ನಡುಕ ಹುಟ್ಟಿಸುವ ಚಳಿಗೆ ತಿರುಗಿತ್ತು. ಆದರೆ ಹಡಗಿನಲ್ಲಿ ಸಂಪೂರ್ಣ ಹವಾ ನಿಯಂತ್ರಣ ಇದ್ದುದರಿಂದ ಅಲ್ಲಿದ್ದ ಪ್ರಯಾಣಿಕರ್‍ಯಾರಿಗೂ ಐಷಾರಾಮಕ್ಕೆ ಭಂಗ ಬಂದಿರಲಿಲ್ಲ.

ಆದರೆ ಹಡಗನ್ನು ಮುನ್ನಡೆಸುವ ಬ್ರಿಡ್ಜ್ ರೂಮಿನಲ್ಲಿ ಹಡಗಿನೊಳಗಿದ್ದಷ್ಟು ನಿರ್ಯೋಚನೆಯ ವಾತಾವರಣ ಇರಲಿಲ್ಲ. ಇಳಿಯುತ್ತಿದ್ದ ತಾಪಮಾನ ಈಗ ೩೦ ಡಿಗ್ರಿ ಫ್ಯಾರನ್‌ಹೀಟ್ ತೋರಿಸುತ್ತಿತ್ತು. ಬ್ರಿಡ್ಜ್ ರೂಮಿನಲ್ಲೇನೂ ಚಳಿ ಇರಲಿಲ್ಲ. ಆದರೆ ಟೈಟಾನಿಕ್ ಅಧಿಕಾರಿಗಳಿಗೆ ಬೇರೆ ನಾನಾ ಹಡಗುಗಳಿಂದ ಧ್ರುವವಲಯದ ಲ್ಯಾಬ್ರಡಾರ್ ಕಡೆಯಿಂದ ಸಮುದ್ರ ಪ್ರವಾಹದಲ್ಲಿ ಭಾರೀ ಭಾರೀ ಐಸ್‌ಬರ್ಗ್‌ಗಳು ಕಳಚಿಕೊಂಡು ತೇಲಿಬರುತ್ತಿವೆ ಎಂಬ ಕಳವಳಕಾರಿ ಸುದ್ದಿ ಬರತೊಡಗಿತ್ತು. ಕೆಲವಂತೂ ಅತಿ ದೊಡ್ಡ ಐಸ್‌ಬರ್ಗ್‌ಗಳೆಂದೂ, ಅವು ಹಡಗುಗಳು ಸಾಧಾರಣವಾಗಿ ಚಲಿಸುವ ಮಾರ್ಗದಲ್ಲೇ ಇವೆಯೆಂದೂ ತಿಳಿಸಿದ್ದರು. ಐಸ್‌ಬರ್ಗ್‌ಗಳು ಕಣ್ಣಿಗೆ ಬೀಳದಿದ್ದುದರಿಂದಲೋ, ಅಥವಾ ಅವುಗಳಿರುವ ನಿಶ್ಚಿತ ಸ್ಥಾನ ತಿಳಿಯದುದರಿಂದಲೋ ಅಂತೂ ಅದನ್ನ ಕೇಳಿ ಬ್ರಿಡ್ಜ್‌ನಲ್ಲಿ ಚುಕ್ಕಾಣಿ ಹಿಡಿದಿದ್ದ ನಾವಿಕರು ಚಿಂತಿಸಿದರೇ ಹೊರತು ಹಡಗಿನ ವೇಗವನ್ನೂ ತಗ್ಗಿಸಲಿಲ್ಲ, ಮಾರ್ಗವನ್ನೂ ಬದಲಿಸಲಿಲ್ಲ. ಟೈಟಾನಿಕ್ ತನ್ನ ನಿಶ್ಚಿತ ಮಾರ್ಗದಲ್ಲಿ ವೇಗವಾಗಿ ಮುಂದುವರೆಯಿತು!

ರಾತ್ರಿ ಒಂಬತ್ತು ಗಂಟೆ ನಲವತ್ತು ನಿಮಿಷಕ್ಕೆ ಮೆಸಬಾ ಎಂಬ ಚಿಕ್ಕ ಹಡಗೊಂದರಿಂದ ವೈರ್‌ಲೆಸ್ ಸಂದೇಶ ಟೈಟಾನಿಕ್ ಹಡಗಿಗೆ ಬಂತು. ಟೈಟಾನಿಕ್ ಮಾರ್ಗದಲ್ಲೇ ಭೀಕರ ಗಾತ್ರದ ಐಸ್‌ಬರ್ಗ್‌ಗಳು ತೇಲಿ ಬರುತ್ತಿವೆಯೆಂದು ಅದು ಖಚಿತವಾಗಿ ಸಂದೇಶ ಕಳಿಸಿತ್ತು. ವೈರ್‌ಲೆಸ್ ಮೆಸೇಜ್ ಕಳಿಸುವವನು ಯಾವ ಕಾರಣದಿಂದಲೋ ಅದಕ್ಕೆ ಕೊಡಬೇಕಾದ ಗಮನ ಕೊಡಲಿಲ್ಲ. ಹಡಗಿನಲ್ಲಿ ವಿಜೃಂಭಣೆಯಿಂದ ಕೂಡಿದ ವಾತಾವರಣವಿತ್ತು! ಅಲ್ಲದೆ ಹಡಗಿನಲ್ಲಿದ್ದ ಪ್ರತಿಷ್ಠಿತರೆಲ್ಲಾ ವೈರ್‌ಲೆಸ್ ಸಂದೇಶ ಕಳಿಸುವವನ ಮೇಲೆ ಮುಗಿಬಿದ್ದು ಅಮೆರಿಕಾ ಕೆನಡಾಗಳಲ್ಲಿದ್ದ ತಮ್ಮವರಿಗೆ ಹಡಗಿನಿಂದ ಶುಭಸಂದೇಶ ಕಳಿಸಲು ಸಾಲುಗಟ್ಟಿ ನಿಂತಿದ್ದರು. ಈ ಗಡಿಬಿಡಿಯಲ್ಲಿ ಅಪಾಯದ ಸಂದೇಶವನ್ನು ಕೂಡಲೆ ತಿಳಿಸಲು ಅವನು ತಡ ಮಾಡಿದ. ಟೈಟಾನಿಕ್ ಉಳಿಸಲು ಇದ್ದ ಕೊಟ್ಟಕೊನೆಯ ಅವಕಾಶ ಅದು. ವೈರ್‌ಲೆಸ್ ರೂಮಿನ ಒಂದು ಮೂಲೆಯಲ್ಲಿ ಮೆಸಾಬಾ ಕಳಿಸಿದ ರೇಡಿಯೋ ಸಂದೇಶ ಹಾಗೇ ಇತ್ತು.

ರಾತ್ರಿ ಪಾಳಿಯ ಚುಕ್ಕಾಣಿ ಹಿಡಿಯುವ ಕೆಲಸ ಫ್ರೆಡ್ರಿಕ್ ಫ್ಲೀಟ್ ಮತ್ತು ರೆಗೆನಾಲ್ಡ್ ಲೀಯವರದು. ಇಬ್ಬರು ಯುವ ಅಧಿಕಾರಿಗಳೂ ಐವತ್ತು ಅಡಿ ಎತ್ತರದಲ್ಲಿದ್ದ ಬ್ರಿಡ್ಜ್ ಕೋಣೆಗೆ ಹತ್ತಿ ಅಲ್ಲಿದ್ದ ಇಬ್ಬರನ್ನೂ ಬಿಡುಗಡೆ ಮಾಡಿ ಕುಳಿತುಕೊಂಡರು. ಅವರ ಕಣ್ಣೆದುರು ವಿಸ್ತಾರ ಸಮುದ್ರ. ತಲೆಯ ಮೇಲೆ ನಕ್ಷತ್ರ ಖಚಿತ ಆಕಾಶ!

ರಾತ್ರಿ ಹನ್ನೊಂದು ನಲವತ್ತರ ಹೊತ್ತಿಗೆ ಫ್ಲೀಟ್ ಕಣ್ಣಿಗೆ ಕತ್ತಲಲ್ಲಿ ಕತ್ತಲಾಗಿ ಹಡಗಿನ ನೇರಕ್ಕೇ ಏನೋ ಇರುವಂತೆ ಕಂಡಿತು. ಹಡಗು ವೇಗವಾಗಿ ಮುಂದುವರೆಯುತ್ತಿತ್ತು. ಕಣ್ಣೆದುರು ಕಾಣುತ್ತಿದ್ದುದು ಕತ್ತಲಲ್ಲಿ, ಸಮುದ್ರದ ಹಿನ್ನೆಲೆಯಲ್ಲಿ ಲೀನವಾದಂತಿದ್ದು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಆದರೂ ಫ್ಲೀಟ್ ತಡ ಮಾಡಲಿಲ್ಲ. ಮೂರುಸಾರಿ ಅಪಾಯದ ಗಂಟೆ ಬಾರಿಸಿ ಸ್ಪೀಕರಿನಲ್ಲಿ ನಮ್ಮ ದಾರಿಯ ನೇರಕ್ಕೇ ಐಸ್‌ಬರ್ಗ್ ಇದೆ ಎಂದು ಕೂಗಿ ಎಚ್ಚರಿಸಿದ. ಅದಕ್ಕಿಂತ ಅವನು ಹೆಚ್ಚೇನನ್ನೂ ಮಾಡಲು ಸಾಧ್ಯವಿರಲಿಲ್ಲ.

ಫ್ಲೀಟ್ ಎಚ್ಚರಿಕೆ ಕೂಗು ಹಾಕಿದ ಮುವ್ವತ್ತೇಳು ಸೆಕೆಂಡುಗಳ ತರುವಾಯ ಭೂಕಂಪವಾದಂತೆ ಟೈಟಾನಿಕ್ ಹಡಗು ಒಮ್ಮೆ ಅದುರಿತು. ರಾಕ್ಷಸಾಕಾರದ ವಿಚಿತ್ರಾಕೃತಿಯ ಐಸ್‌ಬರ್ಗ್ ಮೂತಿ ಹಡಗಿನ ಮುಂಭಾಗವನ್ನು ಕೆತ್ತಿದಂತೆ ಕೊರೆಯುತ್ತಾ ಕೆಳಗಿನ ಎಂಜಿನ್ ಕಡೆಗೆ ಮುನ್ನುಗ್ಗಿತು. ಆರನೆಯ ಬಾಯ್ಲರ್ ರೂಮಿನಲ್ಲಿ ಉರಿಯುವ ಬಡಬಾನಲದಂತೆ ಧಗಧಗ ಉರಿಯುತ್ತಿದ್ದ ಉಗಿ ಎಂಜಿನ್ನುಗಳ ಒಲೆ ಎದುರು ಫೈರ್‌ಮ್ಯಾನ್ ಫ್ರೆಡ್ರಿಕ್ ಬ್ಯಾರೆಟ್ ಕಲ್ಲಿದ್ದಲು ತುಂಬುತ್ತಾ ನಿಂತಿದ್ದ. ಇದ್ದಕ್ಕಿದ್ದಂತೆ ಬೆನ್ನು ತಣ್ಣಗಾದಂತಾಯ್ತು. ತಿರುಗಿ ನೋಡಿದ ಅವನಿಗೆ ಎದೆ ಧಸಕ್ಕೆಂದಿತು. ಮಡಚಿಕೊಂಡು ತೂತಾಗಿದ್ದ ಗೋಡೆಯ ತೂತಿನಿಂದ ಹಿಮದಂತೆ ಕೊರೆಯುತ್ತಿದ್ದ ಸಮುದ್ರದ ನೀರು ಒಳಗೆ ನುಗ್ಗುತ್ತಾ ಇತ್ತು. ಅಷ್ಟು ಹೊತ್ತಿಗೆ ಸರಿಯಾಗಿ ಹಡಗಿನ ಅಧಿಕಾರಿ ಕೆಳಗಿನ ಬಾಗಿಲುಗಳನ್ನೆಲ್ಲಾ ಮುಚ್ಚಿಕೊಳ್ಳುವ ಸ್ವಿಚ್ ಒತ್ತಿದ್ದ. ಇನ್ನು ಇಲ್ಲಿದ್ದರೆ ಮರಣವೇ ಗತಿ ಎಂದು ಬ್ಯಾರೆಟ್ ಹಾಗೂ ಮತ್ತೊಬ್ಬ ಅಲ್ಲಿಂದ ಐದನೇ ಬಾಯ್ಲರ್ ರೂಮಿಗೆ ಓಡಿ ನೀರು ನುಗ್ಗದಿರಲೆಂದು ಬಾಗಿಲು ಭದ್ರಪಡಿಸಿದರು. ಇಬ್ಬರೂ ಅಲ್ಲಿಂದ ಮೇಲು ಮಾಳಿಗೆಯತ್ತ ಹೋಗುವ ಏಣಿ ಹತ್ತಿದರು. ಆಗಲೇ ಐದನೇ ಬಾಯ್ಲರ್ ರೂಮಿಗೂ ನೀರು ನುಗ್ಗಲು ಶುರುವಾಗಿತ್ತು.

ಹಡಗನ್ನು ನಿರ್ಮಿಸಿದವರಲ್ಲೊಬ್ಬನಾದ ಥಾಮಸ್ ಆಂಡ್ರೂಸನನ್ನು ಕರೆಸಲಾಯ್ತು. ಅವನೊಡನೆ ಗಾಬರಿಯಾಗಿದ್ದ ಕ್ಯಾಪ್ಟನ್ ಸ್ಮಿತ್ ಕೆಳಗಡೆ ಏನು ಅನಾಹುತವಾಗಿದೆ. ಪರಿಶೀಲಿಸಲು ಸರಸರ ಮಾಳಿಗೆ ಮೆಟ್ಟಿಲಿಳಿದು ಕೆಳಗೆ ನಡೆದರು. ಇಬ್ಬರೂ ಪ್ರಯಾಣಿಕರಿಗೆ ಗಾಬರಿಯಾಗದಿರಲೆಂದು ತಮ್ಮ ಮುಖದಲ್ಲಿನ ಕಳವಳ ಅದುಮಿಟ್ಟುಕೊಂಡು ಮುನ್ನಡೆದರು. ಕೆಳಗೆ ಅರ್ಧದವರೆಗೆ ಮಾತ್ರ ಅವರಿಗೆ ಇಳಿಯಲು ಸಾಧ್ಯಾವಾಗಿದ್ದು. ಏಕೆಂದರೆ ಕೆಳ ಹಂತದಲ್ಲೆಲ್ಲಾ ಆಗಲೇ ಹದಿನಾಲ್ಕು ಅಡಿಗಿಂತಲೂ ಹೆಚ್ಚಿಗೆ ನೀರು ತುಂಬಿಕೊಂಡಿತ್ತು. ಹಡಗಿನ ಮುಂಭಾಗ ತುಂಬಿಕೊಂಡಿದ್ದ ನೀರಿನ ಭಾರಕ್ಕೆ ಆಗಲೇ ನೀರಿನಲ್ಲಿ ಮುಳುಗಲು ಶುರುವಾಗಿತ್ತು. ಥಾಮಸ್ ಅಲ್ಲಿದ್ದ ಕಾಗದದ ಚೂರನ್ನು ತೆಗೆದುಕೊಂಡು ಹದಿನಾಲ್ಕು ಅಡಿ ನೀರು ನುಗ್ಗಲು ಎಷ್ಟು ಕಾಲ ತೆಗೆದುಕೊಂಡಿದೆ ಎಂಬುದರ ಆಧಾರದ ಮೇಲೆ ಹಡಗು ಮುಳುಗಲು ಎಷ್ಟು ಕಾಲ ತೆಗೆದುಕೊಳ್ಳಬಹುದೆಂದು ಲೆಕ್ಕ ಹಾಕಿದ. ಇನ್ನು ಒಂದೂವರೆ ಅಥವಾ ಎರಡು ಗಂಟೆಯೊಳಗೆ ಹಡಗು ಜಲಸಮಾಧಿಯಾಗುತ್ತದೆಂದು ಕ್ಯಾಪ್ಟನ್ನಿಗೆ ಹೇಳಿದ.

ಕ್ಯಾಪ್ಟನ್ ಸ್ಮಿತ್ ಕಾಲಹರಣ ಮಾಡಲಿಲ್ಲ. ನೇರವಾಗಿ ರೇಡಿಯೋ ರೂಮಿಗೆ ಹೋದವನೇ ಸಮೀಪದಲ್ಲಿರುವ ಎಲ್ಲಾ ಹಡಗುಗಳಿಗೂ "ಹಡಗು ಮುಳುಗುತ್ತಿದೆ! ಸಹಾಯ ಮಾಡಿ" ಎಂದು ಅಪಾಯದ ಸಂದೇಶ ಕಳಿಸಲು ಹೇಳಿದ. ಅನಂತರ ಮಧ್ಯರಾತ್ರಿ ಹನ್ನೆರಡು ಗಂಟೆ ಹೊತ್ತಿಗೆ ಹಡಗಿನಲ್ಲಿದ್ದ ಹನ್ನೆರಡು ಜೀವರಕ್ಷಕ ದೋಣಿಗಳನ್ನೂ ನಾಲ್ಕು ಕ್ಯಾನ್ವಾಸ್ ತೆಪ್ಪಗಳನ್ನೂ ಸಮುದ್ರಕ್ಕೆ ಇಳಿಸಲು ಶುರು ಮಾಡಿದರು. ಹಡಗಿನಲ್ಲಿದ್ದ ಪ್ರಯಾಣಿಕರ ಅರ್ಧದಷ್ಟು ಜನಕ್ಕೆ ಮಾತ್ರ ಅವುಗಳಲ್ಲಿ ಜಾಗ ಮಾಡಬಹುದಿತ್ತು. ಬ್ರಿಟನ್ನಿನ ಈ ಮಹಾ ನೌಕೆ! ಎಂದೂ ಮುಳುಗದ ಈ ತೇಲುವ ನಗರ! ತನ್ನ ಚೊಚ್ಚಲು ಪ್ರಯಾಣದಲ್ಲೇ ಇನ್ನೇನು ಸಾಗರ ತಳಕ್ಕೆ ಯಾತ್ರೆ ಹೊರಡಲಿದೆ ಎಂದು ಅಲ್ಲಿದ್ದ ಸಮಸ್ತರಿಗೂ ಸರ್ವಸ್ಪಷ್ಟವಾಯ್ತು. ಅನಂತರ ಹಡಗಿನೊಳಗೆ ನಡೆದ ನೂರಾರು ಶೌರ್ಯ, ಸಾಹಸ, ಹೇಡಿತನ, ಸ್ವಾರ್ಥ, ತ್ಯಾಗಮಯವಾದ ಘಟನೆಗಳು ಮನುಷ್ಯ ಸಾವಿನೆದುರು ಹೇಗೆ ವರ್ತಿಸುತ್ತಾನೆ ಎಂಬುದಕ್ಕೆ ಕನ್ನಡಿ ಹಿಡಿದಂತಿದೆ!

ಶ್ರೀಮತಿ ಸ್ಟೂವರ್ಟ್ ವೈಟ್ ಹಡಗು ಅದುರಿ, ನೀರು ನುಗ್ಗಿ ಮುಳುಗಲು ಶುರುವಾಗಿದೆ ಎಂದು ಅರಿತ ಮೇಲೂ ಅವಳಿಗೆ ಅಪಾಯದ ಅರಿವೇ ಇಲ್ಲದವಳಂತೆ ಇದ್ದಳು. ಆಕೆಯನ್ನು ಲೈಫ್‌ಬೋಟ್ ಹತ್ತಲು ಹೇಳಿದಾಗಲೂ ಬೋಟಿನೊಳಗೆ ಚಳಿ ತಡೆಯಲಾರದೆ ಸಿಗರೇಟ್ ಹತ್ತಿಸಿ ಸೇದುತ್ತಿದ್ದ ಇಬ್ಬರು ಸಹಪ್ರಯಾಣಿಕರ ಜೊತೆ "ಹೆಂಗಸರಿಗೆ ಮರ್ಯಾದೆ ಕೊಡದೆ ಸಿಗರೇಟು ಸೇದುತ್ತಿದ್ದೀರಾ!" ಎಂದು ಜಗಳ ಆರಂಭಿಸಿದಳು! ಲಾರೆನ್ಸ್ ಬಿಸ್ಲೇ ಎನ್ನುವ ಸ್ಕೂಲ್ ಮೇಷ್ಟರು ಹಡಗು ಅದುರಿದಂತಾಗಿ ಅದರ ಎಂಜಿನ್ನುಗಳು ಸ್ಥಬ್ದವಾಗುತ್ತಿದ್ದಂತೆಯೇ ಏನು ನಡೆಯುತ್ತಿದೆ ನೋಡಲು ತನ್ನ ರೂಮಿನಿಂದ ಹೊರಬಂದ. ಹಡಗು ಒಂದು ಪಾರ್ಶ್ವಕ್ಕೆ ಓಲಿತ್ತು! ಆತ ನೆಟ್ಟಗೆ ನಡೆಯಬೇಕೆಂದು ಎಷ್ಟು ಪ್ರಯತ್ನಿಸಿದರೂ ಕುಡಿದವನಂತೆ ಓಲಾಡುತ್ತಾ ನಡೆಯಬೇಕಾಯ್ತು! ಅಷ್ಟರಲ್ಲಿ ಅವನು ಚಕಿತನಾಗುವಂತೆ ಹಡಗಿನ ಹಜಾರದಲ್ಲಿದ್ದ ಕೆತ್ತನೆಮಾಡಿದ ಮರದ ಚೌಕಟ್ಟುಗಳು ಮುರಿದುಕೊಳ್ಳುತ್ತಾ ಕಳಚಿ ಬೀಳಲು ಶುರುವಾಯ್ತು! ಟೈಟಾನಿಕ್ ಆಗಲೇ ಸಾಗರ ತಳಕ್ಕೆ ತನ್ನ ಯಾತ್ರೆ ಪ್ರಾರಂಭಿಸಿತ್ತು!

ಹಡಗು ಮುಳುಗುವ ಕೊನೆಯ ಕ್ಷಣದವರೆಗೂ ಅಪ್ರತಿಮ ತಾಳ್ಮೆ, ದೃಢ ನಿಶ್ಚಯದಿಂದ ಕೆಲಸ ಮಾಡುತ್ತಿದವನೆಂದರೆ ಥಾಮಸ್ ಆಂಡ್ರೂಸ್. ಲೈಫ್ ಜಾಕೆಟ್ಟುಗಳನ್ನು ಹೊತ್ತು ಹಡಗಿನ ಮೂಲೆ ಮೂಲೆಗೂ ಹೋಗಿ ಅಪಾಯದ ಅರಿವಿಲ್ಲದವರನ್ನೆಲ್ಲಾ ಎಚ್ಚರಿಸಿ ಲೈಫ್‌ಜಾಕೆಟ್‌ಗಳನ್ನು ತೊಟ್ಟುಕೊಳ್ಳಲು ಬರದವರಿಗೆ ತೊಡಿಸಿ, "ಹಡಗು ಇನ್ನು ಒಂದು ಗಂಟ್ರೆ ಮಾತ್ರ ತೇಲುತ್ತದೆ, ಅಷ್ಟರೊಳಗೆ ಜೀವ ಉಳಿಸಿಕೊಳ್ಳಿ. ದೋಣಿಗೆ ನುಗ್ಗಾಡಬೇಡಿ. ಸಾಗರದಲ್ಲಿ ತೇಲುತ್ತಿದ್ದು ಸಹಾಯ ಬರುವವರೆಗೆ ಜೀವಂತವಾಗಿರಲು ಪ್ರಯತ್ನಿಸಿ" ಎಂದು ತನ್ನ ಕೊನೆಯ ಸಂದೇಶ ಹೇಳುತ್ತಿದ್ದ.

ಮೊದಲ ದರ್ಜೆ ಪ್ರಯಾಣಿಕರ ರೆಸ್ಟೋರೆಂಟ್ ಮ್ಯಾನೇಜರ್ ಲುಯಿಗ್ಗಿ ಗ್ಯಾಟಿ ತಣ್ಣಗೆ "ಏನಾದರೂ ಸರಿ. ನಾನಂತೂ ಯಾವುದಕ್ಕೂ ಸಿದ್ಧ" ಎಂದು ಉದ್ಗರಿಸಿ ಹಡಗಿನ ಓಲಾಟಕ್ಕೆ ರೆಸ್ಟೋರೆಂಟಿನ ಗಾಜಿನ ಸಾಮಾನುಗಳು ಬಿದ್ದು ಒಡೆಯದಂತೆ ಜೋಡಿಸುತ್ತಾ ಇದ್ದ. ಎಷ್ಟೋ ವರ್ಷಗಳ ನಂತರ ಸಾಗರ ತಳದಲ್ಲಿ ಟೈಟಾನಿಕ್ ಹಡಗನ್ನು ಸಂಶೋಧಿಸಿದಾಗ ರೆಸ್ಟೋರೆಂಟಿನ ಗಾಜಿನ ಸಾಮಾನುಗಳ ನಡುವೆ ಆತನ ಅಸ್ಥಿಪಂಜರ ಹಾಗೇ ಇತ್ತು!

ಇಸಿಡಾರ್ ಸ್ಟ್ರಾಸ್ ದಂಪತಿಗಳು ಹಡಗು ಮುಳುಗುತ್ತದೆ ಎಂದು ಗೊತ್ತಾಗುತ್ತಲೂ ನಿರ್ಧಾರ ತಗೊಂಡಿದ್ದರು. ವಯಸ್ಸಾದ ಅವರಿಬ್ಬರಿಗೂ ಲೈಫ್‌ಬೋಟ್ ಹತ್ತಲು ಹಡಗಿನ ಸಿಬ್ಬಂದಿ ಕರೆದಾಗ ಸ್ಟ್ರಾಸ್ ಹಡಗಿನಲ್ಲಿದ್ದ ಎಲ್ಲರಿಗೂ ಜಾಗ ಸಿಕ್ಕಿಯಾದಮೇಲೆ ಕೊನೆಗೆ ಕ್ಯಾಪ್ಟನ್ ಜೊತೆ ತಾನು ಹತ್ತುತ್ತೇನೆಂದು ದೃಢವಾಗಿ ಹೇಳಿದ. ಯಾರು ಎಷ್ಟು ಮನವಿ ಮಾಡಿಕೊಂಡರೂ ಜಗ್ಗಲೇ ಇಲ್ಲ. ಆತನ ಹೆಂಡತಿ "ಐವತ್ತು ವರುಷ ಅವನೊಟ್ಟಿಗೆ ಬದುಕಿದ ನಾನು ಈಗ ಅವನಿಲ್ಲದೆ ಜೀವ ಉಳಿಸಿಕೊಳ್ಳುವುದರಲ್ಲಿ ಯಾವ ಅರ್ಥವೂ ಇಲ್ಲ, ಮುದಿಯಾಗಿರುವ ತಮ್ಮನ್ನು ಉಳಿಸಲು ಪ್ರಯತ್ನಿಸುವುದಕ್ಕಿಂತ ಬೇರೆ ಸಾರ್ಥಕ ಕೆಲಸ ಮಾಡಿ" ಎಂದು ಸಿಬ್ಬಂದಿಗೆ ನಸುನಗುತ್ತಲೇ ಹೇಳಿದಳು. ಅವಳು ತನ್ನ ಪರಿಚಾರಿಕೆ ಎಲೆನ್ ಬರ್ಡ್‌ಗೆ ತನ್ನ ಬೆಚ್ಚನೆಯ ಕೋಟನ್ನೂ ಆಭರಣಗಳನ್ನೂ ಹಾಕಿಕೊಳ್ಳಲು ಕೊಡುತ್ತಾ ಲೈಫ್‌ಬೋಟ್ ಹತ್ತಲು ಹೇಳಿ ಕೈ ಬೀಸಿದಳು!

ಹಡಗಿನ ವಾದ್ಯವೃಂದವರು ತಮ್ಮ ವಾದ್ಯಗಳ ಸಮೇತ ಹೊರಬಂದು ಡೆಕ್ಕಿನ ಮೇಲೆ ದೋಣಿ ಹತ್ತುತ್ತಿದ್ದ ಜನ ಸಂದಣಿಯ ಪಕ್ಕ ನಿಂತುಕೊಂಡು ತಮ್ಮ ವೃಂದಗಾನ ಆರಂಭಿಸಿದರು. ಪ್ರಾಣಾಪಾಯದ ಪರಿಸ್ಥಿತಿಯಲ್ಲೂ ಅವರ ಸಂಗೀತ ಆ ಗುಂಪಿನಲ್ಲಿ ಅನೇಕರಿಗೆ ಶಾಂತಿ, ಸ್ಥೈರ್ಯ ಕೊಟ್ಟಿತೆಂದು ಬದುಕಿದ ಅನೇಕರು ಅನಂತರ ಹೇಳಿದರು. ದುರದೃಷ್ಟದ ಸಂಗತಿಯೆಂದರೆ ಸಂಗೀತಗಾರರು ಮಾತ್ರ ಯಾರೊಬ್ಬರೂ ಉಳಿಯಲಿಲ್ಲ. ಎಲ್ಲರೂ ಹಡಗಿನೊಂದಿಗೇ ಜಲಸಮಾಧಿಯಾದರು.

ಆ ಹಡಗಿನಲ್ಲಿ ಬದುಕಿ ಉಳಿದ ಎಲ್ಲರೂ ಕೊನೆ ಗಳಿಗೆಯಲ್ಲಿ ಹಡಗಿನ ಮೇಲೆ ನೆಲೆಸಿದ ಶಾಂತಿ ಮತ್ತು ನಿಃಶಬ್ದವನ್ನು ಮರೆಯುವುದಿಲ್ಲ. ನೂರಾರು ಜನ ತಲೆಬಗ್ಗಿಸಿ ಕುಳಿತು ತಪ್ಪೊಪ್ಪಿಗೆ ಒಪ್ಪಿಸುತ್ತಿದ್ದವರಿಗೆ ಫಾದರ್ ಥಾಮಸ್ ಬೈಲೇ ಶಾಂತಚಿತ್ತನಾಗಿ ನಿಂತು ಕ್ಷಮಾದಾನ ನೀಡುತ್ತಿದ್ದುದು ದೋಣಿಯಲ್ಲಿದ್ದವರನ್ನೆಲ್ಲಾ ದಿಗ್ಭ್ರಮೆಗೊಳಿಸಿತು. ರೇಡಿಯೋ ರೂಮಿನಲ್ಲಿ ಹಡಗು ಮುಳುಗುವ ಸಮಯ ಸನ್ನಿಹಿತವಾಗುತ್ತಿರುವುದನ್ನರಿತೂ ಜಾಕ್ ಫಿಲಿಪ್ಸ್ ಸಂಕಟದ ಸಂದೇಶಗಳನ್ನು ನಿರಂತರವಾಗಿ ಕಳಿಸುತ್ತಲೇ ಇದ್ದ. "ದೋಣಿಗಳಲ್ಲಿ ತೆಪ್ಪಗಳಲ್ಲಿ ಹೆಂಗಸರು ಮಕ್ಕಳೂ ಇದ್ದಾರೆ! ಅವರನ್ನು ಈ ಸಮಾಚಾರ ಕೇಳಿದವರು ಸಂರಕ್ಷಿಸಿ. ಈ ಭಯಂಕರ ಚಳಿಯಲ್ಲಿ ಅವರು ಹೆಚ್ಚು ಕಾಲ ಬದುಕಲಾರರು" ಎಂದು ರೇಡಿಯೋ ಸಂದೇಶ ನಿರಂತರವಾಗಿ ಎಲ್ಲ ಹಡಗುಗಳಿಗೂ ಹೋಗುತಲೇ ಇದ್ದವು. ಗುಗೆನ್‌ಹೀಮ್ ಮತ್ತು ಅತನ ಹೆಂಡತಿ ತಮ್ಮ ಲೈಫ್‌ಜಾಕೆಟ್ಟುಗಳನ್ನು ತೆಗೆದೆಸೆದು ಸಂಜೆ ಉಡುಪಿನಲ್ಲಿ ಶಿಸ್ತಾಸಿ ಬಂದು ಪಾದ್ರಿ, ಎದುರು ನಿಂತಿದ್ದರು. "ಸಾವು ಎಂತಿದ್ದರೂ ಇದ್ದೇ ಇದೆ ಫಾದರ್. ಆದರೆ ಹೇಗೆ ನಿರ್ಗಮಿಸಬೇಕು ಎನ್ನುವುದನ್ನು ನಾವು ನಿರ್ಧರಿಸಬಹುದು. ಗಂಭೀರವಾಗಿ ಮರ್ಯಾದಸ್ತರಂತೆ ವಿದಾಯ ಹೇಳೋಣ! ಅಲ್ಲವೆ?" ಎಂದು ಫಾದರ್ ಥಾಮಸ್ ಬೈಲೇಗೆ ಗುಗೆನ್‌ಹೀಮ್ ನಸುನಗುತ್ತ ಹೇಳಿದ. ಈ ಕೋಟ್ಯಾಧಿಪತಿಯ ಚಿತಸ್ಥೈಯ ನೋಡಿ ಫಾದರ್ ತಲೆದೂಗಿದ.

ರಾತ್ರಿ ಎರಡೂವರೆ ಹೊತ್ತಿಗೆ ಮುಂಭಾಗದಲ್ಲಿ ನೀರು ತುಂಬಿಕೊಂಡು ಮುಳುಗುತ್ತಿದ್ದ ಹಡಗು ಭಾರ ಹೆಚ್ಚಾಗಿ ಇಡೀ ಹಡಗಿನ ಹಿಂಭಾಗ ಆಕಾಶದಲ್ಲಿ ಮೇಲೆದ್ದಿತು. ಅನಂತರ ತನ್ನ ಭಾರಕ್ಕೆ ತಾನೇ ಮುರಿದು ಮುಳುಗಿಹೋಯ್ತು. ಅಲ್ಲಿಯವರೆಗೂಇದ್ದ ಹಡಗಿನ ದೀಪಗಳು ಸಮುದ್ರದಲ್ಲಿ ಅಂತರ್ಧಾನವಾದಕೂಡಲೇ ಕತ್ತಲಾವರಿಸಿತು.

ಹಡಗಿನ ಅಧಿಕಾರಿ ಹೆರಾಲ್ಡ್ ಫಿಲ್‌ಮೋರ್ ಲೈಫ್ ಜಾಕೆಟ್ಟಿನ ಸಹಾಯದಿಂದ ತೇಲುತ್ತಾ ಸಹಾಯ ಬರುವವರೆಗೂ ಹೇಗಾದರೂ ಜೀವ ಉಳಿಸಿಕೊಳ್ಳಲು ಹೆಣಗುತ್ತಿರಬೇಕಾದರೆ ಯಾರೋ ಭುಜ ಹಿಡಿದು ಎಳೆದಂತಾಯ್ತು. ತಿರುಗಿ ನೋಡಿದಾಗ ಒಬ್ಬ ವಯಸ್ಸಾದ ವ್ಯಕ್ತಿ ಆತನ ಕೈ ಹಿಡಿದು ಮೇಲೆತ್ತಿದ. ಆತ ಮುರಿದ ಹಡಗಿನ ಯಾವುದೋ ಮರದ ಸಾಮಾನಿನ ಮೇಲೆ ಹತ್ತಿ ಕುಳಿತ್ತಿದ್ದ. ಫಿಲ್‌ಮೋರ್ ಹತ್ತಿ ಕುಳಿತೊಡನೆ ಅವನನ್ನೇ ದಿಟ್ಟಿಸುತ್ತ ಎಂಥ "ಅಮೋಘ ರಾತ್ರಿ!" ಎಂದು ಉದ್ಗರಿಸಿದವನೇ ಸತ್ತು ಸಮುದ್ರಕ್ಕೆ ಉರುಳಿದ. ಅವನನ್ನು ಮತ್ತೆ ಮೇಲೆತ್ತಲು ಪ್ರಯತ್ನಿಸಿದ ಫಿಲ್‌ಮೋರ್‌ಗೆ ಅವನ ಶರೀರ ಆಗಲೇ ಚಳಿಯಲ್ಲಿ ಗಡ್ಡೆಗಟ್ಟಿದ್ದು ತಿಳಿಯಿತು.

ಬೆಳಗಾಗುತ್ತಾ ಬರುತ್ತಿದ್ದಂತೆಯೇ ಸಮುದ್ರ ಅಲೆಗಳಿಲ್ಲದೆ ಸ್ಥಬ್ದವಾಗಿ ನಿಃಶಬ್ದವಾಯ್ತು. ದೋಣಿಗಳಿಂದ ಯಾರೋ ಆಗೀಗ ಕೆಮ್ಮುವುದು, ಅಲ್ಲೊಬ್ಬರು ಇಲ್ಲೊಬ್ಬರು ಅಳುತ್ತಾ ಬಿಕ್ಕುವುದು ಮಾತ್ರ ಕೇಳುತ್ತಿತ್ತು. ಆರನೇ ಲೈಫ್‌ಬೋಟಿನ ನಾಯಕತ್ವ ಮೋಲೀ ಬ್ರೌನ್ ವಹಿಸಿಕೊಂಡಿದ್ದಳು. ಆಕೆ ಆ ಬೋಟಿಗೆ ಬಂದಿದ್ದೂ ಕೇವಲ ಆಕಸ್ಮಿಕವೇ ಎಂದು ಹೇಳಬೇಕು. ದೋಣಿಗೆ ಹೆಂಗಸರು ಮಕ್ಕಳನ್ನೆಲ್ಲಾ ಹತ್ತಿಸುವ ಜವಾಬ್ದಾರಿ ತೆಗೆದುಕೊಂಡ ಆಕೆ ನೂಕುನುಗ್ಗಲಿನಲ್ಲಿ ಸಿಕ್ಕಿಕೊಂಡ ಹೆಂಗಸರನ್ನೆಲ್ಲಾ ಎಳೆತಂದು ದೋಣಿ ಹತ್ತಿಸುತ್ತಿದ್ದಳು. ಈಕೆಗೆ ದೋಣಿ ಹತ್ತುವಂತೆ ಹೇಳಿದರೆ ಕೇಳುವುದಿಲ್ಲವೆಂದು ಅರಿತಿದ್ದ ಕ್ಯಾಪ್ಟನ್ ರಾಬರ್ಟ್ಸ್ ಹಿಚ್ಚಿನ್ಸ್ ಆಕೆಯನ್ನು ಅನಾಮತ್ತು ಎತ್ತಿಕೊಂಡು ಸಮುದ್ರಕ್ಕೆ ಇಳಿಯುತ್ತಿದ್ದ ಲೈಫ್‌ಬೋಟ್ಗೆ ದೊಪ್ಪನೆ ಹಾಕಿದ್ದ. ಮೋಲೀಬ್ರೌನ್ ಲೈಫ್‌ಬೋಟಿನಲ್ಲಿದ್ದವರೆಲ್ಲರೂ ಸರದಿ ಪ್ರಕಾರ ಹುಟ್ಟು ಹಾಕಬೇಕೆಂದು ಹೇಳಿದಳು. ಶರೀರದ ಶಾಖ ಮತ್ತು ರಕ್ತಚಲನೆ ನಿಲ್ಲದಂತೆ ಮಾಡಲು ಇದೊಂದೇ ಉಪಾಯವಾಗಿತ್ತು. ಅವಳ ಆಜ್ಞೆಯನ್ನು ಎಲ್ಲರೂ ಶಿರಸಾ ವಹಿಸಿ ಹುಟ್ಟು ಹಾಕಲು ಶುರು ಮಾಡಿದರು.

ಬೆಳಗಿನಝಾವ ನಸುಕು ಹರಿಯುತ್ತಿದ್ದಂತೆಯೇ ದೋಣಿಗಳಲ್ಲಿದ್ದವರೆಲ್ಲರಿಗೂ ದೇವರೇ ಪ್ರತ್ಯಕ್ಷವಾದಂತೆ ದೂರದಲ್ಲಿ ಹಡಗೊಂದು ಗೋಚರಿಸಿತು. ಕುನಾರ್ಡ್ ಕಂಪನೆಯ ಪಾರ್ಪೇಥಿಯ ಎನ್ನುವ ಹಡಗಿಗೆ ಟೈಟಾನಿಕ್ ಕಳಿಸಿದ ಕೊಟ್ಟಕೊನೆಯ ಅಪಾಯದ ಸಂದೇಶ ತಲುಪಿ ಅದು ದಿಕ್ಕು ಬದಲಿಸಿ ಅಪಘಾತದ ಸ್ಥಳ ಹುಡುಕಿಕೊಂಡು ಬಂದಿತ್ತು. ಆ ಹಡಗು ಸಹ ನೂರಾರು ಐಸ್‌ಬರ್ಗ್‌ಗಳನ್ನು ಬಳಸಿ ತಪ್ಪಿಸಿ ಆ ಜಾಗಕ್ಕೆ ಬಂದಿತ್ತು. ಸಮುದ್ರದಲ್ಲಿ ಚಳಿಯಿಂದ ಗಡ್ಡೆಗಟ್ಟಿ ಸಾಯದೆ ಇನ್ನೂ ಬದುಕಿ ಉಳಿದ್ದಿದ್ದವರನ್ನೆಲ್ಲಾ ಅದು ಹತ್ತಿಸಿಕೊಂಡು ನ್ಯೂಯಾರ್ಕ್ ಮಾರ್ಗ ಹಿಡಿಯಿತು. ಟೈಟಾನಿಕ್ ಅಪಘಾತದಲ್ಲಿ ಬದುಕಿ ಉಳಿದವರನ್ನೆಲ್ಲಾ ತರುತ್ತಿದ್ದರೆಂಬ ವಾರ್ತೆ ಕೇಳಿಯೇ ಕಾರ್ಪೇಥಿಯ ಹಡಗನ್ನು ಇದಿರುಗೊಳ್ಳಲು ಮುವ್ವತ್ತು ಸಾವಿರಕ್ಕೂ ಹೆಚ್ಚು ಜನರು ನ್ಯೂಯಾರ್ಕ್ ಬಂದರಿನಲ್ಲಿ ಸೇರಿದ್ದರು.

ಕೆಲವು ದಿನಗಳ ನಂತರ ಅಟ್ಲಾಂಟಿಕ್ ಸಾಗರದ ಈ ಅತ್ಯಂತ ಘೋರ ದುರಂತದ ಬಗ್ಗೆ ಅಮೆರಿಕಾ ಮತ್ತು ಬ್ರಿಟನ್ ಸರ್ಕಾರಗಳು ವ್ಯಾಪಕವಾದ ತನಿಖೆ ನಡೆಸಿದುವು.

ತನಿಖೆಯಿಂದ ಹೊರಬಿದ್ದ ಅಂಕಿ ಅಂಶಗಳೇ ಗಾಬರಿ ತರಿಸುವಂತಿವೆ. ಆ ಹಡಗಿನಲ್ಲಿ ಎರಡು ಸಾವಿರದ ಇನ್ನೂರು ಜನಕ್ಕೂ ಹೆಚ್ಚಿದ್ದ ಪ್ರಯಾಣಿಕರಲ್ಲಿ ಸಾವಿರದ ಐನೂರು ಜನ ಸತ್ತಿದ್ದರು. ಟೈಟಾನಿಕ್ ಲೈಫ್‌ಬೋಟುಗಳು ಕೇವಲ ಸಾವಿರದ ಇನ್ನೂರ ಜನರಿಗೆ ಮಾತ್ರ ಸಾಕಾಗುವಷ್ಟಿತ್ತು. ಆಗಿನ ಸಾರಿಗೆ ಕಾನೂನಿನಲ್ಲಿಯೇ ಅರ್ಧದಷ್ಟು ಜನಕ್ಕೆ ಸಾಕಾಗುವಷ್ಟು ಲೈಫ್‌ಬೋಟುಗಳಿದ್ದರೆ ಸಾಕೆಂದಿದ್ದುದರಿಂದ ಟೈಟಾನಿಕ್ ಯಾನ ಪ್ರಾರಂಭಿಸಲು ಅನುಮತಿ ಕೊಟ್ಟಿದ್ದರು. ಟೈಟಾನಿಕ್ ದುರಂತದ ನಂತರ ಕಾನೂನನ್ನೇ ಬದಲಿಸಿ ಹಡಗಿನಲ್ಲಿ ಪ್ರಯಾಣ ಮಾಡುವ ಅಷ್ಟು ಜನಕ್ಕೂ ಸಾಕಾಗುವಷ್ಟು ಲೈಫ್‌ಬೋಟ್ ಸೌಲಭ್ಯ ಒದಗಿಸಬೇಕೆಂದು ತಿದ್ದುಪಡಿ ತರಲಾಯ್ತು. ಇಷ್ಟಲ್ಲದೆ ಟೈಟಾನಿಕ್ ಅಪಘಾತದಲ್ಲಿ ಎದ್ದ ಗೊಂದಲದ ದೆಸೆಯಿಂದ ಇನ್ನೂ ಐನೂರು ಜನರನ್ನು ರಕ್ಷಿಸಲು ಸಾಧ್ಯವಿದ್ದರೂ ದೋಣಿ ಮುಳುಗಿಹೋದೀತೆಂಬ ಭಯದಿಂದ ಭರ್ತಿ ಜನ ಹತ್ತಿಸಿರಲಿಲ್ಲ ಎನ್ನುವುದೂ ತನಿಖೆಯಲ್ಲಿ ಬೆಳಕಿಗೆಬಂತು.

ಸಮುದ್ರದಲ್ಲಿ ಮುಳುಗಿ ಪ್ರಾಣ ಕಳೆದುಕೊಂಡ ಕೋಟ್ಯಾಧಿಪತಿಗಳೇನೋ ಪತ್ರಿಕೆಗಳ ಮುಖಪುಟದಲ್ಲಿ ಪ್ರಚಾರ ಪಡೆದುಕೊಂಡರು. ಆದರೆ ಆ ಹಡಗಿನ ಮೂರನೆ ದರ್ಜೆಯಲ್ಲಿ ಪ್ರಯಾಣ ಮಾಡುತ್ತಿದ್ದ ಹತಭಾಗ್ಯರ ಕತೆ ಏನಾಯ್ತೆಂದು ಯಾರೂ ಯೋಚಿಸಲು ಹೋಗಿರಲಿಲ್ಲ. ತನಿಖೆ ಕಾಲದಲ್ಲಿ ಹೊರಬಿದ್ದ ಕ್ರೂರ ಸಂಗತಿಗಳೆಂದರೆ ಅಪಘಾತದ ಸಮಯದಲ್ಲಿ ಮೂರನೆ ದರ್ಜೆ ಪ್ರಯಾಣಿಕರನ್ನು ಡೆಕ್ಕಿನ ಮೇಲೆ ನುಗ್ಗಿ ಗೊಂದಲ ಮಾಡಬಹುದೆಂಬ ಭಯದಿಂದ ಮೇಲಕ್ಕೆ ಬಿಡದೆ

ಇದಿದ್ದು. ಅಲ್ಲಿನ ಪ್ರಯಾಣಿಕರು ಮೇಲೇರಿ ಡೆಕ್ಕಿಗೆ ನುಗ್ಗದಿರಲೆಂದು ಕಬ್ಬಿಣದ ಬಾಗಿಲುಗಳನ್ನು ಇಳಿಸಲಾಗಿತ್ತು. ಮೊದಲನೇ ದರ್ಜೆ ಪ್ರಯಾಣಿಕರಲ್ಲಿ ಸಾಕಷ್ಟು ಜನ ದೋಣಿ ಹತ್ತಿದನಂತರವೇ ಅವರನ್ನು ಡಿಕ್ಕಿನ ಮೇಲೆ ಬಿಟ್ಟರು. ಇದರ ಪರಿಣಾಮವೆಂದರೆ ಮೊದಲನೆ ಮತ್ತು ಎರಡನೆ ದರ್ಜೆಯಲ್ಲಿ ಪ್ರಯಾಣ ಮಾಡುತ್ತಿದ್ದ ಮಕ್ಕಳಲ್ಲಿ ಒಬ್ಬನೇ ಒಬ್ಬನನ್ನು ಬಿಟ್ಟು ಮಿಕ್ಕವರೆಲ್ಲಾ ಬದುಕಿದರು. ಆದರೆ ಮೂರನೆ ದರ್ಜೆಯಲ್ಲಿ ಪ್ರಯಾಣ ಮಾಡುತ್ತಿದ್ದ ಮಕ್ಕಳಲ್ಲಿ ಮುಕ್ಕಾಲು ಮಕ್ಕಳು ಜಲ ಸಮಾಧಿಯಾಗಿ ಸತ್ತರು.

ಟೈಟಾನಿಕ್ ದುರಂತ ಯಾವ ನೌಕೆಯೂ, ಎಷ್ಟೇ ಅದ್ಭುತವಾಗಿ ಕಟ್ಟಿದ್ದರೂ, ಸಾಗರದ ಅದಮ್ಯ ಶಕ್ತಿಗಳೆದುರು ಸಂಪೂರ್ಣ ಸುರಕ್ಷಿತ ಎಂದು ಹೇಳುವಂತಿಲ್ಲ ಎಂದು ತೋರಿಸಿಕೊಟ್ಟಿತು. ಛಾರ್ಲ್ಸ್ ಲೈಟ್‌ಟೋಲರ್ ಆ ಹಡಗಿನ ಉಪಕ್ಯಾಪ್ಟನ್ ಆಗಿದ್ದವನು ಹಡಗಿನ ದುರಂತದಲ್ಲಿ ಬದುಕಿದ. ಆ ಅಗಾಧ ಹಡಗು ಮುಳುಗುವಾಗ ಎದ್ದ ಸಮುದ್ರದ ಸುಳಿ ಆತನನ್ನೂ ಒಳಗೆಳೆದುಬಿಟ್ಟಿತ್ತು. ಆದರೆ ಹಡಗಿನಿಂದ ಬಿಡುಗಡೆಯಾಗಿ ಮೇಲೇರುತ್ತಿದ್ದ ಗಾಳಿ ಗುಳ್ಳೆಯೊಂದು ಸುಳಿ ಒಳಗೆಳೆಯುತ್ತಿದ್ದ ವೇಗದಲ್ಲೇ ಲೈಟ್‌ಟೋಲರನ್ನು ಮತ್ತೆ ಸಮುದ್ರದ ಮೇಲೆ ತಂದು ಬಿಟ್ಟಿತು. ಆತ ಅಲ್ಲಿ ತಲೆಕೆಳಗಾಗಿ ಮಗುಸಿಕೊಂಡಿದ್ದ ತೆಪ್ಪವನ್ನು ಹಿಡಿದುಕೊಂಡು ಅದನ್ನು ಹೇಗೋ ಮಾಡಿ ನೆಟ್ಟಗೆ ಮಾಡಿದ್ದಲ್ಲದೆ ಸಮುದ್ರದಲ್ಲಿ ಮರಗುಟ್ಟುತ್ತಿದ್ದ ಇನ್ನು ಮೂವತ್ತು ಜನರನ್ನೂ ಯಮಸಾಹಸದಿಂದ ಮೇಲೆ ಹತ್ತಿಸಿಕೊಂಡು ರಕ್ಷಿಸಿದ್ದ. ಕಣ್ಣೆದುರೇ ಸಾವಿರಾರು ಜನ ಸಮುದ್ರದ ಕತ್ತಲಲ್ಲಿ ಸಾಯುತ್ತಿದುದನ್ನು ನೋಡಿದ್ದ ಈತ ತನಿಖಾ ಸಮಿತಿಯೆದುರು ಹೇಳಿಕೆ ಕೊಟ್ಟನಂತರ ಕೊನೆಯ ಮಾತಾಗಿ "ಟೈಟಾನಿಕ್ ದುರಂತದ ನಂತರ ನಾನಿನ್ನು ಸಮುದ್ರದಲ್ಲಿ ಯಾವುದೂ ಪೂರ್ಣ ಸುರಕ್ಷಿತ ಎಂದು ನಂಬುವುದೇ ಇಲ್ಲ" ಎಂದು ಹೇಳಿದ.

# 3. ಬೊರ್ರಾ ಗುಹೆಗಳು ಮತ್ತು ಅರಕು ಕಣಿವೆ

**– ವೆಂಕಟೇಶ ಮಾಚಕನೂರ**

ನಾವು ಅರಕು ತಲುಪುತ್ತಲೇ ಅಲ್ಲಿ ಆಂಧ್ರದ ಎರಡು ಪ್ರವಾಸಿ ನಿಗಮಗಳ ಬಸ್ಸು ನಮಗಾಗಿ ಕಾದಿದ್ದವು. ದೇಶದ ನಾನಾ ಭಾಗಗಳಿಂದ ನಮ್ಮಂತೆಯೇ ರೈಲಿನಲ್ಲಿ ಬಂದಿದ್ದ ಅನೇಕ ಸಹಯಾತ್ರಿಕರಿದ್ದರು. ಅರಕು ಕಣಿವೆ ಪೂರ್ವದ ಘಟ್ಟಗಳಲ್ಲಿಯೇ ಸುಂದರ ಪರಿಸರಕ್ಕಾಗಿ ಹೆಸರುವಾಸಿ. ಸುತ್ತಲೂ ೫೦೦೦ ಅಡಿ ಎತ್ತರದವರೆಗೆ ಚಾಚಿರುವ ಬೆಟ್ಟಗಳು, ವಿಭಿನ್ನ ವೃಕ್ಷರಾಶಿ ನಮ್ಮ ಗಮನ ಸೆಳೆಯುತ್ತವೆ. ಅರಕು ಸ್ವಲ್ಪ ಸಮತಟ್ಟಾದ ಪ್ರದೇಶ. ಸುತ್ತಲೂ ಭತ್ತದ ಗದ್ದೆಗಳಿವೆ. ಏಳೆಂದು ಆದಿವಾಸಿ ಜನಾಂಗಗಳು ಈ ಪ್ರದೇಶದಲ್ಲಿ ವಾಸವಾಗಿವೆ ಎಂದು ಹೇಳಲಾಗುತ್ತದೆ. ವಾರ್ಷಿಕ ಸುಮಾರು ೧೭೦೦ ಮಿ.ಮೀ. ಮಳೆ ಬೀಳುವ ಈ ಪ್ರದೇಶ, ಸುತ್ತಲೂ ಇರುವ ಬಾಕ್ಸೈಟ್ ಅದಿರಿನಿಂದಾಗಿಯೂ ಪ್ರಸಿದ್ಧಿ ಹೊಂದಿದೆ. ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಕಾಫಿ ತೋಟಗಳೂ ಇವೆ. ಓಡಿಶಾ ರಾಜ್ಯದ ಗಡಿಗೆ ಹೊಂದಿರುವ ಈ ಪ್ರದೇಶ ವರ್ಷದುದ್ದಕ್ಕೂ ಪ್ರವಾಸಿಗರನ್ನೂ ಸೆಳೆಯುತ್ತದೆ. ಗಿರಿಧಾಮವಾಗಿ, ಹಲವಾರು ನೈಸರ್ಗಿಕ ಚೆಲುವಿನ ತಾಣಗಳಿಗಾಗಿ, ಜಲಪಾತಗಳಿಗಾಗಿ ಅರಕು ಪ್ರಸಿದ್ಧ.

– ಲೇಖಕ

ಆದಿ ಮಾನವನ ಪ್ರಥಮ ವಾಸಸ್ಥಳಗಳಾಗಿ ಗುಹೆಗಳು ಮೊದಲಿಂದಲೂ ಆಕರ್ಷಣೆಯ ಕೇಂದ್ರಗಳಾಗಿವೆ. ನೈಸರ್ಗಿಕ ಗುಹೆಗಳು ಆದಿಮಾನವನ ಮೊದಲ ವಾಸಸ್ಥಾನಗಳು. ದೇಶಾದ್ಯಂತ ಸುಮಾರು ಎಲ್ಲ ರಾಜ್ಯಗಳಲ್ಲಿ ಹರಡಿಕೊಂಡಿರುವ ನೈಸರ್ಗಿಕ ಗುಹೆಗಳಲ್ಲಿ, ಪ್ರಾಚ್ಯವಸ್ತುತಜ್ಞರು ನಡೆಸಿದ ಸಂಶೋಧನೆ, ಉತ್ಖನನಗಳ ಪ್ರಕಾರ, ಆದಿಮಾನವ ೨೦ ರಿಂದ ೫೦ ಸಾವಿರ ವರ್ಷಗಳಷ್ಟು ಹಿಂದೆಯೇ ಅವುಗಳಲ್ಲಿ ನೆಲೆ ಕಂಡುಕೊಂಡಿದ್ದು ಕಂಡುಬರುತ್ತದೆ. ಅವನು ಬಳಸಿದ ಆಯುಧಗಳು, ದೈನಂದಿನ ಪಾತ್ರೆ ಪರಿಕರಗಳು, ಅವನು ಗುಹೆಯ ಗೋಡೆಗಳ ಮೇಲೆ ಬಿಡಿಸಿದ ಹಲವಾರು ಬಗೆಯ ಚಿತ್ತಾರಗಳಿಂದ ಮಾನವನ ನೆಲೆಗಳನ್ನು ಮತ್ತು ನೆಲೆಸಿದ್ದ ಕಾಲಘಟ್ಟವನ್ನು ಅಳೆಯಬಹುದಾಗಿದೆ. ಜಗತ್ತಿನಾದ್ಯಂತ ಪ್ರಾಚ್ಯವಸ್ತು ತಜ್ಞರು ಇಂತಹ ಅನೇಕ ಗುಹಾವಾಸದ ಮಾನವ ನೆಲೆಗಳನ್ನು ಗುರುತಿಸಿದ್ದಾರೆ.

ಇದು ನೈಸರ್ಗಿಕ ಗುಹೆಗಳ ಮಾತಾಯಿತು. ಮಾನವ ನಿರ್ಮಿತ ಗುಹೆಗಳು ಅಥವಾ ಗುಹಾಂತರ ದೇವಾಲಯಗಳ ರಚನೆಗಳಿಗೆ ಬಂದರೆ, ಸಾವಿರಾರು ವರ್ಷಗಳ ಹಿಂದಿನಿಂದಲೆ ಮಾನವ ಅಖಂಡ ಶಿಲಾಬೆಟ್ಟಗಳಲ್ಲಿ ಗುಹೆಗಳನ್ನು ಕೊರೆದು ತನ್ನ ಕರ್ತೃತ್ವಶಕ್ತಿ, ಸಾಮರ್ಥ್ಯ, ಕೌಶಲ್ಯವನ್ನು ಮೆರೆಯುತ್ತ ಬಂದಿದ್ದಾನೆ. ನಮ್ಮ ಬದಾಮಿ, ಐಹೊಳೆ, ನೆರೆಯ ಮಹಾರಾಷ್ಟ್ರದ ಎಲ್ಲೋರ, ಅಜಂತಾ, ಕನ್ಹೇರಿ, ಕಾರ್ಲ, ಎಲಿಫಂಟಾ ಗುಹೆಗಳು ನಮ್ಮ ಪೂರ್ವಜರ ಸೃಜನಶೀಲತೆ, ಅವರ ಕಲಾ ನೈಪುಣ್ಯಕ್ಕೆ ಹಿಡಿದ ಕನ್ನಡಿಗಳಾಗಿವೆ. ಈ ರೀತಿಯ ಗುಹಾ ದೇವಾಲಯಗಳು ದೇಶದ ಎಲ್ಲಾ ರಾಜ್ಯಗಳಲ್ಲೂ ಇವೆ. ಶಿಲಾಬೆಟ್ಟಗಳನ್ನು ಕಲೆಯಾಗಿ ಅರಳಿಸಿದ ನಮ್ಮ ಪೂರ್ವಜನ ಶಕ್ತಿ, ಶ್ರಮದ ದ್ಯೋತಕವಾಗಿ, ಅವರ ಧಾರ್ಮಿಕ, ಪಾರಮಾರ್ಥಿಕ ಸಾಧನೆಯ ಮೆಟ್ಟಿಲುಗಳಾಗಿ, ಮತ್ತು ಆಯಾ ಕಾಲಘಟ್ಟದ ಉತ್ತುಂಗ ಕಲಾ ಅಭಿವ್ಯಕ್ತಿಗಳಾಗಿ ಆ ಗುಹಾ ದೇವಾಲಯಗಳು ಇಂದಿಗೂ ನಮ್ಮನ್ನು ಬೆರಗುಗೊಳಿಸುತ್ತವೆ. ಅಜಂತಾದ ಗುಹಾ ದೇವಾಲಯಗಳು ಮಾನವನ ದೈತ್ಯ ಶಕ್ತಿಯ ಪ್ರತೀಕಗಳಾಗಿ ಕಾಲಕ್ಕೆ ಎದುರಾಗಿ ನಿಂತಿವೆ.

ನಾನು ಈಗ ಹೇಳಹೊರಟಿರುವುದು ಆಂಧ್ರದ ಉತ್ತರ ತುದಿಯಲ್ಲಿ, ಓಡಿಶಾ ರಾಜ್ಯಕ್ಕೆ ಹೊಂದಿಕೊಂಡಿರುವ ಪೂರ್ವದ ಘಟ್ಟದ ಸಾಲುಗಳಲ್ಲಿ, ವಿಶಾಖಪಟ್ಟಣದಿಂದ ೭೦ ಕಿ.ಮಿ. ದೂರದಲ್ಲಿ ಇರುವ ಬೊರ್ರಾ ಗುಹೆಗಳ ಬಗ್ಗೆ. ನಮ್ಮ ಪಶ್ಚಿಮ ಘಟ್ಟಗಳಂತೆ, ಪೂರ್ವದ ಕರಾವಳಿಗುಂಟವೂ ಚಾಚಿರುವ ಪೂರ್ವದ ಘಟ್ಟಗಳು ಎತ್ತರದಲ್ಲಿ, ಜೀವವೈವಿಧ್ಯತೆಯಲ್ಲಿ ಪಶ್ಚಿಮ ಘಟ್ಟಗಳಷ್ಟು ಸಿರಿತನದಿಂದ ಕೂಡಿರದಿದ್ದರೂ ಸಾಕಷ್ಟು ವೈವಿಧ್ಯತೆಯಿಂದ ಕೂಡಿವೆ. ಉತ್ತರದ ಬಂಗಾಲದಿಂದ ದಕ್ಷಿಣದ ತಮಿಳುನಾಡಿನ ನೀಲಗಿರಿ ಬೆಟ್ಟಗಳವರೆಗೆ ಈ ಪೂರ್ವದ ಘಟ್ಟದ ಸಾಲುಗಳು ಹರಡಿವೆ. ಗೋದಾವರಿ, ಮಹಾನದಿ, ಕೃಷ್ಣಾ, ಕಾವೇರಿ ಮುಂತಾದ ನದಿಗಳ ಮುಖಜ ಪ್ರದೇಶಗಳು ಅಲ್ಲಲ್ಲಿ ಈ ಘಟ್ಟದ ಸಾಲುಗಳ ಅಖಂಡತೆಯನ್ನು ಮುಕ್ಕಾಗಿಸಿವೆ. ಆದರೆ ಈ ನದಿಗಳ ಫಲವತ್ತಾದ ಮುಖಜ ಪ್ರದೇಶ, ಭೂಪ್ರದೇಶಗಳ ಪರಿಸರ ಮತ್ತೊಂದು ಬಗೆಯದು. ಅವು ಜನನಿಬಿಡ ಪ್ರದೇಶಗಳಾಗಿ, ಆಯಾ ರಾಜ್ಯಗಳ ಧಾನ್ಯದ ಕಣಜಗಳಾಗಿಯೂ ಗುರುತಿಸಲ್ಪಡುತ್ತವೆ. ಸಮುದ್ರ ಮಟ್ಟದಿಂದ ಪಶ್ಚಿಮಕ್ಕೆ ಹೋದಂತೆ ಈ ಬೆಟ್ಟಗಳು ೭೦ ಅಡಿಯಿಂದ ೫೫೦೦ ಅಡಿಗಳಷ್ಟು ಎತ್ತರದವರೆಗೆ ಆಕಾಶಕ್ಕೆ ಚಾಚಿ ನಿಂತಿವೆ. ಓಡಿಶಾದ ದೇವಮಾಲಿ, ಪೂರ್ವದ ಘಟ್ಟಗಳಲ್ಲಿಯೇ, ಅತಿ ಎತ್ತರದ (೧೬೭೨ ಮೀ, ೫೪೮೬ ಅಡಿ) ಪರ್ವತ ಪ್ರದೇಶವಾಗಿದೆ. ಪಶ್ಚಿಮದ ಘಟ್ಟ ಪ್ರದೇಶದಲ್ಲಿ ಕೇರಳದ ಅನಮುಡಿ ಘಟ್ಟ ೮೮೪೨ ಅಡಿ ಎತ್ತರದ ಶಿಖರ ಪ್ರದೇಶವಾಗಿದ್ದರೆ, ಕರ್ನಾಟಕದ ಮುಳ್ಳಯ್ಯನಗಿರಿ ೬೩೩೦ ಅಡಿ ಎತ್ತರದಲ್ಲಿದೆ. ಪೂರ್ವದ ಬಂಗಾಲ ಉಪಸಾಗರದಗುಂಟ ಬಂಗಾಲದಿಂದ ತಮಿಳುನಾಡಿನ ದಕ್ಷಿಣ ತುದಿಯವರೆಗೆ ಚಾಚಿರುವ ಈ ಬೆಟ್ಟದ ಸಾಲುಗಳ ಭಾಗವಾಗಿಯೇ ಆಂಧ್ರದ ತಿರುಮಲಬೆಟ್ಟ, ಕರ್ನಾಟಕದ ಮಲೆ ಮಹದೇಶ್ವರ, ಬಿಳಿಗಿರಿ ರಂಗನ ಬೆಟ್ಟಗಳು, ತಮಿಳುನಾಡಿನ ಎರ್ಕಾಡು, ಸಿರುಮಲೈ ಬೆಟ್ಟಗಳು ಇವೆ. ಪಶ್ಚಿಮ ಘಟ್ಟಗಳಂತೆಯೇ ಪೂರ್ವದ ಘಟ್ಟಗಳು ಅನೇಕ ನದಿಗಳ ಉಗಮಸ್ಥಾನಗಳಾಗಿ, ಜೀವವೈವಿಧ್ಯದ ತಾಣಗಳಾಗಿ, ಅನೇಕ ನೈಸರ್ಗಿಕ ಜಲಮೂಲಗಳ, ಜಲಪಾತಗಳ, ಗಿರಿಧಾಮಗಳ ಆಕರ್ಷಣೆಯ ಕೇಂದ್ರಗಳಾಗಿ ಉಳಿದಿವೆ. ಅನೇಕ ದೇವಾಲಯಗಳು ಪೂರ್ವದ ಕರಾವಳಿಯುದ್ದಕ್ಕೂ ಹರಡಿನಿಂತಿವೆ. ಆದರೆ ಪಶ್ಚಿಮದ ಕರಾವಳಿ ತೀರಕ್ಕಿಂತ ಪೂರ್ವದ ಕರಾವಳಿ ತೀರವು ಆಗಾಗ ನೈಸರ್ಗಿಕ ಪ್ರಕೋಪಗಳಿಗೆ ಈಡಾಗುವುದು ಹೆಚ್ಚು. ಪೂರ್ವದ ಬೆಟ್ಟಗಳು, ಪಶ್ಚಿಮ ಘಟ್ಟಗಳಷ್ಟು ಎತ್ತರವಾಗಿರದೆ, ಪೂರ್ವ ಕರಾವಳಿಯ ಬಹಳಷ್ಟು ಭಾಗ ವಿಶಾಲ ಬಯಲಭೂಮಿ ಆಗಿದೆ. ಕೃಷ್ಣಾ, ಗೋದಾವರಿ, ಮಹಾನದಿಯಂತಹ ದೊಡ್ಡ ನದಿಗಳ ಹರಿವಿನ ಮುಖಜ ಪ್ರದೇಶ ಆಗಿದೆ. ಹೀಗಾಗಿ ಬಂಗಾಲ ಉಪಸಾಗರದಲ್ಲಿ ಆಗಾಗ ಏಳುವ ಚಂಡಮಾರುಗಳಿಂದ, ಬೀಸುವ ವೇಗದ ಬಿರುಗಾಳಿ, ಮಳೆಯಿಂದಾಗಿ ಪೂರ್ವದ ನೈಸರ್ಗಿಕ ವಿಕೋಪಗಳಿಗೆ ಒಳಗಾಗುತ್ತಲೇ ಇರುತ್ತದೆ.

ಬೊರ್ರಾ ಗುಹೆಗಳು ಮತ್ತು ಅರಕು ಕಣಿವೆ (Araku Valley) ಯನ್ನು ನೋಡಲೆಂದೇ ನಾವು ಹಿಂದಿನ ದಿನ ವಿಶಾಖಪಟ್ಟಣಕ್ಕೆ ಹೋಗಿ ತಂಗಿದ್ದೆವು. ಲೋಹಿಯಾ ಪ್ರಕಾಶನದ ಚನ್ನಬಸವಣ್ಣ, ಸ್ನೇಹಿತರಾದ ತಿಮ್ಮಾಪೂರ, ದೇವಲಾಪೂರ ಜತೆಯಲ್ಲಿದ್ದರು. ಚನ್ನಬಸವಣ್ಣ ಈ ಪ್ರದೇಶವನ್ನು ಮೊದಲೇ ನೋಡಿದವರಾಗಿದ್ದರಿಂದ ಅವರು ನಮ್ಮ ಲೀಡರ್ ಆಗಿದ್ದರು.

ವಿಶಾಖಪಟ್ಟಣದಿಂದ ಆಂಧ್ರಪ್ರದೇಶ ಪ್ರವಾಸಿ ನಿಗಮವು ಪ್ರತಿದಿನ ರೈಲು ಮತ್ತು ಬಸ್ ಮೂಲಕ ಅರಕು ಕಣಿವೆ ಮತ್ತು ಬೊರ್ರಾ ಗುಹೆಗಳಿಗೆ ಪ್ರವಾಸ ಸೌಲಭ್ಯವನ್ನು ಏರ್ಪಡಿಸುತ್ತದೆ. ಇದಕ್ಕೆಲ್ಲ ಮುಂಚಿತವಾಗಿಯೇ ಕಾಯ್ದಿರಿಸಬೇಕಾಗುತ್ತದೆ. ವಿಶಾಖಪಟ್ಟಣದಿಂದ ಛತ್ತೀಸಗಡದ ಕಿರಂದೂಲಗೆ ಪ್ರತಿದಿನ ಹೋಗುವ ಒಂದೇ ರೈಲಿನಲ್ಲಿ, ಒಂದು ಬೋಗಿಯನ್ನು ಪ್ರವಾಸಿ ನಿಗಮವು ಖಾಯಂ ಆಗಿ ಕಾಯ್ದಿರಿಸಿ, ಅರಕು ಕಣಿವೆಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗುತ್ತದೆ. ಬೆಳಗ್ಗೆ ಆರುವರೆ ಗಂಟೆಗೆ ಹೊರಡುವ ಆ ರೈಲು ೧೧೪ ಕಿ.ಮೀ ದೂರ ಇರುವ ಅರಕು ಕಣಿವೆಯನ್ನು ೧೧ ಗಂಟೆಗೆ ತಲುಪುತ್ತದೆ. ಆ ನಾಲ್ಕೈದು ಗಂಟೆಗಳ ರೈಲು ಪ್ರಯಾಣ ಅವಿಸ್ಮರಣೀಯ. ಸಮುದ್ರ ಮಟ್ಟದಿಂದ ೧೫–೨೦ ಅಡಿ ಎತ್ತರ ಇರುವ ವಿಶಾಖಪಟ್ಟಣ ನಗರದಿಂದ ಸುಮಾರು ೩೦೦೦ ಅಡಿ ಎತ್ತರದಲ್ಲಿರುವ ಅರಕು ಕಣಿವೆಗೆ ಏರುಮುಖವಾಗಿ ಚಲಿಸುವ ರೈಲು ಪೂರ್ವದ ಘಟ್ಟಗಳನ್ನು ಅನಾವರಣಗೊಳಿಸುತ್ತ ಹೋಗುತ್ತದೆ.

ವಿಶಾಖಪಟ್ಟಣದಿಂದ ಛತ್ತೀಸಗಡದ ರಾಜ್ಯದ ಕಿರಂದೂಲಿನವರೆಗಿನ ೪೭೯ ಕಿ.ಮೀಗಳ ಈ ರೈಲು ಮಾರ್ಗ ನಿರ್ಮಾಣ ತಾಂತ್ರಿಕ ಸಾಧನೆಯ ದೊಡ್ಡ ಕಸರತ್ತೂ ಕೂಡ ಹೌದು. ೫೮ ಸುರಂಗಮಾರ್ಗಗಳು. ೪೮ ಚಿಕ್ಕ ದೊಡ್ಡ ಸೇತುವೆಗಳನ್ನು ಒಳಗೊಂಡ ಈ ಮಾರ್ಗ ಮೇಲ್ಮುಖವಾಗಿ ಬಳಕುತ್ತ ಸಾಗುತ್ತದೆ. ಒಮ್ಮೆ ಬೆಟ್ಟದ ಈ ಬದಿಯಿಂದ, ಒಮ್ಮೆ

ಆ ಬೆಟ್ಟದ ಓರೆಯಲ್ಲಿ, ಹಳ್ಳಕೊಳ್ಳಗಳನ್ನು ದಾಟಿ, ಒಂದಾದನಂತರ ಮತ್ತೊಂದು ಸುರಂಗ ಮಾರ್ಗಗಳನ್ನು ಹಾಯ್ದು, ಪ್ರಪಾತಗಳ ಮೇಲೆ ತಿರುವುಗಳಲ್ಲಿ ಬಳಕುತ್ತ ಏದುಸಿರುಬಿಡುತ್ತ ಸಾಗುತ್ತದೆ. ಪ್ರಯಾಣಿಕರು ಆ ಕಣಿವೆ, ಆ ಬೆಟ್ಟಗಳು, ಜಲರಾಶಿ, ಸಣ್ಣದೊಡ್ಡ ಜಲಪಾತಗಳನ್ನು ನೋಡುತ್ತ ಸುತ್ತಲೂ ರಾಚುವ ಹಸಿರನ್ನು, ಅಲ್ಲಲ್ಲಿ ಕಂಡು ಬರುವ ಭತ್ತದ ಗದ್ದೆ, ಗುಡಿಸಲುಗಳನ್ನು ಕಣ್ಣಿಗೆ ತುಂಬಿಕೊಳ್ಳುತ್ತ ನಿಧಾನವಾಗಿ ಮೇಲಕ್ಕೆ ಮೇಲಕ್ಕೆ ಸಾಗುತ್ತಾರೆ. ಸುರಂಗ ಮಾರ್ಗಗಳಲ್ಲಿ ಪರ್ವತವನ್ನು ಬಗೆಯುತ್ತ ರೈಲು ಮೆಲ್ಲನೆ ಮೇಲಕೆ ಮೇಲಕೆ ಸಾಗುತ್ತಿರುತ್ತದೆ. ಈ ಮಧ್ಯ ಅಲ್ಲಲ್ಲಿ ಇರುವ ರೈಲು ನಿಲ್ದಾಣಗಳಲ್ಲಿ ಹತ್ತಿಕೊಳ್ಳುವ ಸ್ಥಳೀಯ ಆದಿವಾಸಿ ಜನಾಂಗದವರು ಬೆಟ್ಟಗುಡ್ಡಗಳಲ್ಲಿ ದೊರೆಯುವ ನಾನಾ ಬಗೆಯ ಹಣ್ಣು ಹಂಪಲಗಳನ್ನು ಹೊತ್ತು ಬರುತ್ತಾರೆ. ದರ ತುಂಬ ಅಗ್ಗ. ಸುಂದರ ಪರಿಸರದ ರೈಲುಯಾನದೊಂದಿಗೆ ಸ್ಥಳೀಯ ಹಣ್ಣುಗಳ ಸವಿಯನ್ನು ಸವಿಯುತ್ತ ಪ್ರಯಾಣಿಸಬಹುದು.

ಅರವತ್ತರ ದಶಕದಲ್ಲಿ ಛತ್ತೀಸಗಡ ಭಾಗದಿಂದ ವಿಶಾಖಪಟ್ಟಣದ ಉಕ್ಕು ಸ್ಥಾವರಕ್ಕೆ ಕಬ್ಬಿಣ ಅದಿರು ಸಾಗಿಸಲು ಹಾಕಲಾದ ಈ ರೈಲು ಮಾರ್ಗ, ಆಂಧ್ರ, ಓಡಿಶಾ, ಛತ್ತೀಸಗಡ ರಾಜ್ಯಗಳ ಹಿಂದುಳಿದ ಗುಡ್ಡಗಾಡು ಪ್ರದೇಶಗಳ ಜೀವನಾಡಿಯೂ ಆಗಿದೆ. ಪೂರ್ವದ ಘಟ್ಟಗಳಲ್ಲಿಯೇ ಜೀವವೈವಿಧ್ಯ, ಖನಿಜಸಂಪತ್ತಿನ ಅಗರವಾಗಿರುವ ಈ ಪ್ರದೇಶ ಅನೇಕ ಆದಿವಾಸಿ ಜನಾಂಗಗಳ ತವರಾಗಿದೆ. ಅಲ್ಲಲ್ಲಿ ಸಣ್ಣ ಸಣ್ಣ ಕೃಷಿಗದ್ದೆಗಳನ್ನು ಮಾಡಿಕೊಂಡು ತಲೆತಲಾಂತರದಿಂದ ವಾಸವಾಗಿರುವ ಈ ಜನಾಂಗ ಅರಣ್ಯ ಉತ್ಪನ್ನಗಳ ಮೇಲೆ ತಮ್ಮ ಜೀವನ ಸಾಗಿಸುತ್ತಾರೆ. ಸಾಕಷ್ಟು ಎತ್ತರವಾದ ಕಾಡನ್ನು ಹೊಂದಿರುವ ಈ ಪ್ರದೇಶ ಹಲವಾರು ಪ್ರಭೇದದ ಪ್ರಾಣಿ, ಪಕ್ಷಿಗಳ ತಾಣವೂ ಹೌದು. ಮಳೆಗಾಲದಲ್ಲಿ ಹೋದರೆ ರೈಲು ದಾರಿಯಲ್ಲಿಯೇ ಅನೇಕ ಸುಂದರ ಜಲಪಾತಗಳನ್ನು ನೋಡುತ್ತ ಸಾಗಬಹುದು. ಕಡಿದಾದ ಬೆಟ್ಟಗಳನ್ನು ಭೇದಿಸುತ್ತ ಸಾಗುವ ಸುರಂಗಮಾರ್ಗಗಳನ್ನು ದಾಟಿ ಒಂದೊಂದು ನಿಲ್ದಾಣಕ್ಕೆ ಹೋಗಿ ಉಸಿರು ತೆಗೆದುಕೊಳ್ಳುವ ರೈಲು ನಿಂತಾಗ, ನಾವು ಏರಿ ಬಂದ ಎತ್ತರವನ್ನು ಕೆಳಗೆ ಅಲ್ಲೆಲ್ಲೋ ಕಾಣುವ ಕೊಳ್ಳವನ್ನು ನೋಡುತ್ತ ಅಂದಾಜಿಸಬಹುದು. ಈ ರೈಲುಮಾರ್ಗದಲ್ಲಿ ೯೯೬ ಮೀ. ಎತ್ತರದಲ್ಲಿರುವ ಶಿಮಿಲಿಗುಡ ರೈಲು ನಿಲ್ದಾಣವು ಅತಿ ಎತ್ತರದಲ್ಲಿರುವ ಬ್ರಾಡಗೇಜ್ ರೈಲು ನಿಲ್ದಾಣವಂತೆ. ಘಟ್ಟ ಪ್ರದೇಶದಲ್ಲಿ ಗಂಟೆಗೆ ಕೇವಲ ೩೦ ಕಿ.ಮೀ. ವೇಗದಲ್ಲಿ ಸಾಗುವ ರೈಲು ನಿಸರ್ಗ ಸವಿಯನ್ನು ನಿಧಾನವಾಗಿ ಉಣಬಡಿಸುತ್ತ ೩೦೦೦ ಅಡಿ ಎತ್ತರದಲ್ಲಿರುವ ಅರಕು ಕಣಿವೆ ನಿಲ್ದಾಣವನ್ನು ತಲುಪಿದಾಗ ಮಹತ್ವದ ಘಟ್ಟ ಮುಗಿದಂತೆ.

ಸ್ವಲ್ಪ ದೊಡ್ಡ ಊರಾದ ಅರಕುವಿನಲ್ಲಿ, ಹೊತ್ತುತಂದ ಪ್ರವಾಸಿಗರನ್ನು, ಉದ್ಯೋಗಸ್ಥರನ್ನು ಇಳಿಸಿ, ರೈಲು ಬಹಳಷ್ಟು ಬರಿದಾಗುತ್ತದೆ. ಅಲ್ಲಿಂದ ಹೆಚ್ಚಾಗಿ ಆದಿವಾಸಿಗಳನ್ನು ಅವರ ಸಾಮಾನು ಸರಂಜಾಮು, ಅರಣ್ಯ ಉತ್ಪನ್ನಗಳು, ಕಟ್ಟಿಗೆ ಹೊರೆಗಳು, ಮೂಟೆಗಳನ್ನು ಹೊತ್ತು ಸಾಗುತ್ತದೆ. ಮುಂದೆ ಓಡಿಶಾದ ಜೇಪೂರ, ಕೊರಾಪುಟ, ಜಗದಾಳಪುರ ಮೂಲಕ ತನ್ನ ಕೊನೆಯ ನಿಲ್ದಾಣ ಕಿರಂದೂಲ ಸೇರುವಾಗ ಒಟ್ಟು ಒಂಬತ್ತು ಗಂಟೆಯ ಯಾನವನ್ನು ಅದು ಮುಗಿಸುತ್ತದೆ. ಒಂದು ರೈಲು ಪ್ರಯಾಣದ ಅನನ್ಯ ಅನುಭವ ಈ ರೈಲಿನ ಮೂಲಕ ಆಗುತ್ತದೆ.

ನಾವು ಅರಕು ತಲುಪುತ್ತಲೇ ಅಲ್ಲಿ ಆಂಧ್ರದ ಎರಡು ಪ್ರವಾಸಿ ನಿಗಮಗಳ ಬಸ್ಸು ನಮಗಾಗಿ ಕಾದಿದ್ದವು. ದೇಶದ ನಾನಾ ಭಾಗಗಳಿಂದ ನಮ್ಮಂತೆಯೇ ರೈಲಿನಲ್ಲಿ ಬಂದಿದ್ದ ಅನೇಕ ಸಹಯಾತ್ರಿಕರಿದ್ದರು. ಅರಕು ಕಣಿವೆ ಪೂರ್ವದ ಘಟ್ಟಗಳಲ್ಲಿಯೇ ಸುಂದರ ಪರಿಸರಕ್ಕಾಗಿ ಹೆಸರುವಾಸಿ. ಸುತ್ತಲೂ ೫೦೦೦ ಅಡಿ ಎತ್ತರದವರೆಗೆ ಚಾಚಿರುವ ಬೆಟ್ಟಗಳು, ವಿಭಿನ್ನ ವೃಕ್ಷರಾಶಿ ನಮ್ಮ ಗಮನ ಸೆಳೆಯುತ್ತವೆ. ಅರಕು ಸ್ವಲ್ಪ ಸಮತಟ್ಟಾದ ಪ್ರದೇಶ, ಸುತ್ತಲೂ ಭತ್ತದ ಗದ್ದೆಗಳಿವೆ. ಏಳೆಂಟು ಆದಿವಾಸಿ ಜನಾಂಗಗಳು ಈ ಪ್ರದೇಶದಲ್ಲಿ ವಾಸವಾಗಿವೆ ಎಂದು ಹೇಳಲಾಗುತ್ತದೆ. ವಾರ್ಷಿಕ ಸುಮಾರು ೧೭೦೦ ಮಿ.ಮೀ. ಮಳೆ ಬೀಳುವ ಈ ಪ್ರದೇಶ, ಸುತ್ತಲೂ ಇರುವ ಬಾಕ್ಸೈಟ್ ಅದಿರಿನಿಂದಾಗಿಯೂ ಪ್ರಸಿದ್ಧಿ ಹೊಂದಿದೆ. ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಕಾಫಿ ತೋಟಗಳೂ ಇವೆ. ಓಡಿಶಾ ರಾಜ್ಯದ ಗಡಿಗೆ ಹೊಂದಿರುವ ಈ ಪ್ರದೇಶ ವರ್ಷದುದ್ದಕ್ಕೂ ಪ್ರವಾಸಿಗರನ್ನೂ ಸೆಳೆಯುತ್ತದೆ. ಗಿರಿಧಾಮವಾಗಿ, ಹಲವಾರು ನೈಸರ್ಗಿಕ ಚೆಲುವಿನ ತಾಣಗಳಿಗಾಗಿ, ಜಲಪಾತಗಳಿಗಾಗಿ ಅರಕು ಪ್ರಸಿದ್ಧ.

ಪ್ರವಾಸ ನಿಗಮ ಬಸ್‌ಗಳಲ್ಲಿ ಪ್ರವಾಸಿಗರಿಗೆ ಸ್ಥಳೀಯವಾಗಿ ಕೆಲವು ಸ್ಥಾನಗಳನ್ನು ತೋರಿಸುವ ಏರ್ಪಾಡುಮಾಡಿದೆ. ಅದರಲ್ಲಿ ಪ್ರವಾಸೋದ್ಯಮ ಇಲಾಖೆ ಅಭಿವೃದ್ಧಿಪಡಿಸಿರುವ ಪುಷ್ಪೋದ್ಯಾನ ಒಮ್ಮು. ನಾನಾ ಬಗೆಯ ಹೂದೋಟ ಹಾಗೂ

ಕೆಲವು ಸ್ಥಳೀಯ ಪ್ರಭೇದದ ಹೂ, ವೃಕ್ಷರಾಶಿಯನ್ನು ಇಲ್ಲಿ ಕಾಣಬಹುದು. ಬೇರೆ ಗಿರಿಧಾಮಗಳಲ್ಲಿನ ಪ್ರಸಿದ್ಧ ಹೂದೋಟಗಳನ್ನು ನೋಡಿದವರಿಗೆ ಅರಕು ಹೂದೋಟ ಗಮನ ಸೆಳೆಯುತ್ತದೆ.

ಅರಕು ಕಣಿವೆಯ ಮುಖ್ಯ ಆಕರ್ಷಣೆ ಇಲ್ಲಿನ ಆದಿವಾಸಿ ವಸ್ತುಸಂಗ್ರಹಾಲಯ (Tribal Museum). ಪೂರ್ವ ಘಟ್ಟದ ಪರಿಸರದಲ್ಲಿ ಆದಿ ಕಾಲದಿಂದಲೂ ನೆಲೆಗೊಂಡಿರುವ ವಿವಿಧ ಆದಿವಾಸಿ ಜನಾಂಗಗಳ ರೀತಿ, ನೀತಿ, ಜೀವನಕಲೆಯನ್ನು ಬಿಂಬಿಸುವ ಈ ವಸ್ತುಸಂಗ್ರಹಾಲಯ ಸರಕಾರಿ ಸ್ವಾಮ್ಯದ್ದು, ಸಾಕಷ್ಟು ವಿಶಾಲವಾದ ಪರಿಸರದಲ್ಲಿ ನೆಲೆಗೊಂಡಿರುವ ಈ ವಸ್ತುಸಂಗ್ರಹಾಲಯ ಆದಿವಾಸಿಗಳ ಪಾರಂಪರಿಕ ಸಹಜ ಜೀವನವನ್ನು ಬಿಂಬಿಸುತ್ತದೆ. ಮಣ್ಣಿನ ಗೋಡೆಗಳು, ತಡಿಕೆಗಳಿಂದ ರಚಿತವಾಗಿರುವ ಹಲವಾರು ಮನೆಗಳು (ಕಟ್ಟಡ) ಆದಿವಾಸಿ ಜನಾಂಗದ ಬೇರೆ ಬೇರೆ ಜೀವನ ವಿಧಾನವನ್ನು ಅನಾವರಣಗೊಳಿಸುವತ್ತ ಹೋಗುತ್ತವೆ. ಅವರ ಕೃಷಿಚಟುವಟಿಕೆಗಳು, ಅದರಲ್ಲಿ ಬಳಕೆಯಾಗುವ ಉಪಕರಣಗಳು, ದೈನಂದಿನ ಬಳಕೆಯಲ್ಲಿರುವ ಪಾತ್ರೆ ಪಗಡಗಳು, ಧಾನ್ಯ ಸಂಗ್ರಹಿಸುವ ವಿಧಾನ, ಬೇಟೆಯ ವಿಧಾನಗಳು, ಅಡುಗೆಮನೆಯ ಮಣ್ಣಿನ ಪಾತ್ರೆಗಳು, ಪಶುಗಳಿಗೆ ಸಂಬಂಧಿಸಿದ ಸಾಮಾನು ಸರಂಜಾಮುಗಳು ಗಮನ ಸೆಳೆಯುತ್ತವೆ. ಆದಿವಾಸಿಗಳ ಧಾರ್ಮಿಕ ನಂಬಿಕೆ, ಮದುವೆಯ ಸಮಾರಂಭ, ಹಬ್ಬಹರಿದಿನಗಳ ಆಚರಣೆ, ಅವರ ಕಲಾಭಿವ್ಯಕ್ತಿ, ನೃತ್ಯ, ಗೋಡೆಗಳ ಮೇಲಿನ ಚಿತ್ತಾರಗಳು ಹಾಗೂ ಸ್ತ್ರೀ ಪುರುಷರು ಧರಿಸುವ ಆಭರಣ, ವಸ್ತ್ರವಡವೆಗಳು, ಮಣ್ಣಿನ ಕಲಾಕೃತಿಗಳು ಆದಿವಾಸಿಗಳ ಬದುಕು ಬವಣೆಗಳನ್ನು ಬಿಂಬಿಸುತ್ತವೆ. ಆದಿವಾಸಿಗಳು ತಯಾರಿಸಿದ ಹಲವಾರು ಕಲಾಕೃತಿಗಳು, ಕರಕುಶಲ ವಸ್ತುಗಳ ಕೆಲವು ಅಂಗಡಿಗಳೂ ಆವರಣದಲ್ಲಿವೆ. ಆದಿವಾಸಿಗಳ ಒಂದು ನೃತ್ಯವನ್ನು ಕೂಡ ಪ್ರವಾಸಿ ನಿಗಮವು ಆಯೋಜಿಸಿ ಪ್ರವಾಸಿಗರನ್ನು ರಂಜಿಸುತ್ತದೆ. ಇದಕ್ಕಾಗಿ ಕೆಲವು ಆದಿವಾಸಿ ಮಹಿಳೆಯರ ಕಲಾ ತಂಡಗಳಿವೆ. ವಾದ್ಯವೃಂದವರು, ಪುರುಷರು, ಮಹಿಳೆಯರು ದಟ್ಟಕೆಂಪು ಅಥವಾ ನೀಲಿಬಣ್ಣದ ಆದಿವಾಸಿ ಉಡುಗೆ ತೊಟ್ಟು, ತಲೆಯಲ್ಲಿ ಕಾಡು ಹೂಗಳನ್ನು ಮುಡಿದು ನೃತ್ಯ ಕಾರ್ಯಕ್ರಮ ನಡೆಸಿಕೊಡುತ್ತಾರೆ. ಮಯೂರ ಅಥವಾ ದಿಂಸಾ ನೃತ್ಯವೆಂದು ಕರೆಯಲ್ಪಡುವ ಇದು ತಾಳವಾದ್ಯಗಳಿಗೆ ಅನುಗುಣವಾಗಿ ನಡೆಯುವ ಸಹಜ ನೃತ್ಯ. ಒಬ್ಬರ ಭುಜವನ್ನು ಒಬ್ಬರು ಹಿಡಿದು, ಒಬ್ಬರ ಸೊಂಟವನ್ನು ಒಬ್ಬರು ಬಳಸಿ, ಚಕ್ರಾಕಾರವಾಗಿ ತಿರುಗುತ್ತ ಸರಾಗವಾಗಿ ಪಾದದ ಚಲನೆಗಳೊಂದಿಗೆ, ಹಾಡುತ್ತ ಬಾಗುತ್ತ, ಏಳುತ್ತ, ಬಳಕುತ್ತ ಅರ್ಧಗಂಟೆ ನೃತ್ಯ ಕಾರ್ಯಕ್ರಮ ನೀಡುತ್ತಾರೆ. ಕುಣಿತಕ್ಕೆ ಸರಿಯಾಗಿ ತಾಳಮದ್ದಳೆಯಂತಹ ಸ್ಥಳೀಯ ವಾದ್ಯಪರಿಕರಗಳ ಮೂಲಕ ಸಂಗೀತದ ಹಿನ್ನೆಲೆ ಒದಗಿಬರುತ್ತದೆ. ಮಧ್ಯ ಆಗಾಗ ಕೊಂಬುಕಹಳೆಗಳನ್ನು ಊದಿ ಒಟ್ಟಾರೆ ನೃತ್ಯ ಕಾರ್ಯಕ್ರಮ ರಂಗೇರುವಂತೆ ಮಾಡಲಾಗುತ್ತದೆ. ಕೆಲವು ಪ್ರವಾಸಿ ಮಹಿಳೆಯರು ಆದಿವಾಸಿ ಮಹಿಳೆಯರೊಂದಿಗೆ ಹೆಜ್ಜೆಹಾಕಿ ಸಂಭ್ರಮಿಸುತ್ತಾರೆ. ಅವರಿಗೆ ಪುರಸ್ಕಾರ ನೀಡಿ ಪ್ರೋತ್ಸಾಹಿಸುತ್ತಾರೆ. ಆದಿವಾಸಿ ಮಹಿಳೆಯರೊಂದಿಗೆ ಫೋಟೋ ತೆಗೆಸಿಕೊಳ್ಳುವುದೂ ಒಂದು ಸಂಭ್ರಮವಾಗಿ ಅಲ್ಲಿ ಪರಿಣಮಿಸುತ್ತದೆ. ಆಧುನೀಕರಣಕ್ಕೆ ತೆರೆದುಕೊಳ್ಳುತ್ತಿರುವ ಆದಿವಾಸಿ ಜನಾಂಗ ನೋಟುಗಳ ಮೋಡಿಗೆ ಒಳಗಾಗುತ್ತಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಆದರೂ ಹಿಂದು ಮುಂದು ಕಿತ್ತುಹೋಗುವಂತೆ ಕುಣಿವ, ನೃತ್ಯದ ಹೆಸರಿನಲ್ಲಿ ನೂರೆಂಟು ಸರ್ಕಸ್ ಮಾಡುವ ಇಂದಿನ ಪೀಳಿಗೆಗಳ ಯುವ ಸಹಪ್ರವಾಸಿಗರಿಗೆ, ಮಕ್ಕಳಿಗೆ ಆದಿವಾಸಿ ನೃತ್ಯ ಸಪ್ಪೆ ಅನಿಸುವುದು ಅವರ ಮುಖಭಾವದಿಂದ ಕಂಡುಬರುತ್ತಿತ್ತು.

ಆದಿವಾಸಿ ವಸ್ತುಸಂಗ್ರಹಾಲಯದ ಹೊರಗಡೆ ಅನೇಕ ಆದಿವಾಸಿ ಮಹಿಳೆಯರು ತಯಾರಿಸಿ ಮಾರುವ 'ಬಂಬು ಚಿಕನ್' ಎಂಬ ಖಾದ್ಯ ಇಲ್ಲಿನ ಪ್ರಮುಖ ಆಕರ್ಷಣೆ. ಬಿದಿರಿನ ತುಂಡುಗಳಲ್ಲಿ ಚಿಕನ್ (ಕೋಳಿಮಾಂಸ)ವನ್ನು ತುಂಬಿ ಕೆಂಡದ ಮೇಲೆ ಸುಟ್ಟು, ಬೇಯಿಸಿ ಕೊಡುವ ಖಾದ್ಯ ಇದು. ಬೆಂಗಳೂರಿನ ಕೆಲ ಪ್ರವಾಸಿ ಮಿತ್ರರು ಬಾಯಿ ಚಪ್ಪರಿಸುತ್ತ ಬಹಳ ಚೆನ್ನಾಗಿದೆ ಎಂದು ಅದನ್ನು ತುಂಬ ಆಸ್ವಾದಿಸಿದರು. ಅದು ಬಿದಿರಿನ ರುಚಿಯೋ, ಬೆಟ್ಟದ ಕೋಳಿಯ ರುಚಿಯೋ ಬಲ್ಲವರಾರು. ನಮ್ಮ ತಿಮ್ಮಾಪುರವರಿಗೆ ಕೋಳಿಯ ಹಂಬಲ ಇತ್ತಾದರೂ ಚನ್ನಬಸಣ್ಣ ಅವರ ಎದುರಿಗೆ ಶಿಷ್ಟಾಚಾರ ಪಾಲಿಸುತ್ತ ಮನದಲ್ಲಿ ಮರುಗಿದರು.

ಕಾಫಿ ಮ್ಯೂಸಿಯಂ ಕೂಡ ಅರಕು ಕಣಿವೆಯ ಆಕರ್ಷಣೆ. ಕಾಫಿ ಬೆಳೆದು ಬಂದ ಬಗೆಯನ್ನು ವಿವರಿಸುವ ಇದು ಕಾಫಿನಾಡಿನಿಂದ ಬಂದವರಿಗೆ ಹೊಸದೇನಲ್ಲ. ಮ್ಯೂಸಿಯಂನಲ್ಲಿ ಕಾಫಿ ಕುಡಿದು ಬರಬಹುದಷ್ಟೆ. ಅರಕು ಕಾಫಿ ವಿಶೇಷತೆ ಅಂದರೆ, ಅದು ಸಾವಯವ ಕಾಫಿಯಂತೆ! ಅಂತೆಯೇ ಅದಕ್ಕೆ ಹೊರದೇಶಗಳಲ್ಲೆಲ್ಲ ಬಹಳ ಬೇಡಿಕೆ ಇದೆ ಎಂದು

ಹೇಳಲಾಗುತ್ತದೆ. ಆದಿವಾಸಿ ಜನರಿಗೆ ಈಗ ಕಾಫಿ ತೋಟಗಳೇ ಪ್ರಮುಖ ಉದ್ಯೋಗ ಒದಗಿಸುವ ತಾಣಗಳಾಗಿವೆ. ಸಮಯಾವಕಾಶ ಇದ್ದರೆ ಅರಕು ಗಿರಿಧಾಮದಲ್ಲಿ ಒಂದೆರಡು ದಿನ ಇದ್ದು ಸುತ್ತಲಿನ ಪರಿಸರವನ್ನು ಸವಿಯಬಹುದು. ಹಸಿರು ತುಂಬಿದ ಅರಕು ಕಣಿವೆಯ ನೋಟ, ಭತ್ತದ ಗದ್ದೆಗಳು, ಹರಿವ ತೊರೆಗಳು, ಸುತ್ತಲಿನ ಎತ್ತರದ ಬೆಟ್ಟಗಳನ್ನು ಕಣ್ಮನಗಳಲ್ಲಿ ತುಂಬಿಕೊಳ್ಳಬಹುದು.

ಆಂಧ್ರ ಪ್ರವಾಸೋದ್ಯಮದ ಹೋಟೆಲ್ ಹರಿತ್‌ನಲ್ಲಿ ಊಟ ಪೂರೈಸಿ ನಾವು ಬಸ್ಸಿನಲ್ಲಿ ಬೊರ್ರಾಗುಹೆಗಳ ದಾರಿ ಹಿಡಿದೆವು. ಅಲ್ಲಿಂದ ೩೬ ಕಿ.ಮೀ ಅಂತರದಲ್ಲಿರುವ ಬೊರ್ರಾ ಗುಹೆ ತಲುಪಲು ಬೆಟ್ಟದ ಬಳಸುರಸ್ತೆಯಲ್ಲಿ ಒಂದು ಗಂಟೆಯೇ ಬೇಕಾಯಿತು. ಅರಕು ಮತ್ತು ಬೊರ್ರಾ ಗುಹೆಗಳಿರುವ ಅರಣ್ಯ ಪ್ರದೇಶವನ್ನು ಅನಂತಗಿರಿ ಬೆಟ್ಟದ ಶ್ರೇಣಿಗಳೆಂದು ಕರೆಯಲಾಗುತ್ತದೆ. ವಿಶಾಖಪಟ್ಟಣದಿಂದ ೯೦ ಕಿ.ಮೀ. ಅಂತರದಲ್ಲಿರುವ ಬೊರ್ರಾ ಗುಹೆಗಳು ಸಮುದ್ರಮಟ್ಟದಿಂದ ೭೦೦ ಮೀ ಎತ್ತರದಲ್ಲಿದ್ದರೆ, ಗುಹೆಯ ಒಳಭಾಗ ೬೨೫ ಮೀ. ಎತ್ತರದಲ್ಲಿವೆ. ಅಂದರೆ ಗುಹೆಯ ಪ್ರವೇಶ ಮಾಡಿ ಗುಹೆಯ ಒಳಗಡೆ ಇಳಿಯುತ್ತ ಮುಂದೆ ಸಾಗಿ ಗುಹೆಯನ್ನು ಅನ್ವೇಷಿಸಬೇಕಾಗುತ್ತದೆ. ಬೊರ್ರಾ ಗುಹೆ ಇರುವುದೊಂದೇ ಆದರು ಗುಹೆಯ ಒಳಗಡೆ ಸಣ್ಣ ಸಣ್ಣ ಗುಹಾಲಯಗಳಿವೆ.

ನಾವು ಬಸ್ಸಿನಿಂದಿಳಿದು, ಟಿಕೆಟ್ ಪಡೆದು ನೂರಿನ್ನೂರು ಮೀ. ಮುಂದೆ ಸಾಗಿ ಕೆಲವು ಮೆಟ್ಟಿಲುಗಳನ್ನಿಳಿದು ನಿಬಿಡ ಬೆಟ್ಟದ ಮಧ್ಯ ಅಡಗಿರುವ ಗುಹೆಯ ಬಳಿ ಬಂದಾಗ, ಗುಹೆ ೧೦೦ ಮೀ ಅಗಲದ ೭೫ ಮೀ ಎತ್ತರದ ತನ್ನ ಬಾಯಿಯನ್ನು ತೆರೆದು ನಮ್ಮನ್ನು ಸ್ವಾಗತಿಸಲು ನಿಂತಿತ್ತು. ಗುಹೆಯ ಒಳಗಡೆ ಇಳಿದು ಮುಂದೆ ಸಾಗಲು ನಿಡಿದಾದ ಪಾವಟಿಗೆಗಳು, ಸಣ್ಣ ಕಾಲು ರಸ್ತೆಯನ್ನೂ ನಿರ್ಮಿಸಲಾಗಿದೆ. ಒಳಗಡೆ ಗುಹೆಯ ಮೇಲ್ಭಾವಣಿಗೆ ಬಣ್ಣದ ಬೆಳಕಿನ ವ್ಯವಸ್ಥೆ ಮಾಡಲಾಗಿದ್ದು, ಗುಹೆಯ ಅಂತರಂಗ ಬಣ್ಣದ ಬೆಳಕಿನಲ್ಲಿ ಅನಾವರಣಗೊಳ್ಳುತ್ತ ಹೋಗುತ್ತದೆ. ಗುಹೆಯ ವಿಶಾಲವಾದ ಒಳಭಾಗ ನಮ್ಮನ್ನು ದಂಗುಗೊಳಿಸುತ್ತದೆ. ಪೊಳ್ಳಾದ ಒಳಭಾಗದ ಚಿತ್ರ, ವಿಚಿತ್ರ ಆಕಾರಗಳು ಬೆರಗುಕೊಳುಸುತ್ತವೆ. ಅಷ್ಟು ವಿಶಾಲವಾದ ಪೊಳ್ಳು ಒಳಭಾಗವೇ ಒಂದು ಅಚ್ಚರಿಯ ಸಂಗತಿ. ನಾನು ಮಲೇಶಿಯಾದ ಬಾಟು ಗುಹೆಗಳನ್ನು ಮತ್ತು ವಿಯೆಟ್ನಾಂನ ಹಲೊಂಗಬೇ ಗುಹೆಗಳನ್ನು ನೋಡಿದ್ದೇನೆ. ಆದರೆ ಬೊರ್ರಾ ಗುಹೆ ಅವುಗಳಿಗಿಂತಲೂ ವಿಶಾಲವಾದದ್ದು ಮತ್ತು ಹೆಚ್ಚು ಆಳ, ಅಗಲವಾದದ್ದು, ಸುಮಾರು ೩೫೦ ಮೀ.ದಷ್ಟು ಗುಹೆಯಲ್ಲಿ ಮುಂದೆ ಸಾಗಬೇಕು. ಮಧ್ಯ ಒಂದಿಷ್ಟು ಏರಿಳಿತಗಳು, ಮಜಲುಗಳೂ ಇವೆ. ಗುಹೆ ಒಳಗಡೆ ಸರಾಸರಿ ೧೨ ಮೀ ಎತ್ತರ ಇದೆ. ಮಧ್ಯ ನೈಸರ್ಗಿಕ ಬೆಳಕಿಂಡಿ ಕೂಡ ಇದೆ. ಬೊರ್ರಾ ಗುಹೆ ನಿಸರ್ಗ ನಿರ್ಮಿತವಾದದ್ದು. ಇದು ೧೫೦ ಮಿಲಿಯನ್ ವರ್ಷಗಳಷ್ಟು ಪುರಾತನ ಗುಹೆ ಎಂದು ಹೇಳಲಾಗುತ್ತದೆ. ನೀರಿನಲ್ಲಿನ ಕ್ಷಾರದ ಅಂಶ ಸುಣ್ಣದ ಕಲ್ಲಿನೊಂದಿಗೆ ಪ್ರತಿಕ್ರಿಯಿಸಿ ನಿಧಾನವಾಗಿ ಕಲ್ಲನ್ನು ಶಿಥಿಲಗೊಳಿಸಿ, ಒಡೆದು ಒಳಗೆ ಪೊಳ್ಳು ಮಾಡುತ್ತ ಹೋಗುತ್ತದೆ. ಅನೇಕ ವರ್ಷಗಳವರೆಗೆ ನಡೆವ ಈ ನಿರಂತರ ಕ್ರಿಯೆಯಿಂದ ಗುಹೆಗಳು ನಿರ್ಮಾಣವಾಗುತ್ತವೆಂದು ಭೂವಿಜ್ಞಾನಿಗಳ ಅಭಿಮತ, ಕಾಲ ಪೊಳ್ಳನ್ನು ವಿಸ್ತರಿಸುತ್ತ ವಿಶಾಲಗೊಳಿಸುತ್ತ ಹೋಗುತ್ತದೆ. ಪೊಳ್ಳುಗಳ ಮೂಲಕ ಸತತ ಹರಿವ ನೀರಿನ ತೊರೆಗಳು ಪೊಳ್ಳನ್ನು ವಿಸ್ತರಿಸುತ್ತ ವಿಶಾಲಗೊಳಿಸುತ್ತ ಕಾಲಾಂತರದಲ್ಲಿ ಗುಹೆ ನಿರ್ಮಾಣಗೊಳ್ಳುತ್ತದೆ. ಕಲ್ಲಿನ ಪದರುಗಳ ಮೂಲಕ ತೊಟ್ಟಿಕ್ಕುವ, ಜಿನುಗುವ ನೀರು ಕಲ್ಲಿನೊಳಗಿನ ಸುಣ್ಣ ಮತ್ತಿತರ ಖನಿಜ ಅಂಶಗಳೊಡನೆ ಬೆರೆತು, ನೀರು ತೊಟ್ಟಿಕ್ಕುವ ಗುಹೆಯ ಮೇಲ್ಭಾಗದಲ್ಲಿ ಸುಣ್ಣದ ಅಂಶಗಳನ್ನೊಳಗೊಂಡ (Stalgmate) ಹಾಗೂ ನೀರು ತೊಟ್ಟಿಕ್ಕಿದ ಕೆಳಭಾಗದಲ್ಲಿ (Stalacitite) ಚಿತ್ರ ವಿಚಿತ್ರ ಆಕಾರದ ವಿನ್ಯಾಸಗಳನ್ನು ಕಲ್ಲಿನಲ್ಲಿ ನಿರ್ಮಿಸಿ ಗುಹೆಯ ಒಳಭಾಗ ನಿಸರ್ಗ ಬಿಡಿಸಿದ ಒಂದು ಸುಂದರ ಚಲುವಿನ ಚಿತ್ತಾರವಾಗಿ ಕಂಡುಬರುತ್ತದೆ. ಬಣ್ಣದ ಬೆಳಕಿನಲ್ಲಿ ಆ ಚಿತ್ತಾರಗಳು ಹಲವಾರು ರೂಪ ಸ್ವರೂಪಗಳನ್ನು ಪಡೆದು ಪ್ರವಾಸಿಗರ ಕಲ್ಪನೆಗೆ ಇಂಬು ನೀಡುತ್ತವೆ. ಗುಹೆಯ ಮೇಲ್ಭಾಗದಿಂದ ಹಲವಾರು ಆಕಾರಗಳಲ್ಲಿ ಜೋತು ಬಿದ್ದಂತೆ ಕಾಣುವ ಕಲ್ಲಿನ ರಸಗಟ್ಟಿಗಳು ನೋಡುಗರಿಗೆ ಶಿವಪಾರ್ವತಿಯಂತೆ, ತಾಯಿ ಮಗುವಿನಂತೆ, ಋಷಿಯ ಗಡ್ಡದಂತೆ, ದೇವಾಲಯದಂತೆ, ಆಕಳ ಕೆಚ್ಚಲಿನಂತೆ, ಮನುಷ್ಯನ ಮೆದುಳಿನಂತೆ, ಮೊಸಳೆಯಂತೆ, ಚರ್ಚಿನಂತೆ ಹೀಗೆ ಕಲ್ಪಿಸಿಕೊಂಡಷ್ಟು ಆಕಾರಗಳನ್ನು ಪಡೆದು ನೋಡುಗರನ್ನು ಬೆರಗುಗೊಳಿಸುತ್ತವೆ. ಕೆಳಗೆ ಬಿದ್ದ ನೀರು ಕೆಲವು ಕಡೆ ಕಾಲಾಂತರದಲ್ಲಿ ಲಿಂಗಾಕಾರ ಪಡೆದು ಶಿವನರೂಪ ತಾಳಿನಿಲ್ಲುತ್ತದೆ. ಗುಹೆಯ ಒಂದು ಕಡೆ ಮೇಲ್ಭಾಗದಲ್ಲಿ ನೈಸರ್ಗಿಕವಾಗಿ ರಚನೆಗೊಂಡಿರುವ ಲಿಂಗ ಪೂಜಿಸಲ್ಪಡುತ್ತದೆ. ಗುಹೆಯ ಒಂದೆರಡು

ಕಡೆ ಮಹಡಿ, ಮೆಟ್ಟಿಲುಗಳುಂತು. ಒಂದು ಕಡೆ ತೆವಳಿ ಸಾಗಬೇಕು. ಸುತ್ತಲೂ ಅನಾವರಣಗೊಳ್ಳುತ್ತ ಸಾಗುವ ಅಗಾಧ ಚಲುವಿಕೆಯನ್ನು ಸವಿಯುತ್ತ, ಸಹ ಪ್ರವಾಸಿಗರ ಉದ್ಗಾರ ಉವಾಚಗಳನ್ನು ದೇಶದ ನಾನಾಭಾಷೆಗಳಲ್ಲಿ ಕೇಳುತ್ತ, ಫೋಟೋಗಳನ್ನು ಕ್ಲಿಕಿಸುತ್ತ, ಕೊನೆ ಮುಟ್ಟಿ, ಬಂದದಾರಿಯಲ್ಲಿ ತಿರುಗಿ ಹೊರಬಂದಾಗ ಹೊಸದೇನನ್ನೂ ನೋಡಿದ ಧನ್ಯತಾಭಾವ ಮನಸ್ಸನ್ನು ತುಂಬಿರುತ್ತದೆ. ಸೃಷ್ಟಿಯ ಬೆರಗು ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತದೆ.

ಬೊರ್ರಾ ಗುಹೆಗಳಲ್ಲಿ ಕೈಗೊಂಡ ಉತ್ಖನನದಿಂದ ಅಲ್ಲಿ ದೊರೆತ ಕಲ್ಲಿನ ಆಯುಧಗಳು, ಮಣ್ಣಿನ ಪಳಿಯುಳಿಕೆಗಳು, ಮಡಿಕೆಗಳಿಂದ ೩೦ ರಿಂದ ೫೦ ಸಾವಿರ ವರ್ಷಗಳ ಹಿಂದೆ ಈ ಗುಹೆ ಮನುಷ್ಯನ ಆವಾಸಸ್ಥಾನ ಆಗಿತ್ತೆಂದು ಗುರುತಿಸಲಾಗಿದೆ. ಗುಹೆಯ ಒಳಭಾಗದಲ್ಲಿನ ಶಿವಲಿಂಗ ಮತ್ತು ಅದರ ಮೇಲೆ ಆಕಳಿನ ಕೆಚ್ಚಲಿನಾಕಾರದಲ್ಲಿ ತೊಟ್ಟಿಕ್ಕುವ ನೀರು, ಮುಂದೆ ತೊರೆಯಾಗಿ ಹರಿದು ಗೋಸ್ಥನಿ ನದಿಯ ಉಗಮಕ್ಕೆ ಕಾರಣವಾಗುತ್ತದೆ. ಗುಹೆಯ ಹೊರಗೆ ಕೆಳಗಡೆ ಹರಿವ ಮುಖ್ಯಮೂಲವಾಗಿದೆ. ಗುಹೆಯ ಹೊರಗಡೆ ಹಸಿರಿನಿಂದ ಕಂಗೊಳಿಸುವ ಕಾಡು, ಕೆಳಗೆ ಹರಿವ ನದಿ ಒಟ್ಟಾರೆ ಆ ಪರಿಸರ ಚೆಲುವಿನಿಂದ ಕಂಗೊಳಿಸುತ್ತದೆ.

ಬೊರ್ರಾ ಗುಹೆಯ ಮೇಲ್ಭಾಗದಲ್ಲಿಯೇ ರೈಲುಮಾರ್ಗ ಇದೆ. ಗುಹೆಯ ಮೇಲ್ಭಾಗದ ಅಖಂಡ ಬಂಡೆಗಳಿಂದಾಗಿ ಗುಹೆಗೆ ದಕ್ಕೆ ಇಲ್ಲ. ಬೊರ್ರಾ ಗುಹೆಗಾಗಿಯೇ ಒಂದು ರೈಲು ನಿಲ್ದಾಣ ಕೂಡ ಇದೆ. ವಿಲಿಯಂ ಕಿಂಗ ಎನ್ನುವ ಆಂಗ್ಲ ಭೂವಿಜ್ಞಾನಿ ಕ್ರಿ.ಶ.೧೮೦೭ ರಲ್ಲಿ ಮೊದಲ ಬಾರಿಗೆ ಬೊರ್ರಾ ಗುಹೆಯನ್ನು ಶೋಧಿಸಿದನಂತೆ. ಅದಕ್ಕೂ ಮೊದಲೇ ಆದಿವಾಸಿಗಳು ಗುಹೆಯ ಮೇಲ್ಗಡೆ ಹಸು ಮೇಯಿಸುವಾಗ, ಒಂದು ಹಸು ಭೂಮಿಯೊಳಗಡೆ ಕುಸಿದು ಹೋಯಿತಂತೆ. ಅದನ್ನು ಶೋಧಿಸುತ್ತ ಸಾಗಿದಾಗ ಹಸು ಗುಹೆಯ ಒಳಗಡೆ ಶಿವಲಿಂಗದ ಮೇಲೆ ಹಾಲು ಸುರಿಸುತ್ತಿತ್ತೆಂದು, ಹೀಗಾಗಿ ಆ ಸ್ಥಳವನ್ನು ಗೋಸ್ಥನಿ ಎಂದು ಕರೆದು ಗುಹೆಯಲ್ಲಿ ಶಿವಪೂಜೆ ಆರಂಬಿಸಿದರಂತೆ. ಗುಹೆಯ ಹೊರಗಡೆ ಒಂದು ಶಿವದೇವಾಲಯ ನಿರ್ಮಿಸಲಾಗಿದ್ದು, ಶಿವರಾತ್ರಿಗೆ ದೊಡ್ಡ ಜಾತ್ರೆ ಆಗುವುದಾಗಿ ಹೇಳಲಾಗುತ್ತದೆ. ಗುಹೆಯಿಂದ ೮–೧೦ ಕಿ.ಮೀ ದೂರದಲ್ಲಿ ಆಂಧ್ರ ಪ್ರವಾಸೋದ್ಯಮದ ವಸತಿ ವ್ಯವಸ್ಥೆ ಇದ್ದು, ಚಾರಣಿಗರು, ಪಕ್ಷಿಪ್ರಿಯರಿಗೆ ಈ ಪ್ರದೇಶ ಯಾವಾಗಲೂ ಆಕರ್ಷಣೀಯ. ನಾವು ಬಸ್ಸಿನಲ್ಲಿ ಮತ್ತೆರಡು ತಾಸು ಪಯಣಿಸಿ ವಿಶಾಖಪಟ್ಟಣ ತಲುಪಿದಾಗ ರಾತ್ರಿ ಒಂಭತ್ತುಗಂಟೆ ದಾಟಿತ್ತು.

ಅರಕುಕಣಿವೆ, ಬೊರ್ರಾ ಗುಹೆ ನೋಡಲು ವಿಶಾಖಪಟ್ಟಣದಿಂದ ಹೊರಡುವುದೇ ಸೂಕ್ತ. ವಿಶಾಖಪಟ್ಟಣ ಆಂಧ್ರ ಪ್ರದೇಶದಲ್ಲಿಯೇ ಈಗ ಪ್ರಮುಖ ನಗರ. ವ್ಯಾಪಾರ ಉದ್ಯಮಗಳ ನಗರ. ಉಕ್ಕು ಕಾರಖಾನೆ, ಭಾರತದ ನೌಕಾಪಡೆ, ವಾಯುಪಡೆಯ ಪೂರ್ವದ ಪ್ರಮುಖ ನೆಲೆಯಾಗಿಯೂ, ಬಂದರು ನಗರವಾಗಿಯೂ ವಿಶಾಖಪಟ್ಟಣ ಪ್ರಸಿದ್ಧ. ಕಳೆದ ವರ್ಷ ಸಂಭವಿಸಿದ ಭಾರಿ ಚಂಡಮಾರುತ ಬಿರುಗಾಳಿಯಿಂದಾಗಿ ಅಪಾರ ಹಾನಿಗೊಳಗಾಗಿದ್ದ ನಗರ ಮತ್ತೆ ಚೇತರಿಸಿಕೊಂಡಿದೆ. ವಿಶಾಲವಾದ ಸುಂದರ ರಸ್ತೆಗಳು, ವೈಭವೋಪೇತ ಕಟ್ಟಡಗಳಿಂದ, ಹಸಿರು ವನಸಿರಿಯಿಂದ ನಗರ ಕಂಗೊಳಿಸುತ್ತದೆ. ನಗರವನ್ನು ಸುತ್ತುವರಿದಿರುವ ವಿಶಾಲಸಮುದ್ರ ತೀರದುದ್ದಕ್ಕೂ ಉದ್ಯಾನಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ವಿಶಾಖಪಟ್ಟಣದ ಸಮುದ್ರ ದಂಡೆಯ ಮರಿನ್‌ಡ್ರೈವ್ ತೀರವು ತುಂಬ ಉದ್ದವಾಗಿದ್ದು, ಉದ್ದಕ್ಕೂ ಅನೇಕ ಪ್ರವಾಸಿ ತಾಣಗಳನ್ನು ರಚಿಸಲಾಗಿದೆ. ನಗರ ಮಧ್ಯದ ಕೈಲಾಸಗಿರಿ ಬೆಟ್ಟವನ್ನು ವಿವಿಧ ಬಗೆಯಲ್ಲಿ ಅಭಿವೃದ್ಧಿಪಡಿಸಿ ಪ್ರವಾಸಿ ಆಕರ್ಷಣೆಯ ತಾಣವನ್ನಾಗಿ ಮಾಡಲಾಗಿದೆ. ನಗರ ಸ್ವಚ್ಛ ಮತ್ತು ಸುಂದರವಾಗಿ ಕಂಡುಬರುತ್ತದೆ. ಮೀನುಗಾರಿಕೆ ಕೂಡಾ ವಿಶಾಖಪಟ್ಟಣದ ಪ್ರಮುಖ ಉದ್ಯೋಗ. ಸಾವಿರಾರು ಮೀನುಡೋಣಿಗಳು, ಸಣ್ಣ ಹಡಗುಗಳು, ಮೀನು ಸಂಸ್ಕರಣೆ ಘಟಕಗಳು ಕಾರ್ಯನಿರ್ವಹಿಸುವ ಪ್ರತ್ಯೇಕ ಭಾಗವೇ ಇದೆ. ನಗರದಿಂದ ಸ್ವಲ್ಪ ದೂರದ ಗುಡ್ಡದ ಮೇಲಿರುವ ರಾಮನಾಯ್ಡು ಸ್ಟುಡಿಯೋ ತೆಲಗು ಚಿತ್ರಜಗತ್ತಿನ ಮ್ಯೂಸಿಯಂ ಇದ್ದಂತೆ. ಸ್ಟುಡಿಯೋ ಚಟುವಟಿಕೆಗಳು ಈಗ ಹೆಚ್ಚು ಕಡಿಮೆ ನಿಂತು ಹೋಗಿದ್ದರೂ ಅಲ್ಲಿ ಹಿಂದಿ ಮತ್ತು ತೆಲಗು ಸಿನಿಮಾ ಮತ್ತು ದಕ್ಷಿಣ ಭಾರತದ ಚಿತ್ರ ಜಗತ್ತಿನ ಇತಿಹಾಸದ ದೊಡ್ಡ ಪ್ರದರ್ಶನವೇ ಇದೆ. ತೆಲಗು ಬೆಳ್ಳಿತೆರೆಯ ಹಿಂದಿನ ಮತ್ತು ಇಂದಿನ ಎಲ್ಲ ಘಟನಾವಳಿಗಳನ್ನು ಫೋಟೊ ಪ್ರದರ್ಶನದ ಮೂಲಕ ಅಲ್ಲಿ ಅನಾವರಣಗೊಳಿಸಲಾಗಿದೆ. ರಾಮಾನಾಯ್ಡು ತೆಲಗು ಚಿತ್ರ ಜಗತ್ತಿನ ದೊಡ್ಡ ಹೆಸರು (೧೯೩೬–೨೦೧೫). ಅವರು ೧೩ ಭಾಷೆಗಳಲ್ಲಿ (ಕನ್ನಡ ಸಹಿತ) ಒಟ್ಟು ೧೫೦ ಸಿನಿಮಾಗಳನ್ನು ತಯಾರಿಸಿ ಗಿನ್ನಿಸ್ ದಾಖಲೆ ಹೊಂದಿದ್ದಾರೆ.

ದಾದಾಸಾಹೇಬ ಫಾಲ್ಕೆ ಪ್ರಶಸ್ತಿ ಪಡೆದಿದ್ದಾರೆ. ರಾಮಾನಾಯ್ಡು ಸ್ಟುಡಿಯೋ ಸಮುದ್ರ ತೀರದ ಹಿನ್ನಲೆಯಲ್ಲಿ ಗುಡ್ಡದ ಮೇಲೆ ಈಗ ಅನಾಥವಾಗಿ ನಿಂತಂತಿದೆ. ನಮ್ಮ ಎರಡು ದಿನಗಳ ವಾಸ್ತವ್ಯ ಮತ್ತು ಸುತ್ತಾಟದ ಅವಧಿಯಲ್ಲಿ ವಿಶಾಖಪಟ್ಟಣ ನಗರ ಆಗಲೇ 'ಸ್ಮಾರ್ಟ್‌ಸಿಟಿ'ಯಾಗಿ ಅಭಿವೃದ್ಧಿ ಹೊಂದಿರುವಂತೆ ನಮಗೆ ಕಂಡುಬಂಟು. ಆದರೆ ಸದಾ ಮನದಲ್ಲಿ ಉಳಿಯುವುದು ಮಾತ್ರ ನಿಸರ್ಗರಮ್ಯ ಅರಕು ಕಣಿವೆಯ ಹಸಿರು, ಹಾಗೂ ಬೊರ್‍ರಾ ಗುಹೆಯ ಬೆಡಗು ಬಿನ್ನಾಣಗಳು.

# 4. ಓದು ಪಠ್ಯ : ಶಾಂತಲಾ

**– ಕೆ.ವಿ.ಅಯ್ಯರ್**

ಮರುದಿನ ಬಿಸಿಲೇರುವುದಕ್ಕೆ ಮೊದಲೆ ಶಾಂತಲೆ ಬೆಟ್ಟವನ್ನು ಹತ್ತಲು ಸಿದ್ಧಳಾದಳು. ಕುವರನೂ ಸಿದ್ಧನಾದ. ಗಿರಿಗೆ ಕೈಮುಗಿದು ಬೆಟ್ಟವನ್ನು ಹತ್ತಲು ಉಪಕ್ರಮಿಸಿದರು. ಸ್ವಲ್ಪದೂರ ಹತ್ತುವುದರಲ್ಲಿ ಗಂಗಾಧರೇಶ್ವರ ಗುಹಾಂತರ್ದೇವಾಲಯ ಸಿಕ್ಕಿತು. ವಿಘ್ನೇಶ್ವರ, ನಂದಿಗಳಿಗೆ ನಮಸ್ಕರಿಸಿ ಒಳಹೊಕ್ಕು, ಮಹಾದೇವನಿಗೆ ಭಕ್ತಿಯಿಂದೆರಗಿ, ಅನಂತರ ಗಿರಿಶಿಖರಕ್ಕೆ ನಡೆದರು. ಹಾದಿ ಬಹು ಇಕ್ಕಟ್ಟು, ಕಡಿದು. ಮೆಟ್ಟಲು ಸಣ್ಣವು, ಅಲ್ಲಲ್ಲಿ ಜಾರಿಬೀಳುವ ಸ್ಥಿತಿ. ಇಷ್ಟು ಕಠಿಣವಿದ್ದರೂ ಶಾಂತಲೆಯ ಮನಸ್ಸು ಶಾಂತವಾಗಿಯೆ ಇತ್ತು. 'ಅವಸರ ಬೇಡ ಅಕ್ಕ, ನಿಧಾನಮಾಡು. ಪಕ್ಕದ ಬಂಡೆಯನ್ನು ಹಿಡಿದುಕೊ. ಅಷ್ಟು ಸಣ್ಣ ಕಲ್ಲಿನ ಮೇಲೆ ಕಾಲಿಡಬೇಡ, ಜಾರೀತು, ಹೊರಳೀತು. ಅಲ್ಲಿ ಜೌಗು ಹೆಚ್ಚು, ಪಾಚಿ ಕಟ್ಟಿದೆ, ಎಚ್ಚರಿಕೆ!' ಎನ್ನುತ್ತ ಕುವರವಿಷ್ಣು ಅಕ್ಕನ ಕೈಹಿಡಿದುಕೊಂಡು ಮೆಲ್ಲಮೆಲ್ಲನೆ ಹತ್ತಿಸಿಕೊಂಡು ಹೋದ. ದಣಿವನ್ನು ತೀರಿಸಿಕೊಳ್ಳಲು ಅಲ್ಲಲ್ಲಿ ಕುಳಿತು, ಆಯಾಸ ಪರಿಹಾರ ಮಾಡಿಕೊಂಡು, ಮುಂದುವರಿದರು. ದಾರಿಯುದ್ದಕ್ಕೂ ಮಂಟಪಗಳು, ಸೋಪಾನಗಳು, ಚಿಕ್ಕ ದೊಡ್ಡ ಗುಡಿಗಳು, ವಿನಾಯಕ ನಂದಿಗಳ ಮೂರ್ತಿಗಳು ಇದ್ದವು. ಬೆಟ್ಟದ ಗಾಳಿ ತಣ್ಣಗೆ ಬೀಸುತ್ತಿದ್ದರೂ, ಚೈತ್ರಮಾಸದ ಬಿಸಿಲು ಚುರುಕಾಗಿದ್ದಿತು.

ಅಂದು ಚೈತ್ರ ಶುದ್ಧ ಪಂಚಮಿ, ಸೋಮವಾರ. ಸೋಮಧರನ ದಿನದಲ್ಲೆ ಆತನ ದರ್ಶನ ಪಡೆದು, ಆತನನ್ನೆ ಧ್ಯಾನಿಸುತ್ತ ಬೆಟ್ಟವನ್ನು ಹತ್ತುತ್ತಿದ್ದಳು ಶಾಂತಲೆ. ಬೆಟ್ಟದ ಕಿಬ್ಬಿಯನ್ನು ಸೇರಿದಾಗ ಆಕೆಗೆ ಹೆಚ್ಚು ದಣಿವಾಗಿತ್ತು. ತೀರ್ಥೋದ್ಭವ ಹೊಂಡದ ಬಳಿ ಇಬ್ಬರೂ ಕುಳಿತರು. 'ಅಕ್ಕ, ಈ ಬೆಟ್ಟ ಇಷ್ಟು ಕಡಿದು ಎಂದು ಬಲ್ಲೆಯಾದರೂ ಹತ್ತಿ ಬಂದೆಯಲ್ಲ!' ಎಂದ ಕುವರ. 'ನಾನು ಚಿಕ್ಕವಳಿದ್ದಾಗ ಓಡಿ ಓಡಿ ಹತ್ತಿದೆನೆಂದು ಅವ್ವೆ ಹೇಳಿದರು. ಅದೀಗ ಸಾಧ್ಯವೆ!' ಎಂದಳು ಶಾಂತಲೆ.

ಸ್ವಲ್ಪ ಹೊತ್ತು ಕುಳಿತು ದಣಿವಾರಿದ ಮೇಲೆ ಶಾಂತಲೆ 'ತಮ್ಮ, ಬಾಯಾರುತ್ತಿದೆ, ಹತ್ತಿರದಲ್ಲಿ ಜಲವಿಲ್ಲ. ನಾವು ಜೊತೆಯಲ್ಲೇ ತರಬೇಕಾಗಿತ್ತು. ನಾವು ಬಂದ ದಾರಿಯಲ್ಲಿ ವಿಘ್ನೇಶ್ವರನ ಮಂಟಪದ ಎದುರಿನ ದೋಣೆಯಲ್ಲಿ ತಿಳಿ ನೀರಿದ್ದುದನ್ನು ಕಂಡೆವಲ್ಲವೆ; ಪಕ್ಕದಲ್ಲೆ ಅರ್ಚಕರ ಮನೆ ಇದೆ. ಕೇಳಿ ಒಂದು ಪಾತ್ರೆಯಲ್ಲಿ ನೀರು ತೆಗೆದುಕೊಂಡು ಬಾ' ಎಂದಳು. 'ತರುವೆನಕ್ಕ, ಇಲ್ಲಿಯೆ ಕುಳಿತಿರು' ಎಂದು ಹೇಳಿ ಕುವರ ನಿಮಿಷಮಾತ್ರದಲ್ಲಿ ಇಳಿದುಹೋದ.

ಕುವರನು ಅಲ್ಲಿಂದ ಇಳಿದು ಹೋದಮೇಲೆ ಶಾಂತಲೆ ಎದ್ದು ಸುತ್ತ ನೋಡಿದಳು. ಸುಂದರವಾದ ದೃಶ್ಯ: ಬೆಟ್ಟದ ತಪ್ಪಲಿನಲ್ಲಿ ಶಿವಗಂಗೆ ಊರು ತೀರ ಪುಟ್ಟದಾಗಿ ಕಂಡಿತು. ಚಿಕ್ಕಂದಿನ ನೆನಪು, ಅಲ್ಲಿಯೆ ಎಲ್ಲೊ ಹತ್ತಿರದಲ್ಲಿಯೆ 'ಕೋಡುಗಲ್ಲು ಬಸವ' ಎಂಬ ಹೆಸರಿನ ಒಂದು ನಂದಿ ವಿಗ್ರಹ ಇದ್ದುದ್ದು. ಕಡೆಗೆ ಅದು ಇದ್ದ ದಿಕ್ಕನ್ನು ಹುಡುಕಿ ಕಂಡು ಹಿಡಿದು ಆ ಕೋಡುಗಲ್ಲು ಬಸವ ನಿರುವಡೆಗೆ ಹೋದಳು. ಕೋಡುಗಲ್ಲು ಬಸವ ಸಿಕ್ಕಿತು. ಅದರ ಸುತ್ತು ಪ್ರದಕ್ಷಿಣಕ್ಕೆ ಸ್ಥಳ ಬಹು ಇಕ್ಕಟ್ಟು. ಕಾಲುಜಾರಿದರೆ ಮೈಮೂಳೆ ಉಳಿಯುವ ಸಂಭವವೆ ಇಲ್ಲ. ಬಹಳ ಎಚ್ಚರದಿಂದ ಪ್ರದಕ್ಷಿಣೆ ಬರಬೇಕು. ಹೆಂಗಸರು ಮಕ್ಕಳಿಗಂತೂ ಅದು ಸಾಧ್ಯವೇ ಅಲ್ಲ.

ಶಾಂತಲೆ ಧೈರ್ಯದಿಂದ ಒಂದು ಸಲ ಆ ಬಸವನನ್ನು ಬಲವಂದಳು, ಕೈಮುಗಿದಳು. ತರುವಾಯ ಮಧ್ಯ ಆಕಾಶವನ್ನು ಸಮೀಪಿಸುತ್ತಿದ್ದ ಭಾಸ್ಕರನನ್ನು ನೋಡಿ ಕೈಮುಗಿದು 'ಭಗವನ್ ನಾರಾಯಣ, ಇನ್ನು ನನಗೆ ನೀನೇ ದಿಕ್ಕು, ನೀನೇ ಸಾಕ್ಷಿ. ಇಹಜನ್ಮದ ಕೊನೆಯ ಕರ್ತವ್ಯವಿದೆಂದು ಮಾಡುತ್ತಿದ್ದೇನೆ. ನಿನಗೆ ನನ್ನ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದೇನೆ. ನನಗೆ ಬೇರೆ ಯಾವ ಮಾರ್ಗವನ್ನೂ ನೀನು ತೋರಲಿಲ್ಲ. ನಮ್ಮ ರಾಜ್ಯಕ್ಕೆ ಒಳಿತಾಗಲಿ. ಲಕ್ಷ್ಮಿ ಪಟ್ಟಮಹಿಷಿಯಾಗಲಿ. ಅವಳಿಗೆ ಪುತ್ರಸಂತಾನವನ್ನೂ ದೇಶಕ್ಕೆ ಒಡೆಯನನ್ನೂ ಕೊಡು. ಪ್ರಭುಗಳ ಮನಸ್ಸನ್ನು ಹೇಗಾದರೂ ಸಂತೈಸಿ. ಅವರ ನನ್ನ ಮೇಲಿನ ಅನುರಾಗವೆಲ್ಲ ಲಕ್ಷ್ಮಿಗೆ ದೊರೆಯಲಿ. ಭಗವಂತ, ಕ್ಷಮಿಸು, ಕರುಣಿಸು' ಎನ್ನುತ್ತ ಶಾಂತಲೆ ಕಣ್ಣುಮುಚ್ಚಿದಳು. ಅಷ್ಟೆ. ಶಾಂತಲೆಯ ಶರೀರ ಅಲ್ಲಿಂದ ನೆಟ್ಟಕೆ ಕೆಳಕ್ಕೆ ಬಿದ್ದು ಬಂಡೆಗಳ ಮೇಲೆ ಉರುಳಿ ಉರುಳಿ ನೂರಡಿ ದೂರಕ್ಕೆ ಬಿದ್ದಿತು.

ರಮ್ಯವಾದ ನಕ್ಷತ್ರವೊಂದು ಮೂಡಿ, ಧರೆಗೆ ಬೆಳಕಿತ್ತು ಕಣ್ಮರೆಯಾಯಿತು. ಶಕವರ್ಷ ೧೦೫೦ (ಕ್ರಿ.ಶ.೧೧೩೧) ವಿರೋಧಿಕೃತು ಸಂವತ್ಸರದ ಚೈತ್ರ ಶುದ್ಧ ಪಂಚಮಿ ಸೋಮವಾರ, ಪೂರ್ವಾಹ್ನ ಶಾಂತಲದೇವಿ ಶಿವಗಂಗೆ ಪುಣ್ಯಕ್ಷೇತ್ರದಲ್ಲಿ ದೇಹವನ್ನು ಮುಡುಪಿದಳು.

ಅದೇ ಸಮಯದಲ್ಲಿ ಪ್ರಭುಗಳೂ ಲಕ್ಷ್ಮಿಯೂ ವೇಲಾಪುರದಲ್ಲಿ ಚೆನ್ನಕೇಶವನಿಗೆ ಶಾಂತಲದೇವಿಯ ಹೆಸರಿನಲ್ಲಿ ಪೂಜೆಯನ್ನು ಅರ್ಪಿಸುತ್ತಿದ್ದರು. ಅರ್ಚಕರು ಹೂವು ತುಂಬಿದ್ದ ತಟ್ಟೇಯ ನಡುವೆ ತುಪ್ಪದ ದೀಪವನ್ನಿಟ್ಟು ದೇವನಿಗೆ ಬೆಳಗುತ್ತಿದ್ದರು. ತಟ್ಟೆ ಪೂಜಾರಿಯ ಕೈಯಿಂದ ಅಕಸ್ಮಾತ್ತಾಗಿ ಜಾರಿ, ದೀಪದೊಡನೆ ನೆಲಕ್ಕುರುಳಿತು. ದೀಪ ನಂದಿಹೋಗುವುದರಲ್ಲಿತ್ತು. ಆರಿಹೋಗುತ್ತಿದ್ದ ಬತ್ತಿಯನ್ನು ಪ್ರಭುಗಳೇ ತತ್‌ಕ್ಷಣ ಕೈಯಿಂದ ಎತ್ತಿ, ಜ್ಯೋತಿಯನ್ನು ಉದ್ಧಾರಗೊಳಿಸಿದರು. ಆರಿಹೋಗುತ್ತಿದ್ದ ಆ ಸೊಡರು ಮತ್ತೆ ಪ್ರಜ್ವಲಿಸಿತು. ಪ್ರಭುವಿಗೆ ಇದು ಏನೋ ಅಶುಭಸೂಚನೆ ಎನ್ನಿಸಿತು. ಆ ಕ್ಷಣದಲ್ಲಿಯೆ ಎದೆಯ ಪಾರ್ಶ್ವದಲ್ಲಿ ಏನೋ ವಿಕಾರ ಅನುಭವವಾಯ್ತು. ಅರ್ಚಕನು ಅಂಜಿದನು. 'ಕೈ ಒದ್ದೆಯಾಗಿದ್ದುದರಿಂದ ತಟ್ಟೇ ಜಾರಿತು. ಸಹಸ್ರ ಅಪರಾಧವಾಯ್ತು. ದೇವರು ಮನ್ನಿಸಬೇಕು' ಎಂದು ಕೈ ಜೋಡಿಸಿ ದೈವವನ್ನೂ ಪ್ರಭುಗಳನ್ನೂ ಬೇಡಿ, ದೇವನಿಗೆ ಮತ್ತೆ ಹೊಸ ದೀಪಾರತಿಯನ್ನು ಬೆಳಗಿದನು.

ದೀಪಾರತಿ ಕೆಳಗುರುಳಿದಾಗ ಲಕ್ಷ್ಮಿಗೂ ಹೊಟ್ಟೆಯಲ್ಲಿ ಕಿವಿಚಿ ಹಿಂಡಿದಂತೆ ಸಂಕಟವಾಯಿತು. ನಿಟ್ಟುಸಿರೊಂದು ಅವಳ ಎದೆಯಿಂದ ತಾನಾಗಿ ಹೊರಟಿತು. ಪ್ರಭುಗಳು ಲಕ್ಷ್ಮಿಯೊಡನೆ ಗರ್ಭಗುಡಿಯಿಂದ ಈಚೆಗೆ ಬಂದು 'ಲಕ್ಷ್ಮಿ, ಇದೇನೋ ಅಶುಭಸೂಚಕವಾಗಿದೆ, ಮನಸ್ಸಿಗೆ ಕಳವಳಕಾರಣವಾಗಿದೆ' ಎಂದರು. ಲಕ್ಷ್ಮಿಯು 'ಸ್ವಾಮಿ, ನನಗೂ ಏಕೊ ಭಯವಾಗುತ್ತಿದೆ. ಆರತಿ ಜ್ಯೋತಿಯು ಹಾಗೆ ನೆಲಕ್ಕೆ ಉರುಳಬಾರದು. ನಮ್ಮ ತಪ್ಪೇನಿದ್ದರೂ ಚೆನ್ನಕೇಶವನು ಮನ್ನಿಸಲಿ. ಪ್ರಜ್ಞೆ ಇದ್ದು ನಾನು ಯಾವ ದೋಷವನ್ನೂ ಆಚರಿಸಿಲ್ಲ. ದೇವನು ಕಾಪಾಡಬೇಕು' ಎಂದಳು. ಪ್ರಭುಗಳೂ ಲಕ್ಷ್ಮಿಯೂ ದೇವನ ಕ್ಷಮೆ ಬೇಡುತ್ತ ಸೋಪಾನಗಳ ಮೇಲೆ ಸ್ವಲ್ಪ ಕಾಲ ಕುಳಿತರು.

ಅತ್ತ, ಕುವರ ಬೆಟ್ಟವನ್ನು ಸರಸರನೆ ಇಳಿದು, ಪೂಜಾರಿಯ ಮನೆಯಲ್ಲಿ ಒಂದು ಶುಭ್ರವಾದ ಪಾತ್ರೆಯನ್ನು ಈಸಿಕೊಂಡು, ವಿಘ್ನೇಶ್ವರನ ದೋಣೆಯಲ್ಲಿ ನೀರನ್ನು ತುಂಬಿಕೊಂಡು, ಪುನಃ ಮೇಲಕ್ಕೆ ಹತ್ತಿ ಬಂದ. ಅಕ್ಕನನ್ನು ಬಿಟ್ಟು ಹೋಗಿದ್ದೆಡೆಯಲ್ಲಿ ಅಕ್ಕನಿರಲಿಲ್ಲ. 'ಅಕ್ಕಾ, ಅಕ್ಕಾ!' ಎಂದು ಕೂಗಿದ, ಸುತ್ತ ನೋಡಿದ. ಉತ್ತರ ಬರಲಿಲ್ಲ. ಅಕ್ಕ ಕಣ್ಣಿಗೂ ಬೀಳಲಿಲ್ಲ. 'ದೂರ ಏನಾದರೂ ಹೋಗಿರುವಳೊ?' ಎಂದು, ಧ್ವನಿಯನ್ನು ಎತ್ತರಿಸಿ 'ಅಕ್ಕಾ, ಅಕ್ಕಾ!' ಎಂದು ಕೂಗಿದ ಉತ್ತರ ಬರಲಿಲ್ಲ. ಕುವರನಿಗೆ ಆಶ್ಚರ್ಯವಾಯಿತು, ಭಯವಾಯಿತು. ತಂದಿದ್ದ ಉದಕಪಾತ್ರೆಯನ್ನು ತೀರ್ಥೋದ್ಭವ ಹೊಂಡದ ಒಳಗೆ ಇಟ್ಟು, ಬಂಡೆಯೊಂದರ ಮೇಲೆ ಏರಿ ಇನ್ನೂ ಗಟ್ಟಿಯಾಗಿ 'ಅಕ್ಕಾ! ಅಕ್ಕಾ!!' ಎಂದು ಸುತ್ತಲೂ ತಿರುಗಿ ಕರೆದ. ಬೆಟ್ಟದ ಬೋರೆಗಲ್ಲುಗಳಿಂದ ಪ್ರತಿಧ್ವನಿ ಹೊರಟಿತು. ಉತ್ತರ ಬರಲಿಲ್ಲ. 'ಅಕ್ಕ ಇಷ್ಟರಲ್ಲಿ ಎಲ್ಲಿಗೆ ಹೋದಳು? ನನ್ನ ಕೂಗು ಕೇಳ ಬರದಷ್ಟು ದೂರ ಎಲ್ಲಿ ಹೋಗಿರಬಹುದು?' ಎಂದು ಕುವರನಿಗೆ ಭಯವಾಯಿತು. ಇನ್ನೊಂದು ಸಲ ತನ್ನ ದೇಹಶಕ್ತಿಯನ್ನೆಲ್ಲ ಗಂಟಲಿಗೆ ಕೊಟ್ಟು 'ಅಕ್ಕಾ! ಅಕ್ಕಾ!' ಎಂದು ಅರಚಿದ. ಎರಡು, ಮೂರು, ನಾಲ್ಕೈದು ಪ್ರತಿಧ್ವನಿಗಳುಂಟಾದವು. ಬೆಟ್ಟವೆಲ್ಲ ಕೇಳಿಸಿತು ಆ ಧ್ವನಿ. ಉತ್ತರ ಮಾತ್ರ ಇಲ್ಲ.

ಸೋಮವಾರ ಗಿರಿಪೂಜೆಗೆಂದು, ಇವರಿಗಿಂತ ಮುಂಚಿತವಾಗಿಯೆ ಬೆಟ್ಟವನ್ನು ಹತ್ತಿಬಂದು, ಪೂಜೆ ಮುಗಿಸಿ, ಕಾಯಿಹಣ್ಣುಗಳನ್ನು ತಿನ್ನುತ್ತ ಕುಳಿತಿದ್ದ ಒಂದು ತಂಡ ಗ್ರಾಮವಾಸಿಗಳು, ಕುವರನ ಕಾತರಧ್ವನಿಗೆ ಬೆಚ್ಚಿದವರಾಗಿ 'ಅಯ್ಯ, ಯಾರೊ ಭಾಗ್ಯವಂತೆ, ನಿಮ್ಮ ಅಕ್ಕನೆ ಇರಬಹುದು, ಆಕೆ, ಈಗ ಸ್ವಲ್ಪ ಹೊತ್ತಿಗೆ ಮುಂಚೆ, ಆ ಕೋಡುಗಲ್ಲು ಬಸವನಿರುವ ಕಡೆಗೆ ನಡೆದು ಹೋದರು' ಎಂದರು. 'ಅದೆಲ್ಲಿ?' ಎಂದು ಕೇಳಿದ ಕುವರ. 'ಅದೊ ಆ ಕಡೆ' ಎಂದು ಅವರು ಬೆರಳುಮಾಡಿ ತೋರಿದರು. ಕುವರ ಆ ಕಡೆ ಓಡಿದ. ಕುವರನ ಭೀತಿ ಕಾತರತೆಗಳನ್ನು ಕಂಡು ಆ ಗ್ರಾಮವಾಸಿಗಳು 'ಆ ಹೆಂಗಸಿಗೆ ಏನಾಯಿತೊ?' ಎಂದು ಅಂಜಿ, ಕುವರನ ಹಿಂದೆಯೆ ತಾವೂ ಓಡಿದರು.

ಕೋಡುಗಲ್ಲ ಬಸವನಿರುವಲ್ಲಿಗೆ ಬಂದ ಕುವರ. ಅಲ್ಲಿಯೂ ಸುತ್ತ ನೋಡಿದ. ಗಿರಿಯೆ ಅದಿರುವಂತೆ 'ಅಕ್ಕಾ–ಅಕ್ಕಾ–ಅಕ್ಕಾ' ಎಂದು ಅರಚಿದ. ಆ ಕೂಗಿಗೆ ಬೆಟ್ಟದ ಪ್ರತಿಯೊಂದು ಬಿರುಕಿನಲ್ಲಿಯೂ, ಬಂಡೆಗಳ ನಡುವೆಯೂ, ಕೆಳಗಿನ ಊರುಗಳಲ್ಲಿಯೂ, ಬಯಲಿನಲ್ಲಿಯೂ ಪ್ರತಿಧ್ವನಿಗಳು ಹೊರಟವು. ಉತ್ತರ ಮಾತ್ರ ಬರಲಿಲ್ಲ. ಆಗ ಕುವರನ ಧೈರ್ಯ

ಒಡೆಯಿತು. ನಡುಗುತ್ತಿರುವ ಧ್ವನಿಯಲ್ಲಿ 'ಇತ್ತ ಕಡೆ ಬಂದಳೆ? ನೀವು ನೋಡಿದಿರಾ?' ಎಂದು ಗ್ರಾಮವಾಸಿಗಳನ್ನು ಕೇಳಿದ. 'ಹೌದು ಅಯ್ಯಾ, ಈ ಕಡೆಗೇ ಬಂದರು. ನಿಮ್ಮ ಈ ಕೂಗು ಅವರೆಲ್ಲಿದ್ದರೂ ಕೇಳಿಸಿರಬೇಕು' ಎಂದರು ಗ್ರಾಮ ವಾಸಿಗಳು. ಕುವರನಿಗೆ ತಲೆ ತಿರುಗಿತು, ಕಾಲು ಕುಸಿಯಿತು. ಅವನು ಅವರನ್ನು ಕುರಿತು 'ಈ ಬೆಟ್ಟದಲ್ಲಿ ಕ್ರೂರ ಮೃಗಗಳಿವೆಯೆ?' ಎಂದು ಪ್ರಶ್ನೆ ಮಾಡಿದ. 'ಅಂತಹವು ಏನಿಲ್ಲ ಅಯ್ಯ, ಇದ್ದರೂ ಇಷ್ಟು ಹೊತ್ತಿನಲ್ಲಿ ಅವು ಹೊರಗೆ ಬಾರವು' ಎಂದರವರು. ಕುವರನಿಗೆ ಸಹನೆ ತಪ್ಪಿತು, ಬಹು ಭಯವುಂಟಾಯಿತು. 'ಅಕ್ಕ ಎಲ್ಲಿಗೆ ಹೋದಳು?' ಎಂದು ಬಂಡೆಯಿಂದ ಬಂಡೆಗೆ ಓಡುತ್ತ ದಿಕ್ಕುದಿಕ್ಕುಗಳಲ್ಲಿಯೂ ಎದೆ ಬಿರಿದುಹೋಗುವಂತೆ ಕೂಗಿದ. ಈಗ ಗ್ರಾಮವಾಸಿಗಳಿಗೂ 'ಆ ಹೆಂಗಸು ಏನಾದಳೊ!' ಎಂಬ ಭಯ ಹುಟ್ಟಿತು. ಕುವರವಿಷ್ಣು ಬಂಡೆಯಿಂದ ಬಂಡೆಗೆ ಓಡಿದಾಗ ಗ್ರಾಮವಾಸಿಗಳು ಕುವರನ ಕಾಲುಗಳಲ್ಲಿದ್ದ ಚಿನ್ನದ ತೋಡಗಳನ್ನು ಕಂಡರು, ಬಲಗಾಲಿನ ತೋಡದಲ್ಲಿ ಜಗ್ಗುತ್ತಿದ್ದ ಮುತ್ತಿನ ಗೊಂಚಲುಗಳನ್ನು ಕಂಡರು. ಆಗ ಅವರಿಗೆ 'ಇವರು ಮಹಾರಾಜರೆ ಇರಬೇಕು' ಎಂದು ತೋರಿತು. ಭಯಭಕ್ತಿಗಳಿಂದ ಕುವರನಿಗೆ ನಮಸ್ಕರಿಸಿ ಅವನೊಡನೆ ತಾವೂ ಹುಡುಕುವುದರಲ್ಲಿ ತೊಡಗಿದರು.

ಗ್ರಾಮವಾಸಿಗಳ ಗುಂಪಿನಲ್ಲಿದ್ದ ಒಬ್ಬ ಹುಡುಗನ ಸೂಕ್ಷ್ಮದೃಷ್ಟಿಗೆ, ಕೆಳಗೆ ನೂರು ಅಡಿಗಳ ದೂರದಲ್ಲಿ ಬಿದ್ದಿದ್ದ ಹೆಂಗಸಿನ ಶರೀರ ಒಂದು ಕಂಡಿತು. ಆಗ ಅವನು 'ಅಗೊ!ಅಗೋ!. . . ಅಲ್ಲಿ!' ಎಂದು ಕೆಳಗಡೆ ಕೈಮಾಡಿ ತೋರಿಸಿದ. ಎಲ್ಲರ ದೃಷ್ಟಿ ಆ ಕಡೆ ಓಲಿತು. ಗ್ರಾಮವಾಸಿಗಳೂ, ಉತ್ತಮ ವಸ್ತ್ರಗಳಿಂದ ಒಪ್ಪುತ್ತಿದ್ದ ಹೆಂಗಸೊಬ್ಬಳ ದೇಹ ಅಲ್ಲಿ ಬಿದ್ದಿರುವುದನ್ನು ಕಂಡರು. ಕುವರವಿಷ್ಣುವೂ ಕಂಡ. 'ತನ್ನ ಅಕ್ಕ ಹೋದಳು' ಎಂದು ಅವನ ಹೃದಯ ಅಲ್ಲಿಯೆ ನಿರ್ಧರಿಸಿತು. ಆಕ್ಷಣವೆ 'ಅಕ್ಕಾ, ಇದೊ ನಾನೂ ಬಂದೆ' ಎನ್ನುತ್ತ ಒಂದೇ ಹಾರಿಗೆ ತನ್ನ ಅಕ್ಕನನ್ನು ಹೋಗಿ ಸೇರಿದ ಕುವರ. ಗ್ರಾಮವಾಸಿಗಳು ಮೂಕರಾದರು. ಕಣ್ಮುಚ್ಚಿ ತೆಗೆಯುವುದರೊಳಗೆ ಈ ದುರಂತ ಅವರ ಕಣ್ಣುಮುಂದೆ ನಡೆದುಹೋಯಿತು. ಕುವರ ನಿಧಾನಿಸಲಿಲ್ಲ. ನಿಂತು ಯೋಚಿಸಲಿಲ್ಲ, ಹಿಂದು ಮುಂದು ನೋಡಲಿಲ್ಲ. ಅಕ್ಕ ಹೋದಳೆಂದು ಅವನ ಮನಸ್ಸಿಗೆ ತಿಳಿದ ಕ್ಷಣವೇ ಅವನೂ ಹೋಗಿಬಿಟ್ಟ. 'ಹೆಂಗಸು, ಪಾಪ! ಕಾಲು ಜಾರಿ ಬಿದ್ದು ಸತ್ತಿರಬೇಕು, ಆಕೆಯ ತಮ್ಮಂದಿರಾದ ಈ ರಾಜರು ಆ ದುಃಖದಿಂದ ತಾವೂ ಧುಮುಕಿ ಪ್ರಾಣ ಕಳೆದುಕೊಂಡರು!' ಎಂದುಕೊಂಡರು ಗ್ರಾಮವಾಸಿಗಳು. ಅವರಿಗೆಲ್ಲ ಬಹು ದುಃಖವಾಯಿತು, ಬಹು ಸಂಕಟವಾಯಿತು. 'ಅಯ್ಯೋ!ಅಯ್ಯೋ!' ಎಂದು ದುಃಖದಿಂದ, ಭಯದಿಂದ ಅರಚುತ್ತ ಅವರು ದಡದಡನೆ ಬೆಟ್ಟವಿಳಿದು ಶಿವಗಂಗೆ ಊರಿಗೆ ಓಡಿದರು. ಗ್ರಾಮವಾಸಿಗಳ ಪೈಕಿ ಇಬ್ಬರು ಗಂಡಸರು, ಮೆಲ್ಲಗೆ ಆ ಇರುಕುಗಳಲ್ಲೆ ಇಳಿದು, ಆ ಎರಡು ಶರೀರಗಳೂ ಬಿದ್ದಿದ್ದ ಸ್ಥಳವನ್ನು ಸೇರಿ, 'ಯಾರಿಗಾದರೂ ಜೀವವಿದೆಯೇ?' ಎಂದು ನೋಡಿದರು. ಸತ್ತಿದ್ದ ಹೆಂಗಸು ಶ್ರೀ ಮಹಾಲಕ್ಷ್ಮಿಯಂತೆ ಇದ್ದರು. ತಲೆಯ ಒಂದು ಪಾರ್ಶ್ವ ಜಜ್ಜಿಯೋಗಿ, ರಕ್ತಸ್ರಾವವಾಗಿತ್ತು. ರಾಜರೂ ಬಿದ್ದೊಡನೆಯೆ ಒಂದೆರಡಾವರ್ತಿ ಕೈಕಾಲುಗಳನ್ನು ಝಾಡಿಸಿ ತಣ್ಣಗಾಗಿದ್ದರು. ಅಕ್ಕನ ಕಳೇಬರಕ್ಕೆ ಹತ್ತೇ ಅಡಿ ದೂರದಲ್ಲಿ ರಾಜರ ಶವವೂ ಬಿದ್ದಿದ್ದಿತು. ಆ ಇಬ್ಬರು ಗ್ರಾಮವಾಸಿಗಳು ಆ ಘೋರ ದೃಶ್ಯವನ್ನು ಕಂಡು ಎದೆಯೊಡೆದು ಕಣ್ಣೀರು ಸುರಿಸುತ್ತ ಮೂಕರಂತೆ ನಿಂತುಬಿಟ್ಟರು.

# ೪. ತಂತ್ರಜ್ಞಾನ

**ಆಶಯ :**

ನಾವು ಪ್ರತಿದಿನ ಬದಲಾಗುತ್ತಿರುವ ತಂತ್ರಜ್ಞಾನದ ಯುಗದಲ್ಲಿದ್ದೇವೆ. ಕೃಷಿ, ಸಾರಿಗೆ, ಸಂವಹನ ಹೀಗೆ ದಿನನಿತ್ಯದ ಬದುಕಿನಲ್ಲಿ ತಂತ್ರಜ್ಞಾನ ನಮ್ಮ ಒಡನಾಡಿಯಾಗಿದೆ. ಕೃಷಿಯಲ್ಲಿ ತಂತ್ರಜ್ಞಾನ ಅಳವಡಿಸಿ ಹೆಚ್ಚಿನ ಇಳುವರಿ ತೆಗೆಯುತ್ತಿದ್ದೇವೆ. ಹಾಗೆಯೇ ರಾಸಾಯನಿಕಗಳು ಜಾಸ್ತಿಯಾಗಿ ನಮ್ಮ ಆಹಾರವೇ ವಿಷವಾಗುತ್ತಿದೆ.

ಸಾರಿಗೆ ಜೀವನವನ್ನು ಆರಾಮದಾಯಕ ಮಾಡಿದೆ. ಅದೇ ಸಮಯಕ್ಕೆ ಶಬ್ಧ ಮಾಲಿನ್ಯ, ವಾಯು ಮಾಲಿನ್ಯಕ್ಕೆ ಕಾರಣವಾಗಿವೆ.

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನವು ಸಂವಹನವನ್ನು ಹೆಚ್ಚು ಸರಳವಾಗಿಸಿವೆ. ಆದರೆ ನಮ್ಮ ಸೃಜನಶೀಲ ಪ್ರತಿಭೆಯನ್ನು ಕುಂಠಿತಗೊಳಿಸುತಿದೆ.

ಹೀಗೆ ಅನುಕೂಲ ಮತ್ತು ಅನಾನುಕೂಲಗಳಿರುವ ತಂತ್ರಜ್ಞಾನದಿಂದ ದೂರವಿರಲು ಸಾಧ್ಯವೇ ಇಲ್ಲ. ಆದರೆ ಇದನ್ನು ನಮ್ಮ ಬದುಕಿನಲ್ಲಿ ಹಿತಮಿತವಾಗಿ ಬಳಸಿಕೊಂಡರೆ ನಮ್ಮ ಬದುಕು ಸುಖಮಯವಾಗಿರುವುದರಲ್ಲಿ ಸಂಶಯವಿಲ್ಲ.

ತಂತ್ರಜ್ಞಾನದಲ್ಲಿ ಇಂದು ವಿಜ್ಞಾನ, ನ್ಯಾನೋ, ಇ–ತಂತ್ರಜ್ಞಾನ, ಭಾಷಾ, ಪರಿಸರ, ಡಿಜಿಟಲ್ ತಂತ್ರಜ್ಞಾನ ಹೀಗೆ ಪ್ರತಿಯೊಂದು ತಂತ್ರಜ್ಞಾನದ ಮುಖಾಂತರವೇ ನಮಗೆ ದೊರಕುತ್ತಿದೆ.

ಹೀಗೆ ದೊರಕುವ ತಂತ್ರಜ್ಞಾನವನ್ನು ಹೇಗೆ? ಎಷ್ಟು? ಬಳಸಬೇಕೆಂಬ ಅರಿವು ನಮಗಿರಬೇಕು. ಆಧುನಿಕತೆಯು ಹರಡಿರುವ ಬಲೆಯಲ್ಲಿ ತಂತ್ರಜ್ಞಾನವೂ ಒಂದು. ಅದರ ಬಗ್ಗೆ ಗೀಳು ಅಂಟಿಸಿಕೊಳ್ಳದಂತೆ ಬದುಕಬೇಕಾದದ್ದು ನಮ್ಮ ಕೈಯಲ್ಲೇ ಇದೆ.

ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು 'ಹಿನ್ನುಡಿ' ಕವಿತೆಯಲ್ಲಿ ಹೇಳುವಂತೆ

ಅದೂ ಬೇಕು ಇದೂ ಬೇಕು
ಎಲ್ಲವೂ ಬೇಕು ನನಗೆ
ದಾರಿ ನೂರಾರಿವೆ ಬೆಳಕಿನರಮನೆಗೆ !

ನೂರಾರು ಭಾವದ ಭಾವಿ ; ಎತ್ತಿಕೋ
ನಿನಗೆ ಬೇಕಾದಷ್ಟು ಸಿಹಿನೀರ
ಪಾತ್ರೆಯಾಕಾರಗಳ ಕುರಿತು ಏತಕೆ ಜಗಳ?
ನಮಗೆ ಬೇಕಾದದ್ದು ದಾಹ ಪರಿಹಾರ.

# 1. ಒಂದು ರಸ್ತೆ ಮತ್ತು ಹತ್ಯೆ

**– ರಾಜೇಂದ್ರ ಪ್ರಸಾದ್, ಮಂಡ್ಯ**

ಕೊಡಲಿ ಮಚ್ಚು
ಗರಗಸ ಮೆಷಿನು
ಎಷ್ಟೆಲ್ಲಾ ಸಿದ್ದವಾಗಿವೆ
ಇದು ಸತ್ಯದ ಭಯವೊ?
ಅಥವಾ ಸುಳ್ಳಿನ ಕಪಟವೊ?

ಹೊಸ ರಸ್ತೆಗಾಗಿ
ಹಳೆಯ ಮರಗಳನ್ನು
ಅವುಗಳ ಮಕ್ಕಳನ್ನು
ಹುದುಗಿರುವ ಭ್ರೂಣಗಳನ್ನು
ಹುಡುಕಿ ಹುಡುಕಿ ತುಂಡು ಮಾಡಲಾಗುತ್ತಿದೆ
ಮತ್ತೆ ಚಿಗುರದಂತೆ ಬೇರಿಗೂ
ಆಮ್ಲದ ಸಿಂಪರಣೆ.

ಆರು ಪಥಗಳ ಹೊಸರಸ್ತೆ ಬರುತ್ತಿದೆ
ಊರಿನೊಳಗೆ
ಎದೆಯನ್ನು
ಸೀಳಿಕೊಂಡು ಹೋಗುತ್ತದೆ
ರಸ್ತೆ ಏನಿದ್ದರೂ ವಾಹನಗಳಿಗೆ
ಜೀವಗಳಿಗೆ ಅಲ್ಲ!

ಅಲ್ಲೊಂದು ನಾಯಿ
ಇಲ್ಲೊಂದು ಕರು
ಮತ್ತೊಮ್ಮೆ ಮನುಷ್ಯ
ರಸ್ತೆ ರಕ್ತದಾಹ.. ಮುಗಿಯುವುದಿಲ್ಲ

ಉಬ್ಬುಗಳೂ, ನಿಲ್ದಾಣಗಳೂ
ಸರ್ಕಲ್ಲುಗಳು
ಬೇಕಾದಷ್ಟಿವೆ.. ಆದರೆ ಯಾರು ನಿಲ್ಲುವುದಿಲ್ಲ !
ಅಲ್ಲೆಲ್ಲೂ ಮರಗಳು ಇಲ್ಲ

ಹಾಗಾಗಿ ಹೂ-ಹಣ್ಣು ಇಲ್ಲ
ಹಾಗಾಗಿ ಹಕ್ಕಿಗಳು ಇಲ್ಲ
ಹಾಗಾಗಿ ನೆರಳೂ ಇಲ್ಲ
ಹಾಗಾಗಿ ಜನರೂ ಇಲ್ಲ
ಬರಿಯ ರಸ್ತೆ ಹರಿದು ಮಲಗಿದೆ
ಉಂಡು ಉರುಳಿದ ಹೆಬ್ಬಾವಿನಂತೆ !

# ೨. ಆ ಕಸ ಇ ಕಸ!

**– ಟಿ. ಜಿ. ಶ್ರೀನಿಧಿ**

---

ನಿಯಮಿತವಾಗಿ ನಮ್ಮ ಮನೆಗಳಿಂದ ಹೊರಗೆ ಹೋಗುವ ಇಲೆಕ್ಟ್ರಾನಿಕ್ ಉತ್ಪನ್ನಗಳು ಮುಂದೆ ಏನಾಗುತ್ತವೆ ಎನ್ನುವುದರ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವುದೇ ಇಲ್ಲವಲ್ಲ!

ತಂತ್ರಜ್ಞಾನ ನಮ್ಮ ಬದುಕನ್ನು ಆವರಿಸಿಕೊಂಡಿರುವ ಪರಿ ಎಂಥದ್ದು ಎಂದು ತಿಳಿದುಕೊಳ್ಳಬೇಕಾದರೆ ಒಮ್ಮೆ ನಮ್ಮ ಸುತ್ತಮುತ್ತ ಕಣ್ಣಾಡಿಸಿದರೆ ಸಾಕು. ದಿವಾನಖಾನೆಯಲ್ಲಿ ಎಲ್ಇಡಿ ಟಿವಿ, ಒಳಗಿನ ಕೋಣೆಯಲ್ಲೊಂದು ಡೆಸ್ಕ್‌ಟಾಪ್ ಕಂಪ್ಯೂಟರ್, ಕಪಾಟಿನಲ್ಲಿ ಡಿಜಿಟಲ್ ಕ್ಯಾಮೆರಾ, ಮೂಲೆಯಲ್ಲೊಂದು ಲ್ಯಾಪ್‌ಟಾಪ್, ಪಕ್ಕದಲ್ಲಿ ಟ್ಯಾಬ್ಲೆಟ್ಟು – ಇಬುಕ್ ರೀಡರ್, ಜೇಬಿನೊಳಗೊಂದು ಮೊಬೈಲು – ನಮ್ಮ ಮನೆಗಳಲ್ಲಿರುವ ಇಲೆಕ್ಟ್ರಾನಿಕ್ ಉಪಕರಣಗಳು ಒಂದೇ ಎರಡೇ!

ಇದನ್ನೆಲ್ಲ ಒಂದು ಸಾರಿ ಕೊಂಡು ತಂದಿಟ್ಟುಕೊಂಡರೆ ಮುಗಿಯುವುದಿಲ್ಲವಲ್ಲ, ಆರು ತಿಂಗಳೋ ವರ್ಷಕ್ಕೋ ಎರಡು ವರ್ಷಕ್ಕೋ ಮನೆಯಲ್ಲಿರುವ ಇಲೆಕ್ಟ್ರಾನಿಕ್ ಉಪಕರಣಗಳೆಲ್ಲ ಬದಲಾಗುವುದು ಈಗ ಟ್ರೆಂಡ್ ಅನಿಸಿಕೊಂಡುಬಿಟ್ಟಿದೆ. ಇರುವುದರ ಜಾಗಕ್ಕೆ ಹೊಸದು ಬರುವುದಷ್ಟೇ ಅಲ್ಲ, ಹೊಸ ಉಪಕರಣಗಳೂ ಆಗಿಂದಾಗ್ಗೆ ಮನೆಯೊಳಕ್ಕೆ ಬರುತ್ತಲೇ ಇರುತ್ತವೆ.

ಹೊಸ ಉಪಕರಣ ಬಂದಮೇಲೆ ಹಳೆಯದಕ್ಕೇನು ಕೆಲಸ? ಎಕ್ಸ್‌ಚೇಂಜೋ, ಸೆಕೆಂಡ್ ಹ್ಯಾಂಡ್ ಮಾರಾಟವೋ ಯಾವುದೋ ಒಂದು ಮಾರ್ಗದಲ್ಲಿ ಹಳೆಯದನ್ನು ನಾವು ಮನೆಯಿಂದ ಆಚೆ ಹಾಕುತ್ತೇವೆ. ಉಪಯೋಗಿಸಿ ಬೇಸರವಾದ, ಆದರೆ 'ರೀಸೇಲ್ ವ್ಯಾಲ್ಯೂ' ಇಲ್ಲದ ಉಪಕರಣಗಳನ್ನು ಬೇರೆಯವರಿಗೆ ಕೊಟ್ಟು ಕೈತೊಳೆದುಕೊಳ್ಳುವುದೂ ಉಂಟು. ಹಾಗೊಮ್ಮೆ ಯಾವುದಾದರೂ ಹಳೆಯ ಉಪಕರಣ ಮನೆಯಲ್ಲೇ ಉಳಿದುಕೊಂಡರೂ ಶ್ರೀಘ್ರದಲ್ಲೇ ಅದಕ್ಕೆ ಗೇಟ್‌ಪಾಸ್ ಸಿಗುವುದು ಗ್ಯಾರಂಟಿ!

ಹೇಗಾದರೂ ಮಾಡಿ ಹಳೆಯ ಇಲೆಕ್ಟ್ರಾನಿಕ್ ಉಪಕರಣಗಳನ್ನು ಒಮ್ಮೆ ಮನೆಯಿಂದಾಚೆಗೆ ಕಳುಹಿಸುತ್ತಿದ್ದಂತೆ ನಮಗೆ ನೆಮ್ಮದಿ. ಬೇಡದ ವಸ್ತು ಆಚೆಹೋದ ಸಮಾಧಾನ ಅಷ್ಟೇ ಅಲ್ಲ, ಔಟ್‌ಡೇಟಡ್ ವಸ್ತು ಮನೆಯಲ್ಲಿದ್ದದ್ದನ್ನು ನೋಡಿದರೆ ಯಾರೇನು ಅಂದುಕೊಳ್ಳುವರೋ ಎಂಬ ಅಂಜಿಕೆಯಿಂದಲೂ ಮುಕ್ತಿ ಸಿಗುತ್ತದಲ್ಲ!

ಅಷ್ಟೇ ಅಲ್ಲ, ನಾವು ಉಪಯೋಗಿಸ್ತುತ್ತಿರುವ ಉಪಕರಣಗಳ ಕೆಟ್ಟುಹೋದ ಬಿಡಿಭಾಗಗಳೂ ಮನೆಯಿಂದಾಚೆ ಹೋಗಲೇಬೇಕು. ಇನ್ನು ಕೆಲಸಮಾಡದ ಬಲ್ಬು–ಟ್ಯೂಬ್‌ಲೈಟು, ಬೇಡದ ಸಿಡಿ–ಡಿವಿಡಿ ಇತ್ಯಾದಿ ಸಣ್ಣಪುಟ್ಟ ವಸ್ತುಗಳಂತೂ ಆಗಿಂದಾಗ್ಗೆ ಕಸದಬುಟ್ಟಿ ಸೇರುತ್ತಲೇ ಇರುತ್ತವೆ.

ಆದರೆ ಹೀಗೆ ಮನೆಯಿಂದಾಚೆ ಹೋಗುವ ಇಲೆಕ್ಟ್ರಾನಿಕ್ ಉತ್ಪನ್ನಗಳು ಮುಂದೆ ಏನಾಗುತ್ತವೆ ಎನ್ನುವುದರ ಬಗ್ಗೆ ನಾವು ಯಾರೂ ತಲೆಕೆಡಿಸಿಕೊಳ್ಳುವುದೇ ಇಲ್ಲ. ನಮ್ಮಂತಹ ಸಾಮಾನ್ಯರಷ್ಟೇ ಅಲ್ಲ, ಇಂತಹ ಉಪಕರಣಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಸುವ–ಬಿಸಾಡುವ ಸಂಸ್ಥೆಗಳೂ ಈ ಬಗ್ಗೆ ವಹಿಸುವ ಕಾಳಜಿ ಅಷ್ಟಕ್ಕಷ್ಟೇ.

ಹೀಗಾಗಿಯೇ ಇಂತಹ ಹಳೆಯ, ನಿರುಪಯುಕ್ತ ಇಲೆಕ್ಟ್ರಾನಿಕ್ ಉತ್ಪನ್ನಗಳು ಈಗೊಂದು ದೊಡ್ಡ ಸಮಸ್ಯೆಯಾಗಿ ಬೆಳೆದುನಿಂತಿವೆ: ಅನೇಕರ ಆರೋಗ್ಯ ಹಾಳುಮಾಡುತ್ತಿವೆ, ನಮ್ಮ ಭೂಮಿಗೇ ದೊಡ್ಡದೊಂದು ತಲೆನೋವು ತಂದಿಟ್ಟಿವೆ.

ಇದು ಇಲೆಕ್ಟ್ರಾನಿಕ್ ವೇಸ್ಟ್, ಅಂದರೆ ಇ–ಕಸದ ಕತೆ.

**ಕಸದ ಹೈಟೆಕ್ ರೂಪ** ನಿರುಪಯುಕ್ತವೆಂದು ನಾವು ಆಚೆಹಾಕುವ ಇ-ಕಸ ಇಷ್ಟೊಂದು ಹಾನಿಕಾರಕವೆಂದಾದರೆ ವಿದ್ಯುನ್ಮಾನ ಉಪಕರಣಗಳಲ್ಲಿ ಸಾಕಷ್ಟು ಹಾನಿಕಾರಕ ಪದಾರ್ಥಗಳಿವೆ ಎಂದಾಯಿತು. ಇಷ್ಟಕ್ಕೂ ಅವುಗಳಲ್ಲಿ ಇರುವುದಾದರೂ ಏನು?

ಉದಾಹರಣೆಗೆ ನಮಗೆಲ್ಲ ಪರಿಚಯವಿರುವ ಕಂಪ್ಯೂಟರನ್ನೋ ಮೊಬೈಲ್ ಫೋನನ್ನೋ ತೆಗೆದುಕೊಳ್ಳುವುದಾದರೆ ಅವುಗಳಲ್ಲಿ ಬಹುದೊಡ್ಡ ಸಂಖ್ಯೆಯ ಬಿಡಿಭಾಗಗಳಿರುತ್ತವೆ. ಸಹಜವಾಗಿಯೇ ಅಂತಹ ಪ್ರತಿಯೊಂದು ಬಿಡಿಭಾಗವನ್ನೂ ಪ್ಲಾಸ್ಟಿಕ್‌ನಿಂದ ಚಿನ್ನದವರೆಗೆ ಅನೇಕ ವಸ್ತುಗಳನ್ನು ಬಳಸಿ ರೂಪಿಸಲಾಗಿರುತ್ತದೆ. ನಾವು ಗಮನಿಸದ ಅಂಶವೆಂದರೆ ಈ ವಸ್ತುಗಳ ಪೈಕಿ ಅನೇಕ ವಿಷಕಾರಿ ಅಂಶಗಳೂ ಇರುತ್ತವೆ. ಪಾದರಸ, ಸೀಸ, ಕ್ಯಾಡ್ಮಿಯಂ, ಪಿವಿಸಿ – ಹೀಗೆ ಸಾಗುವ ಈ ಹೆಸರುಗಳ ಪಟ್ಟಿಯಲ್ಲಿ ನಮಗೆ ಅಷ್ಟಾಗಿ ಪರಿಚಯವಿರದ, ಆದರೆ ಆರೋಗ್ಯಕ್ಕೆ ತೀವ್ರ ಹಾನಿಮಾಡಬಲ್ಲ ರಾಸಾಯನಿಕಗಳೂ ಇವೆ. ಆರೋಗ್ಯದ ಮೇಲೆ ಪಾದರಸ–ಸೀಸ ಇತ್ಯಾದಿಗಳ ಪರಿಣಾಮವನ್ನಂತೂ ಹೇಳುವುದೇ ಬೇಕಿಲ್ಲವಲ್ಲ!

ಆದರೆ ಇಲೆಕ್ಟ್ರಾನಿಕ್ ಉಪಕರಣಗಳೊಳಗೆ ತಮ್ಮ ಕೆಲಸಮಾಡಿಕೊಂಡಿರುವ ಇವೆಲ್ಲ ವಸ್ತುಗಳೂ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವಂತಾಗುವುದು ಯಾವಾಗ, ಮತ್ತು ಏಕೆ ಎನ್ನುವುದು ಇನ್ನೊಂದು ಪ್ರಶ್ನೆ.

**ಕಸ ನಿರ್ವಹಿಸುವ ಕೆಲಸ** ಇ–ಕಸದಿಂದ ಉಪಯುಕ್ತ ವಸ್ತುಗಳನ್ನು ಅದರಿಂದ ಬೇರ್ಪಡಿಸಿ ಮರುಬಳಕೆ ಮಾಡುವುದು, ಹಾಗೂ ನಿರುಪಯುಕ್ತ ಭಾಗಗಳನ್ನು ಸೂಕ್ತವಾಗಿ ವಿಲೇವಾರಿ ಮಾಡುವುದು ಪರಿಸರದ ದೃಷ್ಟಿಯಿಂದ ಮಾತ್ರವಲ್ಲ, ಆರ್ಥಿಕವಾಗಿಯೂ ಸಾಕಷ್ಟು ಲಾಭದಾಯಕ. ಅಷ್ಟೇ ಅಲ್ಲ, ನವೀಕರಿಸಲಾಗದ ಸಂಪನ್ಮೂಲಗಳ (ಉದಾ:ಗ್ಯಾಲಿಯಂ, ಇಂಡಿಯಂ ಮುಂತಾದ ವಿರಳ ಧಾತುಗಳು, ಅಂದರೆ ರೇರ್ ಅರ್ಥ್ ಎಲಿಮೆಂಟ್ಸ್) ದೃಷ್ಟಿಯಿಂದ ನೋಡಿದರೆ ಮರುಬಳಕೆ ಅನಿವಾರ್ಯವೂ ಹೌದು. ಅತ್ಯಲ್ಪ ಪ್ರಮಾಣದಲ್ಲಿ ದೊರಕುವ ಈ ಸಂಪನ್ಮೂಲಗಳನ್ನು ಮರುಬಳಕೆ ಮಾಡದೆ ಹೋದರೆ ಅವುಗಳ ಸಂಗ್ರಹವೆಲ್ಲ ಕೆಲವೇ ವರ್ಷಗಳಲ್ಲಿ ಮುಗಿದೇಹೋಗುತ್ತದೆ!

ಆದರೆ ಇ–ಕಸ ನಿರ್ವಹಣೆಯ ಕ್ಷೇತ್ರದಲ್ಲಿ ನೈಜ ಪರಿಸ್ಥಿತಿ ಬೇರೆಯೇ ಇದೆ. ಬಹಳಷ್ಟು ಕಡೆಗಳಲ್ಲಿ ಇ–ಕಸದ ನಿರ್ವಹಣೆಗೆ ಸೂಕ್ತ ವ್ಯವಸ್ಥೆಯೇ ಇಲ್ಲ. ಹೀಗಾಗಿ ಉತ್ಪತ್ತಿಯಾಗುವ ಇ–ಕಸದ ಬಹುಪಾಲಿನ ಮರುಬಳಕೆ ಅತ್ಯಂತ ಅವೈಜ್ಞಾನಿಕವಾಗಿ ನಡೆಯುತ್ತಿದೆ.

ಇಲೆಕ್ಟ್ರಾನಿಕ್ ತ್ಯಾಜ್ಯದಲ್ಲಿರುವ ವಿಷಕಾರಿ ಅಂಶಗಳ ಬಗ್ಗೆ ಗಮನವನ್ನೇ ನೀಡದ ಈ ನಿರ್ವಹಣೆಯಲ್ಲಿ ಪರಿಸರದ ಬಗೆಗಾಗಲಿ, ಕೆಲಸಗಾರರ ಆರೋಗ್ಯದ ಬಗೆಗಾಗಲಿ ಯಾವ ಕಾಳಜಿಯೂ ಕಾಣಸಿಗುವುದಿಲ್ಲ.

ತೀರಾ ಕಡಿಮೆ ಸಂಬಳಕ್ಕೆ ದುಡಿಯುವ ಕೆಲಸಗಾರರು – ಕೆಲವೊಮ್ಮೆ ಮಕ್ಕಳೂ – ಇಲೆಕ್ಟ್ರಾನಿಕ್ ಕಸದ ನಿರ್ವಹಣೆಯಲ್ಲಿ ತೊಡಗಿಕೊಂಡು ಅತ್ಯಂತ ಅವೈಜ್ಞಾನಿಕ ಕ್ರಮಗಳನ್ನು ಬಳಸಿ ಇ–ಕಸದಿಂದ ಬೆಲೆಬಾಳುವ ಪದಾರ್ಥಗಳನ್ನು ಬೇರ್ಪಡಿಸಲು ಪ್ರಯತ್ನಿಸುತ್ತಾರೆ. ಈ ಪೈಕಿ ಪ್ಲಾಸ್ಟಿಕ್–ಪಿವಿಸಿ ಇತ್ಯಾದಿಗಳಿಂದ ತಯಾರಾದ ಭಾಗಗಳಿಗೆ ಅವರು ಬೆಂಕಿಹಚ್ಚಿ ಸುಟ್ಟಾಗ ತಾಮ್ರವನ್ನೋ ಇನ್ನಾವುದೋ ಲೋಹವನ್ನೋ ಬೇರ್ಪಡಿಸುವುದು ಸುಲಭವಾಗುತ್ತದೆ ನಿಜ, ಆದರೆ ಅದೇ ಸಮಯದಲ್ಲಿ ವಿಷಕಾರಿ ರಾಸಾಯನಿಕಗಳು ನಮ್ಮ ವಾತಾವರಣವನ್ನು ಕಲುಷಿತಗೊಳಿಸುತ್ತವೆ. ಇದರ ಮೊದಲ ನೇರ ಪರಿಣಾಮ ಆಗುವುದು ಇಲೆಕ್ಟ್ರಾನಿಕ್ ಕಸದ ನಿರ್ವಹಣೆಯಲ್ಲಿ ತೊಡಗಿಕೊಂಡಿರುವವರ ಮೇಲೆಯೇ! ಈ ಪ್ರಯತ್ನದ ನಂತರ ಅಳಿದುಳಿದ ನಿರುಪಯುಕ್ತ ಭಾಗಗಳನ್ನು ಬೇಕಾಬಿಟ್ಟಿಯಾಗಿ ಎಸೆದರೆಂದರೆ ಅದರಲ್ಲಿನ ವಿಷಪದಾರ್ಥಗಳು ಅಂತರ್ಜಲಕ್ಕೆ ಸೇರಿದರೂ ಸೇರಿದವೇ.

ಸೇರಿದರೆ ಸೇರಲಿ ಎಂದು ಉದಾಸೀನ ಮಾಡುವಂತೆಯೂ ಇಲ್ಲ, ಏಕೆಂದರೆ ಈ ಪದಾರ್ಥಗಳಿಂದ ಉಂಟಾಗುವ ದುಷ್ಪರಿಣಾಮಗಳು ಬಹಳ ಗಂಭೀರವಾದವು. ಸೀಸದಿಂದ ನರಮಂಡಲ ಹಾಗೂ ಸಂತಾನೋತ್ಪತ್ತಿ ಸಾಮರ್ಥ್ಯಕ್ಕೆ ಧಕ್ಕೆಯಾದರೆ ಲ್ಯಾಪ್‌ಟಾಪ್ ಬ್ಯಾಟರಿಯಲ್ಲಿರುವ ಕ್ಯಾಡ್ಮಿಯಂನಿಂದ ಕಿಡ್ನಿ ಮತ್ತು ಮೂಳೆಗಳಿಗೆ ಹಾನಿಯಾಗುತ್ತದೆ.

ಇನ್ನು ಪಾದರಸವಂತೂ ನೇರ ಮೆದುಳಿನ ಮೇಲೆಯೇ ದಾಳಿಮಾಡುತ್ತದೆ. ಪಾಲಿವಿನೈಲ್ ಕ್ಲೋರೈಡ್ (ಪಿವಿಸಿ) ಸುಟ್ಟಾಗ ಹೊರಬರುವ ರಾಸಾಯನಿಕಗಳೂ ತೀರ್ವ ವಿಷವೇ. ಕಂಪ್ಯೂಟರಿನಲ್ಲಿ ಬಳಕೆಯಾಗುವ ಕೆಲ ಬೆಂಕಿ ನಿರೋಧಕ

ವಸ್ತುಗಳ ಗಭದಲ್ಲಿರುವ ಮಗುವಿನ ಮೇಲೂ ದುಷ್ಪರಿಣಾಮ ಬೀರುತ್ತವಂತೆ. ಇ-ಕಸದಲ್ಲಿರುವ ಹಲವು ವಸ್ತುಗಳು ಕ್ಯಾನ್ಸರ್ ಅನ್ನೂ ಉಂಟುಮಾಡಬಲ್ಲವು.

ಈ ಸಮಸ್ಯೆಗಳನ್ನು ಅರ್ಥಮಾಡಿಕೊಂಡಿರುವ ಕೆಲ ಮುಂದುವರೆದ ರಾಷ್ಟ್ರಗಳು ಅದನ್ನು ನಿವಾರಿಸಲು ಪ್ರಯತ್ನಿಸುವ ಬದಲು ನಮ್ಮ ಕಸವನ್ನೆಲ್ಲ ಅಭಿವೃದ್ಧಿಶೀಲ ದೇಶಗಳತ್ತ ಸಾಗಹಾಕಿ ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸುತ್ತಿವೆ.

**ಸಮಸ್ಯೆಗೆ ಪರಿಹಾರ** ಇ-ಕಸ ನಿರ್ವಹಣೆ ಕುರಿತಾದ ಕಠಿಣ ನಿಯಮಗಳಿಲ್ಲದಿರುವುದೂ ಒಂದು ಜಾಗತಿಕ ಸಮಸ್ಯೆಯೇ. ಬ್ಯಾಸೆಲ್ ಒಪ್ಪಂದದಲ್ಲಿ ಇಲೆಕ್ಟ್ರಾನಿಕ್ ಕಸ ನಿರ್ವಹಣೆಯ ಕುರಿತು ಕೆಲ ಅಂತರಾಷ್ಟ್ರೀಯ ನಿಬಂಧನೆಗಳಿವೆಯಾದರೂ ಅಮೆರಿಕಾದಂತಹ ರಾಷ್ಟ್ರವೇ ಆ ಒಪ್ಪಂದಕ್ಕೆ ಸಹಿ ಹಾಕಿಲ್ಲ. ಮಾತ್ರವಲ್ಲ, ತನ್ನ ದೇಶದೊಳಗೂ ಅಂತಹ ಕಟ್ಟುನಿಟ್ಟಿನ ಕಾನೂನನ್ನೇನೂ ರೂಪಿಸಿಲ್ಲ. ಇನ್ನು ನಮ್ಮ ದೇಶದಲ್ಲಿ ಇ-ಕಸ ನಿಯಂತ್ರಣ ಹಾಗೂ ನಿರ್ವಹಣೆ ಕುರಿತಾದ ನಿಯಮ ೨೦೧೧ರಲ್ಲೇ ಜಾರಿಯಾಗಿದ್ದರೂ ಅದರ ಅನುಷ್ಠಾನ ಹೇಳಿಕೊಳ್ಳುವ ಮಟ್ಟದಲ್ಲೇನೂ ಆಗಿಲ್ಲ. ಇದ್ದುದರಲ್ಲಿ ಯುರೋಪಿಯನ್ ಒಕ್ಕೂಟದ ಪರಿಸ್ಥಿತಿಯೊಂದು ಕೊಂಚ ಉತ್ತಮವಾಗಿದೆ ಎನ್ನಬಹುದೇನೋ ಅಷ್ಟೆ.

ಹಾಗಾಗಿ ವಿಶ್ವದಾದ್ಯಂತ ಇ-ಕಸ ನಿರ್ವಹಣೆಯ ಪ್ರಕ್ರಿಯೆಯನ್ನು ಹೆಚ್ಚು ಸಮರ್ಥವನ್ನಾಗಿ ಮಾಡಬೇಕಾದ್ದು ಇಂದಿನ ಅಗತ್ಯವಷ್ಟೇ ಅಲ್ಲ, ಅನಿವಾರ್ಯವೂ ಆಗಿದೆ. ಇದು ಇಲೆಕ್ಟ್ರಾನಿಕ್ ಉಪಕರಣಗಳ ಉತ್ಪಾದನೆಯಿಂದ ಪ್ರಾರಂಭಿಸಿ ನಿವೃತ್ತಿಯಾದಾಗ ಅವನ್ನು ಮನೆಯಿಂದ ಆಚೆಹಾಕುವವರೆಗೆ ಪ್ರತಿಯೊಂದು ಹಂತದಲ್ಲೂ ಆಗಬೇಕಾದ ಕೆಲಸ.

ಮೊದಲ ಬದಲಾವಣೆಯಾಗಬೇಕಿರುವುದು ಇಲೆಕ್ಟ್ರಾನಿಕ್ ಉಪಕರಣಗಳ ವಿನ್ಯಾಸದ ಪ್ರಕ್ರಿಯೆಯಲ್ಲೇ ಎಂದು ತಜ್ಞರು ಹೇಳುತ್ತಾರೆ. ಉಪಕರಣಗಳ ವಿನ್ಯಾಸ ಮರುಬಳಕೆಗೆ ಪೂರಕವಾಗಿದ್ದರೆ ಅವುಗಳ ವಿಲೇವಾರಿ ಅಷ್ಟುಮಟ್ಟಿಗೆ ಸುಲಭವಾಗುತ್ತದೆ ಎನ್ನುವುದು ಅವರ ಅಭಿಪ್ರಾಯ. ವಿಷಪದಾರ್ಥಗಳ ಬದಲು ಪರಿಸರ ಸ್ನೇಹಿ ಸಾಮಗ್ರಿಗಳ ಬಳಕೆಯೂ ಈ ನಿಟ್ಟಿನಲ್ಲಿ ನೆರವಾಗಬಲ್ಲದು. ಉಪಕರಣಗಳ ನಿರ್ಮಾತೃಗಳೇ ತಮ್ಮ ಹಳೆಯ ಉತ್ಪನ್ನಗಳನ್ನು ಮರಳಿ ಪಡೆಯುವ ಪರಿಣಾಮಕಾರಿ ವ್ಯವಸ್ಥೆ ಬಂದರೆ ಅದೂ ಬಹುದೊಡ್ಡ ಸಾಧನೆಯಾಗಬಲ್ಲದು. ಸದ್ಯಕ್ಕೆ ನಮ್ಮ ದೇಶದ ಮಟ್ಟಿಗಂತೂ ಈ ವ್ಯವಸ್ಥೆ ಬಹುತೇಕ ಕಾಗದದ ಮೇಲಷ್ಟೆ ಉಳಿದುಬಿಟ್ಟಿದೆ.

ಹಾಗೆಯೇ ಬಳಕೆದಾರರು ಕೂಡ ತಮಗೆ ಬೇಡವಾದ ವಸ್ತುಗಳನ್ನು ವಿಲೇವಾರಿ ಮಾಡುವಾಗ ಸೂಕ್ತ ಎಚ್ಚರಿಕೆ ವಹಿಸಬೇಕು ಎಂದು ತಜ್ಞರು ಸಲಹೆಮಾಡುತ್ತಾರೆ.

ಆದರೆ ಇ-ಕಸ ವಿಲೇವಾರಿಗೆ ಸೂಕ್ತ ವ್ಯವಸ್ಥೆ ರೂಪಿಸಿ ಆ ಕುರಿತು ವ್ಯಾಪಕ ಜಾಗೃತಿ ಮೂಡಿಸದ ಹೊರತು ಈ ನಿಟ್ಟಿನಲ್ಲಿ ಹೆಚ್ಚಿನ ಕೆಲಸವೇನೂ ಆಗಲಾರದು. ಉದಾಹರಣೆಗೆ ಮನೆಯಲ್ಲಿರುವ ಹಳೆಯ ಪ್ರಿಂಟರ್ ಎಸೆಯಲು ಹೊರಟ ವ್ಯಕ್ತಿಗೆ ಅದರ ಸೂಕ್ತ ವಿಲೇವಾರಿ ಎಲ್ಲಿ ಆಗಬಹುದು ಎಂದು ಗೊತ್ತಿಲ್ಲದಿದ್ದರೆ ಆತ ಅದನ್ನು ಹಳೆ ಪ್ಲಾಸ್ಟಿಕ್ ಮಾರಾಟಗಾರನಿಗೇ ಕೊಡುತ್ತಾನೆ ಅಷ್ಟೆ.

ವಿವಿಧ ಸೌಕರ್ಯಗಳನ್ನು ನೀಡಿ ನಮ್ಮ ಬದುಕನ್ನು ಉತ್ತಮಗೊಳಿಸುತ್ತಿರುವ ಇಲೆಕ್ಟ್ರಾನಿಕ್ ಉಪಕರಣಗಳು ತಮ್ಮ ನಿವೃತ್ತಿಯ ನಂತರದಲ್ಲಿ ನಮ್ಮ ಬದುಕಿನ ಮೇಲೆ ತೀವ್ರ ದುಷ್ಪರಿಣಾಮ ಬೀರುವ ಗಂಭೀರ ಸಾಧ್ಯತೆಯನ್ನೂ ತೋರಿಸಿಕೊಡುತ್ತಿವೆ. ಈ ಸಮಸ್ಯೆಯನ್ನು ಎಷ್ಟು ಬೇಗ ಎಷ್ಟು ಸಮರ್ಥವಾಗಿ ನಿವಾರಿಸುತ್ತೇವೋ ಅದು ನಮಗೇ ಬಿಟ್ಟದ್ದು; ಏಕೆಂದರೆ ಈ ಉಪಕರಣಗಳನ್ನು ಬಳಸುವವರೂ ನಾವೇ, ಅವುಗಳ ದುಷ್ಪರಿಣಾಮಗಳನ್ನು ಎದುರಿಸಬೇಕಾದವರೂ ನಾವೇ!

# 3. ಅಮೈ ಮಹಾಲಿಂಗ ನಾಯ್ಕ

**– ಪತ್ರಿಕಾ ವರದಿಯಿಂದ ಆಯ್ದ ಲೇಖನ**

**ಭಗೀರಥನಿಗೆ ಒಲಿದ ಪದ್ಮಶ್ರೀ**

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೋಕಿನ ಅಡ್ಯನಡ್ಕ ಸಮೀಪದ ಅಮೈ ನಿವಾಸಿ ಮಹಾಲಿಂಗ ನಾಯ್ಕ ಇವರು ಎಲೆಯ ಮರೆಯ ಕಾಯಿಯಂತೆ ತಮ್ಮ ಕೆಲಸ ಮಾಡಿಕೊಂಡು ಇದ್ದವರು. ಅವರ ಛಲಬಿಡದ ಸಾಧನೆಯನ್ನು ಗುರುತಿಸಿ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ.

ಎಪ್ಪತ್ತುನಾಲ್ಕು ವರ್ಷದ ಹರೆಯ ಮಹಾಲಿಂಗ ನಾಯ್ಕ ಅವರು ಜೀವಜಲ ಪಡೆಯುವುದಕ್ಕಾಗಿ ಹಾಕಿರುವ ಶ್ರಮ ಮಾತ್ರ ಎಲ್ಲರನ್ನು ನಿಬ್ಬೆರಗರನ್ನಾಗಿಸುತ್ತದೆ. ಏಕಾಂಗಿಯಾಗಿ ಇವರು ಅಪೂರ್ವ ಮತ್ತು ಅಪಾಯಕಾರಿಯಾದ ಕೆಲಸದ ಮೂಲಕ ಜೀವಜಲವನ್ನು ತರಿಸಿ ಬೋಳು ಗುಡ್ಡೆಯನ್ನು ನಂದನವನ ಮಾಡಿದ್ದಾರೆ.

ಕೃಷಿಗೆ ನೀರು ಹಾಯಿಸಲು ಪಂಪ್ ಸೆಟ್‌ಗಳ ಸೌಲಭ್ಯಗಳೇ ಇಲ್ಲದ ಕಾಲದಲ್ಲಿ ಹಿಂದಿನ ತಲೆಮಾರಿನವರು ಅವಲಂಭಿಸಿದ್ದ ಸುರಂಗ ನೀರಿನ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟು ಇವರು ಯಶಸ್ವಿಯಾಗಿದ್ದಾರೆ. ಇದೇ ವ್ಯವಸ್ಥೆಯಲ್ಲಿ ವಿದ್ಯುತ್‌ರಹಿತವಾಗಿ ಗ್ರಾವಿಟಿ ನೆರವಿನಲ್ಲಿ ಕೃಷಿಗೆ ತುಂತುರು ನೀರಾವರಿ, ಸ್ಪ್ರಿಂಕ್ಲರ್ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಯಶಸ್ವಿಯಾಗಿರುವ ಮಹಾಲಿಂಗ ನಾಯ್ಕ ಏಕಾಂಗಿಯಾಗಿ ಸುರಂಗಗಳನ್ನು ಕೊರೆದ ಒನ್ ಮ್ಯಾನ್ ಅರ್ಮಿ.

ಕುಡಿಯುವ ನೀರಿಗಾಗಿ ಮೂರು ಕಿ.ಮೀ. ದೂರದ ಮನೆಯವರನ್ನು ಆಶ್ರಯಿಸಿದ್ದ ಮಹಾಲಿಂಗ ನಾಯ್ಕರಿಗೆ ಬಾವಿ ತೋಡಿಸಲು ಕೈಯಲ್ಲಿ ದುಡ್ಡಿರಲಿಲ್ಲ. ಆಗ ಅವರಿಗೆ ಹೊಳೆದದ್ದು ಸುರಂಗ ಕೊರೆಯುವುದು. ಅರ್ಧ ದಿನ ಕೂಲಿ ಕೆಲಸ, ಉಳಿದರ್ಧ ದಿನ ಮತ್ತು ರಾತ್ರಿ ಹೊತ್ತು ಸುರಂಗ ಕೊರೆಯುವ ಮೂಲಕ ಜೀವಜಲ ಹುಡುಕುವ ಭಗೀರಥ ಪ್ರಯತ್ನ ಮಾಡುತ್ತಿದ್ದರು. ನಾಯ್ಕರಿಗೆ ಮೊದಲು ೩೦ ಮೀಟರ್  ಉದ್ದದ ಸುರಂಗ ಕೊರೆದರೂ ನೀರು ಸಿಗಲಿಲ್ಲ.

ಇದರಿಂದ ನಿರಾಸೆಯಾಗದ ಅವರು ಮತ್ತೆ ಪ್ರಯತ್ನ ಮುಂದುವರೆಸಿ ತೆಂಗಿನೆಣ್ಣೆಯ ದೀಪದ ಬೆಳಕಿನಲ್ಲಿ ಪ್ರತಿವರ್ಷ ತಲಾ ಒಂದರಂತೆ ೨೫-೩೦ ಮೀಟರ್ ಉದ್ದದ ಸತತ ಐದು ಸುರಂಗಗಳನ್ನು ಕೊರೆದರು. ೬೨ ಮೀಟರ್ ಉದ್ದದ ಆರನೇ ಸುರಂಗದ ಪ್ರಯತ್ನ ಫಲ ನೀಡಿತು. ಹೀಗೆ ಬರಡಾದ ಭೂಮಿಯಲ್ಲಿ ಜಲ ಕ್ರಾಂತಿ ಮಾಡಿದ ಮಹಾಲಿಂಗ ನಾಯ್ಕರಿಗೆ ಈಗ ದೇಶದ ಅತ್ಯುನ್ನತ ನಾಲ್ಕನೇ ನಾಗರಿಕ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿ ಲಭ್ಯವಾಗಿದೆ.

ಮಹಾಲಿಂಗ ನಾಯ್ಕರಿಗೆ ಬಾವಿ ತೋಡಿಸಲು ಕೈಯಲ್ಲಿ ದುಡ್ಡಿರಲಿಲ್ಲ. ಬಾವಿ ತೋಡಿದರೆ ನೀರು ದೊರೆಯುವ ಸಾಧ್ಯತೆಯೂ ಇರಲಿಲ್ಲ. ಏಕಾಂಗಿಯಾಗಿ ಬಾವಿ ತೋಡುವುದು ಅಸಾಧ್ಯದ ಮಾತು. ಆಗ ಅವರಿಗೆ ಹೊಳೆದುದು ಸುರಂಗ ಕೊರೆತ. ಅವರ ಈ ಪ್ರಯತ್ನವನ್ನು ನೋಡಿ ಹಲವರು ಗೇಲಿ ಮಾಡಿದ್ದರು. ಯಾರು ಏನು ಹೇಳಿದರೂ ತನ್ನ ಪ್ರಯತ್ನವನ್ನು ನಿಲ್ಲಿಸದೆ ಮುಂದುವರಿಸಿದ ನಾಯ್ಕರಿಗೆ ಆರನೇ ಪ್ರಯತ್ನ ಫಲ ನೀಡಿತು. ಈ ಪ್ರಯತ್ನದಲ್ಲಿ ನೀರು ಕಾಣಿಸಿತು. ೨೫ ಮೀಟರ್ ಉದ್ದದ ಸುರಂಗದಲ್ಲಿ ಸಿಕ್ಕಿದ ನೀರಿನಲ್ಲಿ ಕೃಷಿ ಸಾಧ್ಯವಿಲ್ಲ ಎನ್ನುವುದು ಅವರಿಗೆ ಅರಿವಾಯಿತು. ಆರನೇ ಸುರಂಗದ ಪಕ್ಕದಲ್ಲಿ ಇನ್ನೊಂದು ಸುರಂಗ ಕೊರೆದರು. ೨೫ ಮೀಟರ್ ತಲುಪುವಾಗ ನೀರು ಕಾಣಿಸಿಕೊಂಡಿತು. ಮತ್ತೆ ಮುಂದುವರಿಸಿ ೭೫ ಮೀಟರ್ ಉದ್ದದ ಸುರಂಗವಾಗುವ ಹೊತ್ತಿಗೆ ಯಥೇಚ್ಛ ನೀರು ಸಿಕ್ಕಿತು. ಆಗ ಅವರ ತೋಟದ ಕನಸು ಮತ್ತೆ ಗರಿಗೆದರಿತು. ಸುರಂಗದ ನೀರನ್ನು ಸಂಗ್ರಹಿಸಲು ಮಣ್ಣಿನ ಟ್ಯಾಂಕ್ ನಿರ್ಮಿಸಿದರು. ಭತ್ತ, ಅಡಿಕೆ, ತೆಂಗು, ಬಾಳೆ ಕೃಷಿ ಕೈಗೊಂಡರು. ಮಡದಿ ಲಲಿತ ಹಾಗೂ ಮೂವರು ಮಕ್ಕಳು ಇವರ ಈ ಪ್ರಯತ್ನಕ್ಕೆ ಕೈ ಜೋಡಿಸಿದರು.

ಕೃಷಿಯಿಂದ ಆದಾಯ ಬರುತ್ತಿದ್ದರೂ ಅವರು ಹಿಂದಿನ ದುಡಿಮೆಯ ಕಾಯಕವನ್ನು ನಿಲ್ಲಿಸಿರಲಿಲ್ಲ. ಹದಿನಾಲ್ಕು ವರ್ಷಗಳ ಹಿಂದೆ ನೆಗಳಗುಳಿ ಎಂಬಲ್ಲಿ ಕೃಷಿಕರೊಬ್ಬರ ತೋಟದಲ್ಲಿ ತೆಂಗಿನ ಮರ ಹತ್ತುತ್ತಿದ್ದಾಗ ಮಹಾಲಿಂಗ ನಾಯ್ಕ ಆಕಸ್ಮಿಕವಾಗಿ ಜಾರಿ ಬಿದ್ದು ಗಾಯಗೊಂಡರು. ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆ ಸೇರಿದ ಮಹಾಲಿಂಗ ನಾಯ್ಕ ಮೂರು

ತಿಂಗಳು ಆಸ್ಪತ್ರೆಯಲ್ಲಿದ್ದರು. ಬಳಿಕ ಮನೆಗೆ ಮರಳಿದ್ದರೂ ಚೇತರಿಸಿಕೊಳ್ಳುವ ಹೊತ್ತಿಗೆ ಒಂದು ವರ್ಷ ಕಳೆದಿತ್ತು. ದುಡಿದು ಉಳಿಸಿದ ಹಣ ಕರಗಿ ಹೋಯಿತು. ಈ ಘಟನೆಯ ಬಳಿಕ ಅಡಿಕೆ, ತೆಂಗಿನಮರ ಹತ್ತುವ ಕಾಯಕದಿಂದ ನಿವೃತ್ತರಾದರು. ಆದರೆ ಕೃಷಿಯನ್ನು ಮುಂದುವರೆಸಿದರು.

ಮಹಾಲಿಂಗ ನಾಯ್ಕ ಒಂದು ಎಕರೆಯಲ್ಲಿ ಅಡಿಕೆ, ತೆಂಗು, ಬಾಳೆ, ಕಾಳುಮೆಣಸಿನ ಕೃಷಿ ಕೈಗೊಂಡಿದ್ದಾರೆ. ಇನ್ನೊಂದು ಎಕರೆಯಲ್ಲಿ ಕಾಡು ಬೆಳೆಸಿದ್ದಾರೆ. ಗೇರು ಕೃಷಿಯೂ ಇದೆ. ಮಣ್ಣಿನ ಟ್ಯಾಂಕಿಯಿಂದ ವಿದ್ಯುತ್ತಿನ ಖರ್ಚಿಲ್ಲದೆ ಗ್ರಾವಿಟಿ ಮೂಲಕ ಅಡಿಕೆ, ತೆಂಗು ಮತ್ತು ಬಾಳೆಗಿಡಗಳಿಗೆ ನೀರು ಉಣಿಸುತ್ತಾರೆ. ಅವರ ತೋಟದಲ್ಲಿ ೩೦೦ ಅಡಿಕೆ, ೨೦೦ ಬಾಳೆ ಗಿಡಗಳಿವೆ. ಹಟ್ಟಿಗೊಬ್ಬರ, ಕಾಂಪೋಸ್ಟ್ ಹೊರತು ಬೇರೆ ಯಾವುದೇ ಗೊಬ್ಬರದ ಬಗ್ಗೆ ಮಹಾಲಿಂಗ ನಾಯ್ಕರಿಗೆ ಗೊತ್ತಿಲ್ಲ. ಜಮೀನಿನಲ್ಲಿ ಇಂಗು ಗುಂಡಿಗಳ ಮೂಲಕ ಜಲಕೊಯ್ಲು ಮಾಡುತ್ತಾರೆ. ನಾಲ್ಕು ವರ್ಷಗಳ ಹಿಂದೆ ಎರಡು ಬೋರ್‌ವೆಲ್ ತೆಗೆಸಿದ್ದಾರೆ. ಮೊದಲ ಬೋರ್‌ವೆಲ್ ೪೦೦ ಅಡಿ ಸಾಗಿದ್ದರೂ ನೀರು ದೊರೆಯಲಿಲ್ಲ. ಎರಡನೇ ಬೋರ್‌ನಲ್ಲಿ ೩೭೦ ಅಡಿ ತಲುಪುವ ಹೊತ್ತಿಗೆ ಒಂದು ಇಂಚು ನೀರು ಸಿಕ್ಕಿದೆ. ಇದೀಗ ಬೋರ್‌ವೆಲ್‌ಗೆ ಪಂಪ್ ಸೆಟ್ ಅಳವಡಿಸಿದ್ದಾರೆ.

ಸಾಲಕ್ಕಾಗಿ ಯಾವುದೇ ಬ್ಯಾಂಕ್ ಮೊರೆ ಹೋಗಿಲ್ಲ. ಕೃಷಿಯಲ್ಲಿ ದೊರೆತ ಆದಾಯದಿಂದ ಸ್ವಂತ ಮನೆ ಕಟ್ಟಿದ್ದಾರೆ. ಮನೆಗೆ ವಿದ್ಯುತ್ ಸೇರಿದಂತೆ ಮೂಲ ಸೌಕರ್ಯಗಳು ಬಂದಿವೆ. ಶಾಲಾ ಕಾಲೇಜುಗಳ ಮೆಟ್ಟಿಲು ಹತ್ತದ ಛಲಗಾರ ಮಹಾಲಿಂಗ ನಾಯ್ಕರಿಗೆ ದುಡಿಮೆಯೇ ಎಲ್ಲವನ್ನು ನೀಡಿದೆ. ಒಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಈ ಕೃಷಿಕನ ಅರ್ಹ ಸಾಧನೆಗೆ ಕೇಂದ್ರದ ಪದ್ಮಶ್ರೀ ಅರಸಿಕೊಂಡು ಬಂದಿದೆ. ಸರ್ಕಾರದ "ಪೀಪಲ್ಸ್ ಪದ್ಮ" ಎನ್ನುವ ಧ್ಯೇಯಕ್ಕೆ ನಿಜವಾದ ಅರ್ಥ ಸಿಕ್ಕಿದೆ.

# 4. ಓದು ಪಠ್ಯ : ಯಂತ್ರಗಳನ್ನು ಕಳಚಿ... 'ಚರಕ'ಗಳನ್ನು ಹಿಡಿದು...

**ಲೇ : ಡಾ.ಪದ್ಮರಾಜ ದಂಡಾವತಿ**

ಶಿವಮೊಗ್ಗದಲ್ಲಿ ಗುರುವಾರ ಮುಖ್ಯಮಂತ್ರಿ ಯಡಿಯೂರಪ್ಪ ೬೦೦ ಕೋಟಿ ರೂಪಾಯಿ ಬಂಡವಾಳದ ಸಿದ್ಧ ಉಡುಪು ಕಾರ್ಖಾನೆಗೆ ಶಂಕುಸ್ಥಾಪನೆ ಮಾಡಿದರು. ಜಿಲ್ಲೆಯ ಹೆಗ್ಗೋಡಿನ 'ಚರಕ' ಕೇಂದ್ರದಲ್ಲಿ ಅದೇ ದಿನ ಕೈಮಗ್ಗ ನೇಕಾರರ ಉತ್ಪನ್ನಗಳ ಮಾರಾಟಗಾರರ ಮತ್ತು ಕೊಳ್ಳುವವರ ಸಭೆ ನಡೆಯಿತು. ಸಿದ್ಧ ಉಡುಪು ಘಟಕ ಯಂತ್ರ ವೈಭವದ್ದು. ಗ್ರಾಮಗಳಿಂದ ಜನರ ವಲಸೆ ಬೇಡುವಂಥದು ಮತ್ತು ಪ್ರಚೋದಿಸುವಂಥದು. 'ಚರಕ' ಜನರನ್ನು ಗ್ರಾಮಗಳಲ್ಲಿಯೇ ಉಳಿಸುವಂಥದು. ವಿದ್ಯುತ್ತೂ ಬೇಡ, ಯಂತ್ರಗಳೂ ಬೇಡ ಎನ್ನುವಂಥದು.

ಹೌದು, ಯಂತ್ರಗಳು ಬೇಡ ಎಂದು ಹೇಳುವುದು ಸುಲಭ. ಅನುಸರಿಸುವುದು ಕಷ್ಟ. ನಾವು ಹಿಂದೆ ಹೋಗಲಾಗದಷ್ಟು ಮುಂದೆ ಬಂದಿದ್ದೇವೆ. ಪರಿಣಾಮ ಗುಡಿ ಕೈಗಾರಿಕೆಗಳು ಒಂದೊಂದೇ ನಾಶವಾಗುತ್ತಿವೆ. ನಮ್ಮ ಹಳ್ಳಿಗಳಲ್ಲಿ ಕಂಬಾರರು, ಕುಂಬಾರರು, ಬಡಗಿಗಳು ಸಿಗುವುದು ಈಗ ಬಹಳ ಕಷ್ಟ. ಸಿಕ್ಕರೂ ಅವರ ಬದುಕು ದುರ್ಭರ. ಕೈಮಗ್ಗಗಳು ಖಾದಿ ಗ್ರಾಮೋದ್ಯೋಗ ಘಟಕಗಳು ಒಂದೊಂದಾಗಿ ಕಣ್ಣು ಮುಚ್ಚಿವೆ. ಕಣ್ಣು ತೆರೆದಿದ್ದರೂ ಬದುಕಿದ ಲಕ್ಷಣಗಳೇನೂ ಕಾಣುವುದಿಲ್ಲ. ಆದರೂ ಪ್ರವಾಹದ ವಿರುದ್ಧ ಈಜುವ ಒಂದು ಪ್ರವೃತ್ತಿ, ಬಯಕೆ, ಒತ್ತಡ ಎಲ್ಲೋ ಎಲ್ಲರನ್ನೂ ಕಾಡುತ್ತದೆ. ಅದು 'ಮರಳಿ ಮಣ್ಣಿ'ಗೆ ಹೋಗುವ ಬಯಕೆ. ಆ ಬಯಕೆಯನ್ನು ಬೆಂಬತ್ತಿ ಮರಳಿ ಹಳ್ಳಿಗೆ ಹೋದವರು ವಿರಳ. ಕನ್ನಡ ಪ್ರಸಿದ್ಧ ಲೇಖಕ, ನಾಟಕಕಾರ ಪ್ರಸನ್ನ ಅಂಥ ಕೆಲಸ ಮಾಡಿದ್ದಾರೆ. ದೆಹಲಿಯಂಥ ದೇಶದ ರಾಜಧಾನಿಯಲ್ಲಿ ಸಾಕಷ್ಟು ಸಂಬಳ ತರುವ ಉನ್ನತ ಕೆಲಸದಲ್ಲಿ ಇದ್ದಾಗಲೂ 'ನನ್ನ ಬೇರುಗಳು ಇಲ್ಲಿ ಇಲ್ಲ ಎಂದೋ' ಅಥವಾ 'ನಾನು ಮಾಡಬೇಕಾದುದು ಇದಲ್ಲ' ಎಂದೋ ಬಿಟ್ಟು ಬಂದವರು ಅವರು. ಅದು ೨೨ ವರ್ಷಗಳ ಹಿಂದಿನ ಕಥೆ. ಬಂದ ನಾಲ್ಕು ವರ್ಷಗಳ ನಂತರ ಅವರು ಕೈಗೆ ತೆಗೆದುಕೊಂಡುದು 'ಚರಕ'ವನ್ನು. ಈಗ ಚರಕ ಒಂದು ದೊಡ್ಡ ಸಂಸ್ಥೆಯಾಗಿ ಬೆಳೆದು ನಿಂತಿದೆ. ನೂರಾರು ಮಂದಿ ಹೆಣ್ಣು ಮಕ್ಕಳಿಗೆ ಬದುಕು ಕೊಟ್ಟಿದೆ. ಯಂತ್ರ ನಾಗರಿಕತೆಗೆ ತನ್ನದೇ ಆದ ರೀತಿಯಲ್ಲಿ ಉತ್ತರವನ್ನೂ ಕೊಡುತ್ತಿದೆ.

ಪ್ರಸನ್ನ, ದೆಹಲಿಯಲ್ಲಿ ಇದ್ದರೂ ಶಿವಮೊಗ್ಗದ ದಟ್ಟ ಕಾಡು ಅವರನ್ನು ಕಾಡುತ್ತಿತ್ತು. ಊರಿನಲ್ಲಿಯೇ ಏನಾದರೂ ಸಾಹಿತ್ಯ ಪಾಹಿತ್ಯ ಎಂದು ಇದ್ದುಕೊಂಡರಾಯಿತು ಎಂದು ಊರಿಗೆ ಬಂದರು. ಇವರಿಗೆ ಕೆ.ವಿ.ಸುಬ್ಬಣ್ಣ ಒಂದಿಷ್ಟು ಜಾಗ ತೆಗೆದಿಟ್ಟಿದ್ದರು. ಅಲ್ಲಿ ಪ್ರಸನ್ನ ಮೊದಲು ಆರಂಭಿಸಿದ್ದು 'ಕವಿ–ಕಾವ್ಯ' ಟ್ರಸ್ಟ್. ಕೆಲ ಕಾಲ ಸಾಹಿತ್ಯ, ವಿಚಾರ ಸಂಕಿರಣ ಇತ್ಯಾದಿ ಮಾಡಿದ್ದಾಯಿತು. ಆದರೆ, ಸುತ್ತ ಮುತ್ತ ನಡೆಯುತ್ತಿದ್ದ ವಿದ್ಯಮಾನ ಅವರನ್ನು ಕಾಡತೊಡಗಿತು. ಜನರಿಗೆ ಬಡತನ, ಕೃಷಿ ಮಾಡಲು ಜಮೀನು ಇಲ್ಲ. ಅದಕ್ಕಾಗಿ ಕಾಡು ಕಡಿಯುವುದು. ಕಡಿದ ಕಾಡು ಕೂಡ ಕೃಷಿಗೆ ಸಾಕಾಗದೇ ಇದ್ದುದು. ಅದರಿಂದ ನಿಸರ್ಗ ಹಾಳಾದುದು. ಹತಾಶೆ ಬೆಳೆಯುತ್ತಿದ್ದುದು... ಇದು ಆ ವಿದ್ಯಮಾನ.

ಈ ಜನರನ್ನು ಕೃಷಿಯಲ್ಲದ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿದರೆ ಕಾಡು ಉಳಿದೀತು. ಅವರಿಗೂ ಒಂದು ಸುಸ್ಥಿರ ಆರ್ಥಿಕ ಬಲ ಬಂದೀತು ಎಂದುಕೊಂಡು ನೇಕಾರಿಕೆಯಲ್ಲಿ ಅವರನ್ನು ತೊಡಗಿಸಲು ಪ್ರಸನ್ನ ಯೋಚಿಸಿದರು. 'ಚರಕ' ಸಂಸ್ಥೆ ಕಟ್ಟಿದರು. 'ಹಳ್ಳಿಗಳ ಗಂಡುಮಕ್ಕಳು ಎಷ್ಟು ಹಾಳಾಗಿದ್ದಾರೆ ಎಂದರೆ ಅವರನ್ನು ನೆಚ್ಚಿಕೊಂಡು ಏನನ್ನೂ ಮಾಡಲು ಸಾಧ್ಯವಿಲ್ಲ. ಚಟ, ಸಣ್ಣತನ, ರಾಜಕೀಯ, ಅಲೆದಾಟ ಅವರನ್ನು ಪೂರ್ಣ ಹಾಳು ಮಾಡಿಬಿಟ್ಟಿವೆ. ಹೆಣ್ಣು ಮಕ್ಕಳನ್ನು ತೊಡಗಿಸಿಕೊಂಡರೆ ಏನನ್ನಾದರೂ ಮಾಡಲು ಸಾಧ್ಯ. ಅವರ ಮನೆ ಉಳಿಸಲು ಸಾಧ್ಯ ಎಂದುಕೊಂಡು 'ಚರಕ' ಸಂಸ್ಥೆಯನ್ನು ಮಹಿಳೆಯರ ಕೈಗೇ ಕೊಡಲು ನಿರ್ಧರಿಸಿದೆವು. ಆದರೆ ಹೆಣ್ಣು ಮಕ್ಕಳು ಮೂಕರಾಗಿದ್ದಾರೆ. ಅವರನ್ನು ಮಾತಿಗೆ, ಕ್ರಿಯೆಗೆ ಹಚ್ಚುವುದು ಕಷ್ಟ. ಆದರೆ, ಒಂದು ಸಾರಿ ಅವರು ಕೆಲಸ ಹಿಡಿದರೆ ಅದನ್ನು ಪಟ್ಟಾಗಿ ಕುಳಿತು

ಮಾಡುತ್ತಾರೆ. ಗಂಡಸರೋ ಶುದ್ಧ ಕಪ್ಪೆಗಳು. ಒಂದು ಕಡೆ ಕೂಡುವುದಿಲ್ಲ. ಯಾವುದನ್ನೂ ನೆಟ್ಟಗೆ ಮಾಡುವುದಿಲ್ಲ....' ಪ್ರಸನ್ನ ಹೇಳುತ್ತ ಹೋದರು.

'ಆ ಹೆಣ್ಣು ಮಕ್ಕಳಿಗೆಲ್ಲ ಟೇಲರಿಂಗ್ ತರಬೇತಿ ಕೊಡಿಸಿ, ಸುತ್ತಲಿನ ಊರುಗಳಿಂದ ನೂಲು ತರಿಸಿ ಮೊದಲು ಜುಬ್ಬಾ ಹೊಲಿಸಿದೆ. ಮೊದಲ ಗ್ರಾಹಕ ನಾನೇ ಆಗಿರಬೇಕು ಎಂದು. ಜುಬ್ಬಾ ಹೊಲೆದು ಉಳಿದ ಬಟ್ಟೆ ತುಂಡುಗಳನ್ನು ಹಾಳು ಮಾಡಬಾರದು ಎಂದು ಕನ್ನಡಕದ ಪೌಚುಗಳನ್ನು, ಮಹಿಳೆಯರ ಪರ್ಸುಗಳನ್ನು, ಕೌದಿಗಳನ್ನು ಹೊಲೆದೆವು. ಐದು ವರ್ಷಗಳ ಕಾಲ ನಮ್ಮ ವಸ್ತ್ರಗಳಿಗೆ ಗ್ರಾಹಕರು ಸಿಗುವುದು ಕಷ್ಟವಾಯಿತು. ಯಾರಾದರೂ ನನಗೆ ಭಾಷಣಕ್ಕೆ ಕರೆದರೆ ಸಂಭಾವನೆ ಬದಲು ಪ್ರಯಾಣಕ್ಕೆ ಒಂದು ಟ್ಯಾಕ್ಸಿ ಕೊಡಿ ಎಂದು ಕೇಳುತ್ತಿದ್ದೆ. ಆ ಟ್ಯಾಕ್ಸಿಯ ಡಿಕ್ಕಿಯಲ್ಲಿ ನಮ್ಮ ಉತ್ಪನ್ನಗಳನ್ನು ಹಾಕಿಕೊಂಡು ಒಬ್ಬಿಬ್ಬರು ಕೆಲಸಗಾರರನ್ನು ಕರೆದುಕೊಂಡು ಸಭೆಗೆ ಹೋಗುತ್ತಿದ್ದೆ. ನಾನು ಒಳಗೆ ಭಾಷಣ ಮಾಡುತ್ತಿದ್ದಾಗ ಹೊರಗೆ ಈ ವಸ್ತ್ರಗಳ ಮಾರಾಟ ನಡೆಯುತ್ತಿತ್ತು. ಭಾಷಣ ಮಾಡುವಾಗ ಈ ವಸ್ತ್ರಗಳನ್ನು ಕೊಳ್ಳಿರಿ ಎಂದು ನಾನೂ ಹೇಳುತ್ತಿದ್ದೆ. 'ಚರಕ'ಕ್ಕೆ ಒಂದಿಷ್ಟು ಬಲ ಬಂತು ಎನಿಸಿದಾಗ ಆ ಜಾಗದಲ್ಲಿ ಕಟ್ಟಿದ ಕಟ್ಟಡದ ಕೀಲಿ ಕೈಯನ್ನು ಚರಕ ಮಹಿಳಾ ಸಹಕಾರಿ ವಿವಿಧೋದ್ದೇಶ ಸಂಘದ ಕಾರ್ಯದರ್ಶಿಣಿಗೆ ಕೊಟ್ಟೆವು. ಇನ್ನು ನೀವೇ ಈ ಸಂಘವನ್ನು ನಡೆಸಿಕೊಂಡು ಹೋಗಬೇಕು ಎಂದೆವು. ಇಲ್ಲಿ ಉತ್ಪಾದನೆಯಾದ ವಸ್ತುಗಳ ಮಾರಾಟಕ್ಕೆ 'ದೇಸಿ (ಡೆವಲಪ್ಪಿಂಗ್ ಇಕಲಜಿಕಲಿ ಸಸ್ಟೇನೆಬಲ್ ಇಂಡಸ್ಟ್ರೀಸ್)' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದೆವು. ಈ 'ದೇಸಿ' ಮಳಿಗೆಗಳು ಈಗ ವಾರ್ಷಿಕ ಐದು ಕೋಟಿ ರೂಪಾಯಿ ವಹಿವಾಟು ಮಾಡುತ್ತಿವೆ. ಬೆಂಗಳೂರು, ಧಾರವಾಡ, ಶಿವಮೊಗ್ಗಗಳಲ್ಲಿ ಈ ಮಳಿಗೆಗಳು ಇವೆ. 'ಚರಕ' ಆವರಣದಲ್ಲಿ ಕೈಮಗ್ಗ ನೇಕಾರಿಕೆಗೆ ಸಂಬಂಧಿಸಿದಂತೆ ಒಟ್ಟು ೧೫ ಬಗೆಯ ಚಟುವಟಿಕೆಗಳು ನಡೆಯುತ್ತಿವೆ. ಅದರಲ್ಲಿ ಬಹಳ ಮುಖ್ಯವಾದುದು ಬಟ್ಟೆಗಳಿಗೆ ನೈಸರ್ಗಿಕ ಬಣ್ಣದಿಂದಲೇ ಡೈಯಿಂಗ್ ಮಾಡುತ್ತಿರುವುದು. ನೇಕಾರಿಕೆ ಎಂಬುದು ನಮಗೆ ೫,೦೦೦ ವರ್ಷಗಳಿಂದ ಗೊತ್ತಿದ್ದ ಕಲೆ. ೨,೦೦೦ ವರ್ಷಗಳಷ್ಟು ಹಿಂದೆ ರೋಮ್ ದೇಶಕ್ಕೆ ಭಾರತದಿಂದಲೇ ಬಟ್ಟೆ ರಫ್ತಾಗುತ್ತಿತ್ತು. ರಫ್ತಾದ ಬಟ್ಟೆಗೆ ಅವರು ನಮಗೆ ಚಿನ್ನ ಕೊಡಬೇಕಿತ್ತು. 'ಭಾರತ ಚಿನ್ನ ತೆಗೆದುಕೊಂಡು ನಮಗೆ ಬಟ್ಟೆ ಕೊಡುತ್ತಿದೆ. ಆ ದೇಶದಿಂದ ಬಟ್ಟೆ ತೆಗೆದುಕೊಳ್ಳುವುದು ಬೇಡ' ಎಂದು ರೋಮ್‌ನ ಸೆನೆಟ್‌ನಲ್ಲಿ ನಿರ್ಣಯ ಅಂಗೀಕಾರವಾಯಿತು. ಸೆನೆಟ್‌ನಲ್ಲಿ ಅವರು ಪಾಸು ಮಾಡಿದ ಇನ್ನೊಂದು ನಿರ್ಣಯ. 'ಭಾರತದಿಂದ ರಫ್ತಾಗುವ ಮಸ್ಲಿನ್ ಬಟ್ಟೆಯಲ್ಲಿ ನಮ್ಮ ಹೆಂಗಸರ ಮೈಯೆಲ್ಲ ಕಾಣುತ್ತದೆ. ಅದಕ್ಕಾಗಿ ಮಸ್ಲಿನ್ ಬಟ್ಟೆ ಖರೀದುಸುವುದು ಬೇಡ' ಎಂದು. ಆಗ ಖಂಡಿತ ಯಂತ್ರಗಳು ಇರಲಿಲ್ಲ!

'ಇದೀಗ 'ಚರಕ' ಸಂಸ್ಥೆಯ ಪಕ್ಕದಲ್ಲಿಯೇ ಎಂಟು ಎಕರೆ ಜಾಗ ಖರೀದಿಸಿ ಅಲ್ಲಿ ಪ್ರೀ ಲೂಮ್ ಪ್ರೊಸೆಸಿಂಗ್ ಸಮುಚ್ಚಯ, ತರಬೇತಿ, ಸಗಟು ಮಾರುಕಟ್ಟೆಗೆ ವ್ಯವಸ್ಥೆ ಮಾಡುತ್ತಿದ್ದೇವೆ. ನಿಮಗೆ ನಂಬಿಕೆಯಾಗಲಿಕ್ಕಿಲ್ಲ. ಈ ಊರಿನಲ್ಲಿ 'ಚರಕ ಅಂಗಡಿ' ಇದೆ. ಅಲ್ಲಿ ನಮ್ಮ ಉತ್ಪನ್ನಗಳನ್ನೇ ಮಾರಾಟ ಮಾಡುತ್ತೇನೆ. ದಿನಕ್ಕೆ ನಾನೂರು ರೂಪಾಯಿ ವ್ಯಾಪಾರ ಆದರೆ ಸಾಕು ಎಂದುಕೊಂಡಿದ್ದೆವು. ಈಗ ಆರು ಸಾವಿರ ರೂಪಾಯಿ ವ್ಯಾಪಾರ ಆಗುತ್ತಿದೆ. ನಿಮಗೆ ಇದೂ ಗೊತ್ತಿರಲಿಕ್ಕಿಲ್ಲ. ಕೈಮಗ್ಗ ಉತ್ಪನ್ನಗಳ ಹೆಸರಿನಲ್ಲಿ ಶೇ. ೭೦ರಷ್ಟು ಬಟ್ಟೆ ಬರುತ್ತಿರುವುದು ವಿದ್ಯುತ್ ಮಗ್ಗದ್ದೇ. ಇದು ಖಾದಿಗೂ ಅನ್ವಯ. ಈಗಂತೂ ಖಾದಿ ಹೆಸರಿನಲ್ಲಿ ಬಂದ ಮಳಿಗೆಗಳಲ್ಲಿ ಎಲ್ಲಿಯೂ ಕೈಮಗ್ಗದ ಉತ್ಪನ್ನ ಸಿಗುವುದಿಲ್ಲ. ಅದೆಲ್ಲ ವಿದ್ಯುತ್ ಮಗ್ಗದ್ದೇ. ಕರ್ನಾಟಕ ಕೈಮಗ್ಗ ಮಂಡಲಿ ಸ್ಥಾಪಿಸಿದಾಗ ಇದ್ದ ಉದ್ದೇಶಗಳೆಲ್ಲ ಹೇಗೆ ಮರೆಯಾಗಿ ಹೋದುವು ಎಂದರೆ ಗೊತ್ತೇ ಆಗಲಿಲ್ಲ...' ಪ್ರಸನ್ನ ಹೇಳುತ್ತಲೇ ಇದ್ದರು.

'ಚರಕ' ಸದಸ್ಯರಾಗಿರುವ ಸ್ವ ಸಹಾಯ ಗುಂಪಿನ ಮಹಿಳೆಯರಿಗೆ ಅವರು ಮಾಡಿದ ಕೆಲಸಕ್ಕೆ ಕೂಲಿ ಎಂದು ಹೇಳಬಹುದಾದ ಹಣ ಮಾತ್ರ ಸಿಗುತ್ತಿಲ್ಲ. ಗುಜರಾತಿನ 'ಆನಂದ'ದ ಡೇರಿಗೆ ಹಾಲು ಪೂರೈಸುವ ರೈತರಿಗೆ ಹಾಲು ಮಾತ್ರವಲ್ಲದೇ ಅದರ ಉಪ ಉತ್ಪನ್ನಗಳಿಗೂ ತಕ್ಕ ಹಣ ಸಿಗುತ್ತದೆ. ಅದೇ ಮಾದರಿಯನ್ನು ಇಲ್ಲಿಯೂ ಅನುಸರಿಸಲಾಗಿದೆ. ಜತೆಗೆ ಕ್ಯಾಂಟೀನ್, ವಿಮೆ, ಬೋನಸ್ ಸೌಲಭ್ಯವೂ ಇದೆ. 'ಚರಕ'ದಲ್ಲಿ ಪದಾಧಿಕಾರಿಗಳಾಗಿ ಕೆಲಸ ಮಾಡಿದವರೇ 'ದೇಸಿ' ಮಳಿಗೆಗಳಲ್ಲಿ ಮ್ಯಾನೇಜರ್ ಹುದ್ದೆ ನಿಭಾಯಿಸುತ್ತಾರೆ. 'ಚರಕ'ದಲ್ಲಿ ಸಂಸ್ಥೆ ನಡೆಸಿದ ಅನುಭವ ಇಲ್ಲಿ ಅವರ ನೆರವಿಗೆ ಬರುತ್ತದೆ. ಪ್ರತಿ ವರ್ಷ 'ಚರಕ' ಉತ್ಸವ ನಡೆಯುತ್ತದೆ. ಅಲ್ಲಿ ಈ ಹೆಣ್ಣು ಮಕ್ಕಳೇ ನಾಟಕ ಆಡುತ್ತಾರೆ. ಈ ವರ್ಷ

'ಅಂಧೇರಿ ನಗರ ಚೌಪಟ್ ರಾಜಾ' ನಾಟಕ ರಂಗ ಏರಿತು. ಬಹುಶಃ ಇದು ಸಾರ್ವಕಾಲಿಕ ನಾಟಕ ಅನಿಸುತ್ತದೆ! ಎಲ್ಲ ಕಾಲದಲ್ಲೂ ಅಂಧೇರಿ ನಗರಗಳು ಚೌಪಟ್ ರಾಜರು ಇದ್ದೇ ಇರುತ್ತಾರೆ. 'ಧರ್ಮ ಮತ್ತು ಸಮಾಜ ಕಾರ್ಯ' ಕುರಿತು ವಿಚಾರ ಸಂಕಿರಣವೂ ನಡೆಯಿತು (ಇಂದು ಎರಡನೇ ದಿನದ ವಿಚಾರ ಸಂಕಿರಣ ನಡೆಯಲಿದೆ). ಬಹುತೇಕ ಮಠಗಳು ಈಗ ಧರ್ಮ ಮತ್ತು ರಾಜಕೀಯ ಕಾರ್ಯದಲ್ಲಿ ತೊಡಗಿರುವ ಕಾರಣ ಯಾವ ಮಠಾಧೀಶಧರನ್ನೂ ಸಂಕಿರಣಕ್ಕೆ ಕರೆಯಲಿಲ್ಲ! ದೀವರ ಹೆಂಗಸರು ಬಿಡಿಸಿದ ಹಸೆಯ ಚಿತ್ರಗಳೂ ಉತ್ಸವದ ಗೋಡೆಗಳ ಮೇಲೆ ಅಲಂಕೃತವಾಗಿದ್ದವು.

ಕನ್ನಡದ ಲೇಖಕರಲ್ಲಿ ಕಾರಂತರನ್ನು ಬಿಟ್ಟರೆ ಹೀಗೆ ಸಮುದಾಯದ ಕೆಲಸಗಳಲ್ಲಿ ದೊಡ್ಡದಾಗಿ ತೊಡಗಿದ ಲೇಖಕರು ಇಬ್ಬರೇ. ಒಬ್ಬರು ಕೆ.ವಿ.ಸುಬ್ಬಣ್ಣ. ಸುಬ್ಬಣ್ಣ ಮಾಡಿದ ಕೆಲಸ ಮ್ಯಾಗ್ಸೆಸೆ ಪ್ರಶಸ್ತಿ ಅವರನ್ನು ಹುಡುಕಿಕೊಂಡು ಹೆಗ್ಗೋಡಿಗೆ ಬರುವಂತೆ ಮಾಡಿತು. ಇನ್ನೊಬ್ಬರು ಪ್ರಸನ್ನ. ಹೆಗ್ಗೋಡಿನ ನೀನಾಸಂನ ಕೂಗಳತೆ ದೂರದಲ್ಲಿ ಪ್ರಸನ್ನ ಪುಟ್ಟ ಕ್ರಾಂತಿಯನ್ನೇ ಮಾಡಿದ್ದಾರೆ. ಸಾಹಿತ್ಯದ ಆದರ್ಶಗಳು ಕ್ರಿಯೆಯಲ್ಲಿ ಮೂಡಿದ ಬಗೆ ಅದು. ಪ್ರಸನ್ನ ಅವರನ್ನು ಕೇಳಿದೆ: 'ನೀವು ಕೈಮಗ್ಗ ಮಾರಾಟಗಾರರ ಕೊಳ್ಳುವವರ ಸಭೆ ಮಾಡಿದಾಗಲೇ ಶಿವಮೊಗ್ಗದಲ್ಲಿ ಭಾರಿ ಸಿದ್ಧ ಉಡುಪು ಕಾರ್ಖಾನೆಗೆ ಶಂಕು ಸ್ಥಾಪನೆ ಆಗಿದೆ. ಸಂದೇಶ ಏನು?' ಎಂದು. 'ದೊಡ್ಡಬಳ್ಳಾಪುರದಲ್ಲಿ ಈಗಾಗಲೇ ನಿರ್ಮಿಸಿರುವ ಸಿದ್ಧ ಉಡುಪು ಘಟಕ ನೇಕಾರರ ಸಮಾಧಿ ಮೇಲೆ ನಿಂತಿದೆ. ಶಿವಮೊಗ್ಗ ಘಟಕ ಯಾವಾಗ ಕೆಲಸ ಆರಂಭಿಸುತ್ತದೆ ಗೊತ್ತಿಲ್ಲ. ಆದರೆ, ಅಲ್ಲಿ ಬಳಸುವ ಬಟ್ಟೆಯಲ್ಲಿ ಶೇ.೧೦ರಷ್ಟು ಬಟ್ಟೆ ಕೈಮಗ್ಗದ್ದಾಗಿರಬೇಕು ಎಂದು ಯಡಿಯೂರಪ್ಪ ಆದೇಶಿಸಿದರೂ ಸಾಕು ನೇಕಾರರಿಗೆ ದೊಡ್ಡ ಉಪಕಾರ ಆಗುತ್ತದೆ' ಎಂದರು ಪ್ರಸನ್ನ. ಅವರು ಹೇಳುವ ಮಾತು ಹಳ್ಳಿಗಳನ್ನು ಉಳಿಸುವ ಮಾತು. ಅದು ಯಡಿಯೂರಪ್ಪ ಅವರಿಗೆ ಕೇಳುತ್ತದೆಯೇ? ಕೇಳಿಸಬೇಕು.